
ಕೊಡಗು ಸಂಗಾತಿ

ಅಕ್ಟೋಬರ್ 1 ರಿಂದ 30, 2001 ಪಾಕ್ಷಿಕ ಪತ್ರಿಕೆ (ನಿರ್ನಾಲ್ 15-31 - ಬೊಂತಲ್ 1-14)

ನಂ. ೩೫, ಸವಿತಾ ನಿಲಯ, ೧ನೇ ಕ್ರಾಸ್, ೬ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - ೫೭೦ ೦೧೨

ಸಂಪಾದಕಿ : ಪಟ್ಟಡ ಶೀಲಾಮಣಿ Registered : 10-01-96 TCI Kar. 09592 ಕನ್ನಡ ಮತ್ತು ಹಳೆಗನ್ನಡದಲ್ಲಿ ಪ್ರಕಟಿತ

Reg. No. KA/SK/MYS-88 ಸಂಪುಟ : 5 ಸಂಚಿಕೆ : 19-20 ಪುಟಗಳು : 24 ಬೆಲೆ ರೂ. : 6-00



ಕರ್ನಾಟಕ ರಾಜ್ಯಪಾಲೆಯಿಂದ 1999ರ ಏಕಲವ್ಯ ಪ್ರಶಸ್ತಿ ಸ್ವೀಕರಿಸಿದ ಕೊಡಗಿನ ಉಳುವಾರನ ದೀಪಕ್

ವಿವರ : ಒಳಪುಟದಲ್ಲಿ.

2ನೇ ವರ್ಷದ ಹುಟ್ಟು ಹಬ್ಬದ ಶುಭಾಶಯಗಳು




ಚೆರಿಯ ಮನೆ ಸಂವೃದ್ಧಿ ಲೋಕೇಶ್

ಅಮೇರಿಕ, ಕ್ಯಾಲಿಫೋರ್ನಿಯಾದ ಸ್ಯಾನೋಸೆ ನಗರದಲ್ಲಿ ತನ್ನ ಪ್ರೀತಿಯ ಮಾತಾ ಪಿತೃಗಳಾದ ಲೀಲಾವತಿ ಹಾಗೂ ಲೋಕೇಶ್‌ರವರ ಜೊತೆ ಬೆಳೆಯುತ್ತಿರುವ ಮುದ್ದಿನ ಕಣ್ಮಣಿಗೆ ತಾರೀಖು 23-09-2-001 ರಂದು 2ನೇ ಹುಟ್ಟು ಹಬ್ಬದ ನಮ್ಮೆಲ್ಲರ ಶುಭಾಶಯ ಹಾಗೂ ಆಶೀರ್ವಾದಗಳು

ಅಜ್ಜಿ : ಚೆರಿಯಮನೆ ಶ್ರೀಮತಿ ಪ್ರೇಮ ಶಿವರಾಮು, ಬೆಂಗಳೂರು.
ತಾತಾ : **ಬೈತಡ್ಕ ಎ. ಜೋಯಪ್ಪ**, ಡಿ. ಎಸ್. ಪಿ., ಬೆಂಗಳೂರು
ಅಜ್ಜಿ : **ಡಾ. ಎಂ. ಎನ್. ಬೋಜಮ್ಮ**, ಸರ್ಜನ್,
ಫಿಜಿಷಿಯನ್ ಮತ್ತು ಹೃದ್ರೋಗ ತಜ್ಞರು, ಬೆಂಗಳೂರು
ಚಿಕ್ಕಮ್ಮ : **ಬಿ. ಜೆ. ಲಕ್ಷ್ಮಿ** (ಎಂ.ಬಿ.ಬಿ.ಎಸ್.)
ಮಾವ : **ಬಿ. ಜೆ. ಲೋಹಿತ್**, (ಬಿ. ಇ.)

ಅಭಿನಂದನೆಗಳು



ಪ್ರಮೋದ್ ಬಾರನ

ದಿನಾಂಕ 13-9-2001ರಂದು ನಡೆದ ಸೋಮವಾರಪೇಟೆಯ ಬಿ.ಟಿ.ಸಿ.ಜಿ. (B.T.C.G.) ಕಾಲೇಜಿನ ಚುನಾವಣೆಯಲ್ಲಿ ಪ್ರಮೋದ್ ಬಿ. ಎಸ್. ಅವರು 2001-2002 ನೇ ಸಾಲಿನ ಕಾಲೇಜಿನ ಉಪಾಧ್ಯಕ್ಷರಾಗಿ ಆಯ್ಕೆಯಾಗಿದ್ದಾರೆ. ಇವರು ಕಾಜೂರು ಗ್ರಾಮದ ಬಾರನ ಸುರೇಶ ಹಾಗೂ ಮೋಹಿನಿಯವರ ಪುತ್ರರಾಗಿದ್ದಾರೆ. ಮುಂದೆ ಇವರ ಸಾರ್ವಜನಿಕ ಭವಿಷ್ಯವೂ ಉಜ್ವಲವಾಗಿರಲೆಂದು ಹಾರೈಸುವ

ಸ್ನೇಹಿತರು ಮತ್ತು ವಿದ್ಯಾರ್ಥಿ ವೃಂದದವರು
ಬಿ.ಟಿ.ಸಿ.ಜಿ. ಕಾಲೇಜು, ಸೋಮವಾರ ಪೇಟೆ ತಾ||

ಅಮೇರಿಕಾದಲ್ಲಿ ಆದರ್ಶನ ಆಗಮನ



ಆದರ್ಶ ಪ್ರಹ್ಲಾದ್ ಪೊಕ್ಕುಳಂಡ್ರ
ಹುಟ್ಟಿದ ತಾರೀಖು : 9-5-2001

ಕನ್ಸಾಸ್ ಸಿಟಿಯಲ್ಲಿ ಸಾಫ್ಟ್‌ವೇರ್ ಇಂಜಿನಿಯರ್ ಆಗಿರುವ, ಪೊಕ್ಕುಳಂಡ್ರ ಪ್ರಹ್ಲಾದ್ ಮತ್ತು ಸ್ಮಿತಾ ದಂಪತಿಗಳ ಬಾಳಿನಾಗಸದಲ್ಲಿ ಬೆಳದಿಂಗಳಿನಂತೆ ಆಗಮಿಸಿದ ನೀನು, ಹೆಸರಿಗೆ ತಕ್ಕಂತೆ ಇದ್ದು, ನಿನ್ನ ಅಪ್ಪ ಅಮ್ಮಂಗೆ ಕೀರ್ತಿ ತಂದು, ಚಿರಾಯುವಾಗಿರು ಎಂದು ಆಶೀರ್ವದಿಸುವ,

ಅವ್ವ, ತಾತಾ : **ಪೊಕ್ಕುಳಂಡ್ರ ಪದ್ಮಾವತಿ ಮತ್ತು ಅಪ್ಪಾಜಿ**
ಚೆರಿಯಮನೆ ಶಾರದ ಮತ್ತು ರಾಮಚಂದ್ರ
ಚಿಕ್ಕಪ್ಪಂದಿರು : **ಶ್ರೀಮತಿ ಮತ್ತು ಶ್ರೀ ಪೊಕ್ಕುಳಂಡ್ರ ಯೋಗೇಶ್,**
ಶ್ರೀ ಪೊಕ್ಕುಳಂಡ್ರ ದೇವಾನಂದ್
ಮಾವ : **ಚೆರಿಯಮನೆ ಡಾ|| ಪ್ರಶಾಂತ್**

ಕೊಡಗು ಮತ್ತು ದಕ್ಷಿಣ ಕನ್ನಡ ಗೌಡ ಸಮಾಜ ಬೆಂಗಳೂರು

ಬಹುಮಾನಗಳ ಡ್ರಾ ದಿನಾಂಕ **16-09-2001** ಸ್ಥಳ ಜಸ್ಮಾ ಭವನ

ಬಂಪರ್ ಬಹುಮಾನ **524** ರೂ. **10,000/-**

1.ನೇ ಬಹುಮಾನ **5178**	ರೂ. **6,000/-**	2. ನೇ ಬಹುಮಾನ **5327**	ರೂ. **3,000/-**
3. ನೇ ಬಹುಮಾನ **869**	ರೂ. **1,500/-**	ಸಮಾಧಾನಕರ ಐದು ಬಹುಮಾನ	ರೂ. **500/-** ರಂತೆ
		3691, 3379, 5927, 355, 5954.	

ವಿಜೇತರು ಬಹುಮಾನವನ್ನು 16-9-2001 ರಿಂದ ಒಂದು ತಿಂಗಳೊಳಗೆ ಪಡೆದುಕೊಳ್ಳುವಂತೆ ಕೋರಿದೆ. ನಂತರ ಪರಿಗಣಿಸಲಾಗುವುದಿಲ್ಲ.

ಅಧ್ಯಕ್ಷರು ಮತ್ತು ಕಾರ್ಯಕಾರಿ ಮಂಡಳಿ ಸದಸ್ಯರು.

2001, ಸೆಪ್ಟೆಂಬರ್ 1 ರಿಂದ 30ರ ತನಕ

ಒಳನೋಟ

ಚಂದಾ ಕಳುಹಿಸುವ ಮತ್ತು ಜಾಹೀರಾತು ಪ್ರಸಾರ ಕಛೇರಿ	ಕೊಡಗು ಸಂಗಾತಿ, 35,"ಸವಿತಾ ನಿಲಯ", 1ನೇ ಕ್ರಾಸ್, 4ನೇ ಬ್ಲಾಕ್, ಜಯಲಕ್ಷ್ಮಿಪುರಂ, ಮೈಸೂರು - 12. ಫೋನ್ : 0821/516771
ಮಡಿಕೇರಿಯಲ್ಲಿ ಸಂಗಾತಿ ಕಛೇರಿ ಚಿಹ್ನೆ, ಹಸೆಮಣೆ / ಶುಭಾಶಯ ಕಾರ್ಡ್ಸ್ / ಕ್ಯಾಸೆಟ್ ಕೀ ಚೈನ್ ಲಭ್ಯ	ಬೈತಡ್ಕ ಜಾನಕಿ ಬೆಳ್ಳಪ್ಪ, ನಂ. 21-16 ಎಲ್. ಐ. ಸಿ. ಹತ್ತಿರ, ರೇಸ್ ಕೋರ್ಸ್ ರಸ್ತೆ, ಮಡಿಕೇರಿ, ಫೋನ್ : 08272/28047
ಕುಶಾಲ ನಗರ	ಕುಂಭಗೌಡನ ಸೋಮಣ್ಣ, ಮಯೂರ ಕೋಲ್ಡ್ ಸ್ಟೋರೇಜ್, ಮುಖ್ಯ ರಸ್ತೆ, ಕುಶಾಲನಗರ - 571 234 ಫೋನ್ : 08276/73370
ಬೆಂಗಳೂರು ಮಹಾನಗರ	ಕಲ್ಲುಮುಟ್ಲು ಬಸಪ್ಪ, ನಂ. 37, 3ನೇ ಮೇನ್, ನಂಜಪ್ಪ ಬ್ಲಾಕ್, ಕೆಂಪೇಗೌಡ ನಗರ, ಬೆಂಗಳೂರು -19, ಫೋನ್ : 080/6500946

ಚಂದಾ ವಿವರ : ಜೀವಾವಧಿ ಸದಸ್ಯತನ - 2000 ರೂ., ಬಿಡಿ ಪ್ರತಿ - 6 ರೂ.

ವಾರ್ಷಿಕ ಚಂದಾ - 150 ರೂ. (ಅಂಚೆ ವೆಚ್ಚ ಸೇರಿ), ಒಲೆಗೊಂದರಂತೆ ಸದಸ್ಯರಾಗಿ ಕೊಂಡು ಓದಿ.

ಸಂಪಾದಕೀಯ : ಕೊಡಗಿನಲ್ಲಿ ಹಸರು ಹುಲ್ಲು ದಾಸ್ತಾನದ ಕೊರತೆ

ಕೊಡಗಿನ ಕಾಡುಗಳು 50-60 ವರ್ಷದ ಹಿಂದೆ ಯಥೇಚ್ಛವಾದ ಹಸಿರು ಹುಲ್ಲು ಹೊಂದಿದ್ದ ಕಾಲವಾಗಿತ್ತು. ಈಗ ಈ ಕಾಡುಗಳೆಲ್ಲವನ್ನು ಕಾಫಿ ತೋಟ ಮಾಡಿದುದರ ಕಾರಣ ಕಾಡಿನಲ್ಲಿ ಬೆಳೆಯುತ್ತಿದ್ದ ಹುಲ್ಲು ನಾಶವಾಗಿ ರೈತರು ತಮ್ಮಲ್ಲಿದ್ದ ಪಶುಗಳನ್ನು ಮಾರಿ ಒಂದು ಕುಟುಂಬದಲ್ಲಿ ಉಳುವುದಕ್ಕೆ ಬೇಕಾದ ಎತ್ತುಗಳು ಒಂದೆರಡು ಹಸುಗಳನ್ನು ಸಾಕುವ ಪ್ರಮೇಯ ಬಂದೊದಗಿದೆ. ಭತ್ತದ ಗದ್ದೆಗಳಿಗೆ ದನದ ಗೊಬ್ಬರವನ್ನು ಹಾಕದೆ ರಸಾಯನಿಕ ಗೊಬ್ಬರವನ್ನು ಬಳಸಿ ಬೆಳೆ ತೆಗೆಯುತ್ತಿದ್ದಾರೆ. ಉಳುವ ಬದಲು ಟ್ರಾಕ್ಟರ್ ಟೆಲ್ಲರುಗಳನ್ನು ಉಪಯೋಗಿಸುತ್ತಿದ್ದಾರೆ. ಇದಕ್ಕೆಲ್ಲ ಕಾರಣ ದಷ್ಟಪುಷ್ಟವಾದ ಎತ್ತುಗಳು ಮಾಯವಾಗಿ ಬಡಕಲು ಎತ್ತುಗಳನ್ನು ಕಾಣುತ್ತಿದ್ದೇವೆ. ಇದಕ್ಕೆಲ್ಲಾ ಕಾರಣ ಕೊಡಗಿನ ಕಾಡುಗಳಲ್ಲಿ ಯಥೇಚ್ಛವಾಗಿ ದೊರಕದಿದ್ದ ಹಸಿ ಹುಲ್ಲು ನಾಶವಾಗಿರುವುದೇ ಆಗಿದೆ. ಈ ವಿಷಯವನ್ನು ಯಾರು ಗಮನಿಸಿರುವುದು ಕಂಡುಬರುವುದಿಲ್ಲ. ಗದ್ದೆಗಳ ಏರಿಯಲ್ಲಿ ಬೆಳೆಯುವ ಹಸಿರು ಹುಲ್ಲು ಕಾಫಿ ತೋಟದ ಬದಿಗಳಲ್ಲಿ ಬೆಳೆಯುವ ಹಸಿ ಹುಲ್ಲನ್ನು ಶೇಖರಿಸುವ ಯೋಚನೆಯನ್ನು ಯಾರು ಮಾಡಿದಂತೆ ಕಾಣುವುದಿಲ್ಲ. ಕೊಡಗಿನಲ್ಲಿ ಮಳೆ ಕಡಿಮೆಯಾದ ಸಮಯದಲ್ಲಿ ಈ ಹುಲ್ಲನ್ನು ಕಟಾವು ಮಾಡಿ ಉದ್ದನೆಯ ಗುಂಡಿಗಳನ್ನು ತೋಡಿ ಉಪ್ಪು ಮಿಶ್ರಣ ಮಾಡಿ ಗುಂಡಿಯನ್ನು ಮುಚ್ಚಿ ನೀರು ಸೇರದಂತೆ ಮಾಡಿದರೆ ಹಸಿ ಹುಲ್ಲು ಸಿಗದ ಬೇಸಗೆ ಸಮಯದಲ್ಲಿ ಇವುಗಳನ್ನು ಉಪಯೋಗಿಸಬಹುದು. ದನಗಳನ್ನು ಕಟ್ಟಿ ಸಾಕುವ ಅಭ್ಯಾಸ ಕೊಡಗಿನ ರೈತರಲ್ಲಿ ಇಲ್ಲ. ಇದನ್ನು ಅಭ್ಯಾಸ ಮಾಡಿದರೆ ಯಥೇಚ್ಛವಾಗಿ ಬೆಳೆಯುವ ಹಸಿ ಹುಲ್ಲನ್ನು ಮೇಲೆ ವಿವರಿಸಿದಂತೆ ದಾಸ್ತಾನು ಮಾಡಿ ಜಾನುವಾರುಗಳಿಗೆ ಕೊಟ್ಟರೆ ಅವು ದಷ್ಟಪುಷ್ಟವಾಗಿ ಬೆಳೆದು ಸಗಣಿಯನ್ನು ಕೊಡುವುದಲ್ಲದೆ ಹಸುಗಳು ಹೆಚ್ಚಿನ ಹಾಲನ್ನು ಒದಗಿಸುವಂತಾಗಬಹುದು. ಇದಲ್ಲದೆ ಈಗ ರೈತರು ಬೇರೆ ಊರುಗಳಿಂದ ಬರುವ ಹಾಲನ್ನು ಕ್ರಯಕ್ಕೆ ಕೊಂಡು ಉಪಯೋಗಿಸುವ ಬದಲು ತಮ್ಮಲ್ಲಿಯೇ ಹಾಲು ಉತ್ಪಾದಿಸುವ ಹಿಂದಿನ ಕಾಲದ ಸಂದರ್ಭ ಒದಗಬಹುದು. ಜನರು ತಮ್ಮ ಜೀವನವನ್ನು ಪಾಶ್ಚಾತ್ಯ ನಾಗರೀಕತೆಯಲ್ಲಿ ತೊಡಗಿರುವಾಗ ಪಶು ಸಂಗೋಪನೆಯನ್ನು ಪಾಶ್ಚಾತ್ಯ ರಾಷ್ಟ್ರಗಳಾದ ಡೆನ್ಮಾರ್ಕ್, ಹಾಲೆಂಡ್, ಆಸ್ಟ್ರೇಲಿಯಾ, ನ್ಯೂಜಿಲೆಂಡಿನಲ್ಲಿ ಅನುಸರಿಸುವ ಪಶು ಸಂಗೋಪನೆ ಕ್ರಮವನ್ನು ಅನುಸರಿಸಿದರೆ ಈ ನ್ಯೂನತೆಯನ್ನು ಹೋಗಲಾಡಿಸಬಹುದಲ್ಲವೇ? ಎಂದು ಸಂಗಾತಿಯ ಅನಿಸಿಕೆಯಾಗಿದೆ.

ಅಂಚೆ ಮತ್ತು ತಂತಿ ಸೌಲಭ್ಯ ಬಳಕೆಗೆ ಬಂದದ್ದು

1. ಪ್ರಥಮ ಅಂಚೆ ಟಿಕೇಟ್ ಬಳಕೆಗೆ ಬಂದದ್ದು 1852ರಲ್ಲಿ.
2. ಭಾರತದಲ್ಲಿ ಎಲ್ಲೆಡೆಯಲ್ಲಿ ಅಂಚೆ ವ್ಯವಸ್ಥೆ ಪ್ರಾರಂಭವಾದದ್ದು 1854ರಲ್ಲಿ.
3. Money Order ಬಳಕೆಗೆ ಬಂದದ್ದು 1880ರಲ್ಲಿ
4. ಅಂಚೆ ವಿಮಾ ಸೇವೆ ಪ್ರಾರಂಭವಾದದ್ದು 1882ರಲ್ಲಿ.
5. ಅಂಚೆ ಉಳಿತಾಯ ಯೋಜನೆ ಪ್ರಾರಂಭವಾದದ್ದು 1882ರಲ್ಲಿ.
6. ರೈಲ್ವೆ ಅಂಚೆ ಸೇವೆ ಜಾರಿಗೆ ಬಂದ್ದು 1907ರಲ್ಲಿ.
7. ವಿಮಾನಯಾನ ಅಂಚೆ ಸೇವೆ ಪ್ರಾರಂಭವಾದದ್ದು 1911ರಲ್ಲಿ.
8. Pin Code ಪ್ರನಾಳಿ ಪ್ರಾರಂಭವಾದದ್ದು 15 ಆಗಸ್ಟ್ 1972ರಲ್ಲಿ.
9. Speed Post ಸೇವೆ ಪ್ರಾರಂಭವಾದದ್ದು 1 ಆಗಸ್ಟ್ 1986ರಲ್ಲಿ.
10. Speed Post Money Order ಸೇವೆ ಪ್ರಾರಂಭವಾದದ್ದು 31 ಮೇ 1988ರಲ್ಲಿ.
11. ಭಾರತದಲ್ಲಿ ಅಂಚೆ Pin Codeನ್ನು 6 ಅಂಕಿಯಲ್ಲಿ ಬರೆಯಲ್ಪಟ್ಟಿದೆ.
    ಪ್ರಥಮ ಅಂಕಿ - ಕ್ಷೇತ್ರವನ್ನು, ದ್ವಿತೀಯ ಅಂಕಿ-ಉಪ ಕ್ಷೇತ್ರವನ್ನು, ತೃತೀಯ ಅಂಕಿ-ಜಿಲ್ಲೆಯನ್ನು,
    ಮತ್ತೆ ಉಳಿದ ಮೂರು ಅಂಕಿಗಳು ಅಂಚೆ-ಮನೆ ಶಾಖೆಗಳನ್ನು ಸೂಚಿಸುತ್ತವೆ.
12. ಭಾರತದಲ್ಲಿ Pin Codeನ್ನು 8 ಮುಖ್ಯ (Division)ಗಳಾಗಿ ವಿಭಾಗಿಸಲಾಗಿದೆ.

Zone	1.	Delhi, Punjab, Hariyana, Chandigarh, Jammu & Kashmir, Himacahl Pradesh.
"	2.	Uttar Pradesh
"	3.	Rajasthan, Gujarath, Dadar, Nagar Haweli
"	4.	Maharastra, Goa, Madhya Pradesh
"	5.	Andrapradesh, Karnataka
"	6.	Tamilnadu, Kerala, Laksha Deep
"	7.	West Bengal, Andaman & Nicobar, Orissa, Arunochal Pradesh, Assam, Manipur, Meghalaya, Nagaland and Tripura
"	8.	Bihar

ಶ್ರೀಮತಿ ಕೊರಂಬಡಕ ಹೇಮ ಕುಶಾಲಪ್ಪ, ಬೆಂಗಳೂರು

ಕೊಡಗು ಸಂಗಾತಿ ಪಾಕ್ಷಿಕ ಪತ್ರಿಕೆನ ಆಗಿಂದಾಗೆ ನವೀಕರಿಸಿ ಸಹಕರಿಸಿ

ಮನೆಗೆ ದೊಡ್ಡ ಸೊಸೆ ಆಗಬೇಡ, ಮನೆ ದೊಡ್ಡ ಮಗ ಆಗಬೇಡ

ಕೊಡಗು ಗೌಡ ವಿದ್ಯಾಸಂಘದಿಂದ ಪ್ರತಿಭಾವಂತರಿಗೆ ಸನ್ಮಾನ

ಹತ್ತು ಕುಟುಂಬ ಹದಿನೆಂಟು ಗೋತ್ರದ ವ್ಯಾಪ್ತಿಯ ಕೊಡಗು ಗೌಡ ವಿದ್ಯಾಸಂಘದ ಆಶ್ರಯದಲ್ಲಿ ಶಿಕ್ಷಣ ಹಾಗೂ ಕ್ರೀಡೆ ಕ್ಷೇತ್ರದಲ್ಲಿ ಸಾಧನೆ ತೋರಿದ ಜನಾಂಗದ ಪ್ರತಿಭಾನ್ವಿತರನ್ನು ದಿನಾಂಕ 16-9-2001ರಲ್ಲಿ ಸಂಘದ ಸಭಾಂಗಣದಲ್ಲಿ ನಡೆದ ಸಮಾರಂಭದಲ್ಲಿ ಸನ್ಮಾನಿಸಿ, ಗೌರವಿಸಲಾಯಿತು.


ಶಿಕ್ಷಣ

ವಿಜ್ಞಾನ ಪದವಿಯಲ್ಲಿ ಅತೀ ಹೆಚ್ಚಿನ ಅಂಕ ಗಳಿಸಿದ ಚೆಟ್ಟಿಮಾಡ ಆರ್ ವೈಶಾಲಿ, ಮುಕ್ಕಾಟಿ ಬಿ. ಸವಿತಾ, ಬಿಟ್ಟೀರ ಮಮತಾ ಹಾಗೂ ಅಚಲ್‌ಪಾಡಿ ಬಿ. ಕವಿತಾ, ಕಲಾ ಪದವಿಯಲ್ಲಿ ನಾಟೋಳನ ಎ. ಭಾವನ, ಪಿಯುಸಿಯಲ್ಲಿ ಅಂಚೆಮನೆ ಯತೀನ್ ಗಣೇಶ್, ಮೂಲೆಮನೆ ತೇಜಸ್ವಿ, ಮುಕ್ಕಾಟಿರ ಜಿ. ಮಂಜುನಾಥ್, ಕರ್ಣಯ್ಯನ ಭವ್ಯ ಕಾರ್ಯಪ್ಪ ಹಾಗೂ ಗುಡ್ಡನ ಕುಸುಮ, ಎಸ್ಸೆಸ್ಸೆಲ್ಸಿಯಲ್ಲಿ ಹೆಚ್ಚಿನ ಅಂಕಗಳೊಡನೆ ತೇರ್ಗಡೆಯಾದ ಪಾಂಡನ ವಿ. ಸಮರ್ಥ್, ಕೋರನ ಪ್ರಿಯಾ, ಸೂದನ ಕೃತಿಶ್ರೀ, ಕೋಳಿಬೈಲು ಖುಶ್ವಂತ್ ಹಾಗೂ ಅಮೆಮನೆ ದೀಪಕ್, ಏಳನೇ ತರಗತಿಯಲ್ಲಿ ಕತ್ರಿಕೊಲ್ಲಿ ತೇಜಸ್, ಪರ್ಲಕೋಟಿ ಕಾತ್ಯಾಯಿನಿ, ಕೊಲ್ಕದ ಬಿ. ಹಿತಶ್ರೀ, ತುಂತಜೆ ಮೋನಿಕಾ, ಬಾರಿಕೆ ಹರ್ಷಿತಾ ಹಾಗೂ ಕರ್ಣಯ್ಯನ ಗಾನಶ್ರೀ ಅವರಿಗೆ ಪ್ರಶಸ್ತಿ ವಿತರಿಸಲಾಯಿತು.

ಸ್ನಾತಕೋತ್ತರ ಪದವಿಯಲ್ಲಿ ಅತ್ಯುನ್ನತ ಅಂಕಗಳೊಡನೆ ತೇರ್ಗಡೆಯಾದ ಅಮೆ ಕವಿತಾ ಗಣಪತಿ, ವೃತ್ತಿಪರ ಶಿಕ್ಷಣದಲ್ಲಿ ನಡುವಟ್ಟಿರ ಅನಿಲ್ ಸೀತಾರಾಮ್ (ಬಿಇ) ಕಲ್ಲಂಬಿ ಸುದೀಪ್ ಡಾಲು (ಬಿಇ), ಪರಿವಾರ ಎ. ಗಾಯಿತ್ರಿ (ಬಿಇ), ಪೊನ್ನೇಟಿ ವಿನೋದ್ ಕುಮಾರ್ (ಡಿಎಂಇ), ಪಾರೆಮಜಲು ಶರ್ಮಿಳಾ ಬಾಲಗಂಗಾಧರ್ (ಬಿಎಸ್ಸಿ, ಬಿಎಡ್), ಮಾಗಲು ಜಶ್ಮಿ ಪೊನ್ನಪ್ಪ ಕಂಪ್ಯೂಟರ್, ಮುಕ್ಕಾಟಿರ ಜಮೀಳ ಎಂ.ಎ, ಪಾಡಿಚೆಟ್ಟಿರ ವನಿತಾ ಪೊನ್ನಪ್ಪ (ಜಿಡಿಸಿ), ಪೂಜಾರಿರ ವಿದ್ಯಾರಾಣಿ (ಬಿಎಸ್ಸಿಎಜಿ) ಅವರುಗಳನ್ನು ಸಮಾರಂಭದಲ್ಲಿ ಸನ್ಮಾನಿಸಿ ಗೌರವಿಸಲಾಯಿತು.

ಕ್ರೀಡೆ

ಅಮೇರಿಕಾದ ಅಲಾಸ್ಕಾದಲ್ಲಿ ನಡೆದ ಫ್ಲೋರ್ ಹಾಕಿ ಸ್ಪರ್ಧೆಯಲ್ಲಿ ಪಾಲ್ಗೊಂಡ ರಾಜ್ಯದ ಏಕೈಕ ಆಟಗಾರ ತಳೂರು ಕಲ್ಪನಾಥ್, ಅಂತರರಾಷ್ಟ್ರೀಯ ಹಾಕಿ ಹಾಗೂ ಮ್ಯಾರಥಾನ್ ಪಟು ಹುಲಿಮನೆ ಆರ್. ಮಂಜುಳಾ, ರಾಷ್ಟ್ರೀಯ ಕಿರಿಯ ಹಾಕಿ ಪಟು ಕಟ್ಟೆಮನೆ ಶರತ್ ಪ್ರಭಾಕರ್, ರಾಷ್ಟ್ರೀಯ ಮ್ಯಾರಥಾನ್ ಪಟು ಕರ್ಣಯ್ಯನ ಎ. ಈಶ್ವರ್, ರಾಜ್ಯಮಟ್ಟದ ಕೆಸರುಗದ್ದೆ ಕ್ರೀಡಾ ಕೂಟದಲ್ಲಿ ಸತತ ೫ನೇ ಬಾರಿ ಪ್ರಶಸ್ತಿ ಪಡೆದ ಹುದೇರಿ ತ್ಯಾಗರಾಜೇಂದ್ರ, ರಾಜ್ಯಮಟ್ಟದ ಅಥ್ಲೆಟ್ ಹೊಸೂರು ತನುಜಾ, ರಾಜ್ಯಮಟ್ಟದ ಪೂಲ್‌ವಾಲ್ಟ್ ಪಟು ಪೈಕೇರ ತೀರ್ಥೇಶ್, ರಾಜ್ಯಮಟ್ಟದ ಮ್ಯಾರಥಾನ್ ಹಾಗೂ ಕಬಡ್ಡಿ ಪಟು ಹೊಸೂರು ಹರೀಶ್‌ಕುಮಾರ್, ರಾಜ್ಯ ಮಟ್ಟದ ಅಥ್ಲೆಟ್ ಕಾವೇರಿಮನೆ ಆರ್. ರೂಪಿಣಿ ಹಾಗೂ ಅಂತರ ರಾಷ್ಟ್ರೀಯ ಹಾಕಿ ಪಟು ಕಾಳೇರಮ್ಮನ ರಾಯ್ ಫಾಲಾಕ್ಷ.



ವಿದ್ಯಾಸಂಘದ ಮಾಜಿ ಉಪಾಧ್ಯಕ್ಷರಾದ ಶ್ರೀ ಪಂಜೆಪಳ್ಳ ವೆಂಕಪ್ಪರಿಂದ ಜ್ಯೋತಿ ಬೆಳಗಿ ಉದ್ಘಾಟಿಸಲಾಯಿತು. ಚಿತ್ರದಲ್ಲಿ ಅಧ್ಯಕ್ಷ ಹೊಸೂರು ರಮೇಶ್, ಅಮೆ ಪೊನ್ನಪ್ಪ, ಕೂಡಕಂಡಿರ ಗಣಪತಿ, ಬೆಂಗಳೂರು ಗೌಡ ಸಮಾಜದ ಅಧ್ಯಕ್ಷ ಅಮ್ಮವ್ವನ ವಾಸು, ಕೂಡಕಂಡಿರ ಸೋಮಣ್ಣ, ನಿವೃತ್ತ ಡಿ.ವೈ.ಎಸ್ಪಿ, ಖಜಾಂಚಿ ಪೊನ್ನಚ್ಚನ ಸೋಮಣ್ಣ ಮತ್ತು ಉಪಾಧ್ಯಕ್ಷ ಸೂರ್ತಲೆ ಸೋಮಣ್ಣನವರನ್ನು ಕಾಣಬಹುದು

ಸಂಘವು ಇತ್ತೀಚೆಗೆ ಏರ್ಪಡಿಸಿದ್ದ ಚಿತ್ರಕಲಾ ಸ್ಪರ್ಧೆಯಲ್ಲಿ ವಿಜೇತರಾದವರ ಹೆಸರು ಇಂತಿದೆ. ೧ ರಿಂದ ೩ನೇ ತರಗತಿಯವರೆಗಿನ ಸ್ಪರ್ಧೆಯಲ್ಲಿ ದಂಬೆಕೋಡಿ ಮೌಲ್ಯ, ಸೂರ್ತಲೆ ಗೌತಂ ಸೋಮಣ್ಣ, ದೇವಜನ ನವನಿ ಕುಶಾಲಪ್ಪ, ಕೋಡಿ ಹರ್ಷ ಹಾಗೂ ಕೊಡೆಕಲ್ ಸಾಗರಿಕಾ ೪ ರಿಂದ ೭ನೇ ತರಗತಿಯವರೆಗೆ ಕೋಟೆರ ಕೃತಿ, ಸೂರ್ತಲೆ ಕೃತಿಕ್ ಸೋಮಣ್ಣ, ಕೊಡೆಕಲ್ಲು ಸಂಘಮಿತ್ರ ಹಾಗೂ ಅರಂಬೂರು ರಾಹುಲ್ ವಸಂತ್‌ಕುಮಾರ್ ವಿಜೇತರಾಗಿದ್ದಾರೆ.

ಪ್ರೌಢ ಶಾಲಾ ವಿದ್ಯಾರ್ಥಿಗಳ ಭಾಷಣ ಸ್ಪರ್ಧೆಯಲ್ಲಿ ಕುದ್ಪಾಜೆ ಚೈತ್ರ ಜೋಯಪ್ಪ, ಹೊಸೂರು ಕಾವ್ಯ ತಮ್ಮಯ್ಯ, ಪುದಿನೆರವನ ಹರಿಣಿ ದೇವಪ್ಪ, ಕಡ್ಯದ ನೇಹಾ ಪುಟ್ಟಯ್ಯ ಹಾಗೂ ಪಾಣತ್ತಲೆ ಬೆನ್ನಿ ಗೋಪಾಲ್ ಅವರುಗಳು ವಿಜೇತರಾಗಿ, ಸಮಾರಂಭದಲ್ಲಿ ಬಹುಮಾನಗಳನ್ನು ವಿತರಿಸಲಾಯಿತು.

ಜನಾಂಗದ ಪ್ರತಿಭಾವಂತರನ್ನು ಗುರುತಿಸಲು ಸೂಕ್ತ ವೇದಿಕೆಯ ಅಗತ್ಯವಿದೆ

: ಅಮ್ಮವ್ವನ ವಾಸು

ವಿವಿಧ ಕ್ಷೇತ್ರಗಳಲ್ಲಿ ಸಾಧನೆ ತೋರುತ್ತಿರುವ ಗೌಡ ಜನಾಂಗದ ಪ್ರತಿಭಾವಂತರನ್ನು ಗುರುತಿಸಲು ಸೂಕ್ತ ವೇದಿಕೆಯೊಂದರ ಅಗತ್ಯವಿದೆ ಎಂದು ವಾಣಿಜ್ಯೋದ್ಯಮಿ ಅಮ್ಮವ್ವನ ವಾಸು ಅವರು ಸಲಹೆ ನೀಡಿದ್ದಾರೆ.

ಸ್ಥಳೀಯ ಕೊಡಗು ಗೌಡ ವಿದ್ಯಾ ಸಂಘದ ಆಶ್ರಯದಲ್ಲಿ ಇಂದು ನಡೆದ ವಿದ್ಯಾನಿಧಿ ವಿತರಣೆ ಹಾಗೂ ಸನ್ಮಾನ ಸಮಾರಂಭದಲ್ಲಿ ಮುಖ್ಯ ಅತಿಥಿಗಳಾಗಿ ಪಾಲ್ಗೊಂಡು ಮಾತನಾಡುತ್ತಿದ್ದ ಅವರು, ಇಂತಹ ವೇದಿಕೆ ರಚಿಸುವ ಸಂದರ್ಭ ಎಲ್ಲಾ ಸಂಘ-ಸಂಸ್ಥೆಗಳು ಹಾಗೂ ರಾಜಕೀಯ ಪಕ್ಷಗಳನ್ನೂ ಪರಿಗಣಿಸಬೇಕು ಎಂದರು.

ನೆರೆಮನೆ ಶ್ಯಾವಿಗೆಗೆ ಕಾಯಿ ಹಾಲು ಕಾಯಿಸಿದಂಗೆ

ತನ್ನದೇ ಆದ ಸಂಸ್ಕೃತಿ, ಆಚಾರ-ವಿಚಾರಕ್ಕೆ ಹೆಸರಾಗಿರುವ ಕೊಡಗು ಜಿಲ್ಲೆ ಶೌರ್ಯದ ಪ್ರತೀಕವಾಗಿದ್ದು, ಕ್ರೀಡೆ ಹಾಗೂ ರಾಜಕೀಯ ಕ್ಷೇತ್ರದಲ್ಲಿ ಹೆಸರು ಮಾಡಿದೆ. ಜಿಲ್ಲೆಯಲ್ಲಿ ಗೌಡ ಜನಾಂಗದ ಹೆಚ್ಚಿನ ಮಂದಿ ಬಡತನದ ಸ್ಥಿತಿಯಲ್ಲಿದ್ದು, ಗ್ರಾಮೀಣ ಪ್ರದೇಶದಲ್ಲಿರುವ ಪ್ರತಿಭಾವಂತರನ್ನು, ಬಡತನದಲ್ಲಿರುವವರನ್ನು ಗುರುತಿಸಿ ಮೇಲೆತ್ತಲು ವೇದಿಕೆ ಶ್ರಮಿಸಬೇಕಾಗಿದೆ ಎಂದ ಅವರು, ಗೌಡ ಸಂಸ್ಕೃತಿ, ಆಚಾರ-ವಿಚಾರ ಹಾಗೂ ಅಭಿವೃದ್ಧಿಗಾಗಿ ಹೋರಾಡಿದವರನ್ನು ಸ್ಮರಿಸುವ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಂತೆ ಸಲಹೆ ನೀಡಿದರು.

ಪ್ರತಿಭಾನ್ವಿತ ವಿದ್ಯಾರ್ಥಿಗಳಿಗೆ ಪ್ರೋತ್ಸಾಹ ನೀಡುವ ಸಲುವಾಗಿ ಮೆರಿಟ್ ಫಂಡ್ ಒಂದನ್ನು ಸ್ಥಾಪಿಸುವ ಅಗತ್ಯತೆಯಿದೆ ಎಂದ ಅವರು, ತಾನು ಐದು ವರ್ಷದಲ್ಲಿ ಈ ನಿಧಿಗೆ ೨ ಲಕ್ಷ ರೂ.ಗಳನ್ನು ನೀಡುವುದಾಗಿ ನುಡಿದರಲ್ಲದೇ, ಗೌಡ ವಿದ್ಯಾನಿಧಿಗೆ ಸ್ಥಳದಲ್ಲಿ ೧೦ ಸಾವಿರ ರೂಪಾಯಿಗಳನ್ನು ಉದಾರವಾಗಿ ನೀಡಿದರು.

ವಿದ್ಯಾನಿಧಿ, ಪ್ರಶಸ್ತಿ ವಿತರಣೆ ನಡೆಸಿಕೊಟ್ಟ ನಿವೃತ್ತ ಡಿವೈಎಸ್ಪಿ ಕೂಡಕಂಡಿ ಸೋಮಣ್ಣ ಅವರು ಮಾತನಾಡಿ, ಪ್ರತಿಭಾವಂತರನ್ನು ಪ್ರೋತ್ಸಾಹಿಸುವ ಇಂತಹ ಕಾರ್ಯಕ್ರಮಗಳು ಕೇವಲ ನಗರ ಪ್ರದೇಶದಲ್ಲಿ ನಡೆದರೆ ಫಲಶ್ರುತಿ ಸಿಗದು. ಬದಲು ಗ್ರಾಮೀಣ ಪ್ರದೇಶಗಳಲ್ಲಿನ ಪ್ರತಿಭಾವನ್ವಿತರನ್ನು ಗುರುತಿಸಬೇಕಾಗಿದೆ ಎಂದರು. ಜಿಲ್ಲೆಯ ಎಷ್ಟೋ ಬಡ ಕುಟುಂಬಗಳಲ್ಲಿ ಪ್ರತಿಭಾವಂತ ಮಂದಿಯಿದ್ದು, ಅಂತಹವರ ಮನೆಮನೆಗೆ ತೆರಳಿ ಕಾರ್ಯಕ್ರಮದ ಬಗ್ಗೆ ಮಾಹಿತಿ ನೀಡಿ, ಮೇಲೆತ್ತಬೇಕಾಗಿದೆ ಎಂದರು.

ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಹೊಸೂರು ರಮೇಶ್ ಜೋಯಪ್ಪ ಅವರು, ೧೯೦೮ರಲ್ಲಿ ಸ್ಥಾಪನೆಯಾದ ವಿದ್ಯಾಸಂಘವು ಇನ್ನು ೨ ವರ್ಷಗಳಲ್ಲಿ ಶತಮಾನೋತ್ಸವದ ಸಂಭ್ರಮವನ್ನಾಚರಿಸಲಿದೆ. ವಿದ್ಯೆ ಮತ್ತು ಕ್ರೀಡಾ ಕ್ಷೇತ್ರದ ಪ್ರತಿಭಾವಂತರನ್ನು ಗುರುತಿಸಿ ಪ್ರೋತ್ಸಾಹ ನೀಡುವುದು ಸಂಘದ ಉದ್ದೇಶ. ಮುಂದೆ ಗ್ರಾಮ ಮಟ್ಟದಲ್ಲಿ ಇಂತಹ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವ ಉದ್ದೇಶವಿದೆ ಎಂದರು.

ಸಂಘದ ಮಾಜಿ ಉಪಾಧ್ಯಕ್ಷರಾದ ಪಂಜಿಪಳ್ಳ ವೆಂಕಪ್ಪ ಅವರು ಸಮಾರಂಭವನ್ನು ಉದ್ಘಾಟಿಸಿದರು. ಸಮಾರಂಭದಲ್ಲಿ ಮಾಜಿ ಸಚಿವ ದಂಬೆಕೋಡಿ ಎ. ಚಿಣ್ಣಪ್ಪ, ಮಾಜಿ ಶಾಸಕ ದಂಬೆಕೋಡಿ ಎಸ್. ಮಾದಪ್ಪ, ಕೊಡಗು ಗೌಡ ಸಮಾಜದ ಅಧ್ಯಕ್ಷ ತೋಟಂಬೈಲು ನಾಣಯ್ಯ, ಸಂಘದ ಮಾಜಿ ಅಧ್ಯಕ್ಷ ಕುಯ್ಯಮುಡಿ ಪೂರ್ಣಯ್ಯ, ಗೌಡ ಅಕಾಡೆಮಿ ಅಧ್ಯಕ್ಷ ತುಂತಜೆ ಗಣೇಶ್ ಮೊದಲಾದವರು ಉಪಸ್ಥಿತರಿದ್ದರು.

ತಳೂರು ಗೀತಾಂಜಲಿ ಪ್ರಾರ್ಥಿಸಿದರೆ, ಸೂರ್ತಲೆ ಸೋಮಣ್ಣ ಅವರು ಸ್ವಾಗತಿಸಿದರು. ಕೋಡಿ ಚಂದ್ರಶೇಖರ್ ಕಾರ್ಯಕ್ರಮ ನಿರೂಪಿಸಿದರೆ ಕೊಡೆಕಲ್ ವಿಧ್ಯಾದರ್ ಕೊನೆಯಲ್ಲಿ ವಂದಿಸಿದರು.

ಸಂಗಾತಿ

ನಿಮಗಿದು ತಿಳಿದಿರಲಿ

ಜಗತ್ತು ಬೆಳೆದಂತೆಲ್ಲಾ ಹೊಸ ಹೊಸ ಕಾಯಿಲೆಗಳು ಯಾವುದಾದರೊಂದು ರೂಪದಲ್ಲಿ ಕಾಣಿಸಿಕೊಳ್ಳುತ್ತಿವೆ. ಅದ್ದರಿಂದಲೇ ಗಾಳಿ ಮತ್ತು ಬೆಳಕಿನ ಬಗ್ಗೆಯೇ ನಾವು ಎಚ್ಚರಿಕೆಯಿಂದ ಇರಬೇಕಾದಂತಹ ಪರಿಸ್ಥಿತಿ ಉಂಟಾಗಿದೆ.

ನಾವು ಓಡಾಡುವ ವಾತಾವರಣ ಮಾತನಾಡುತ್ತಿರುವ ವ್ಯಾಪ್ತಿಗಳ ಬಗ್ಗೆಯೂ ಎಚ್ಚರಿಕೆಯಿಂದ ಇರಬೇಕಾದಂತಹ ಸ್ಥಿತಿ ನಿರ್ಮಾಣಗೊಂಡಿದೆ. ಈ ನಿಟ್ಟಿನಲ್ಲಿ ನಮ್ಮ ದಿನನಿತ್ಯದ ಬದುಕಿನಲ್ಲಿ ಶುಭ್ರತೆಗೆ ಹೆಚ್ಚು ಪ್ರಾಮುಖ್ಯತೆ ನೀಡಬೇಕು.

ಅದರಲ್ಲೂ ಮನೆಯಲ್ಲಿರುವ ನಿಮ್ಮ ಟೆಲಿಫೋನ್ ಶುಭ್ರತೆಗೆ ನೀವು ಆದ್ಯತೆ ನೀಡಬೇಕು. ಫೋನ್ ಮೇಲೆ ಬ್ಯಾಕ್ಟೀರಿಯಾಗಳು, ಅಪಾಯಕಾರಿಯಾಗಿ ಬೆಳೆಯುತ್ತದೆ ಎನ್ನುವುದು ತುಂಬ ಜನಕ್ಕೆ ತಿಳಿಯದು. ಇವು ವಿಚಿತ್ರ ಬ್ಯಾಕ್ಟೀರಿಯಾಗಳು.

ಈ ಬ್ಯಾಕ್ಟೀರಿಯಾಗಳಿಗೆ ಬೇರೆ ಆಹಾರವೇ ಬೇಕಾಗಿಲ್ಲ. ಮನುಷ್ಯ ಫೋನ್‌ನಲ್ಲಿ ಮಾತನಾಡುವಾಗ ಹೊರಬರುವ ಉಗುಳೇ ಈ ಬ್ಯಾಕ್ಟೀರಿಯಾಗಳಿಗೆ ಆಹಾರ. ಈ ಬ್ಯಾಕ್ಟೀರಿಯಾಗಳು ಒಬ್ಬರ ಬಾಯಿಂದ ಇನ್ನೊಬ್ಬರ ಬಾಯಿಗೆ ಗಾಳಿಯ ಮೂಲಕವೇ ಸೇರಿಕೊಳ್ಳುತ್ತವೆ. ಇದನ್ನೂ ತಪ್ಪಿಸಲು ನಿಮ್ಮ ದೂರವಾಣಿಯನ್ನು ಶುಭ್ರವಾಗಿಡಿ. ಕೊಬ್ಬು, ಇಲ್ಲವೇ ಜಿಡ್ಡಿನ ಅಂಶಗಳಿರುವ ಸ್ಪ್ರೇಯನ್ನು ಫೋನ್ ಶುಚಿಗೊಳಿಸಲು ಬಳಸಬೇಡಿ. ಉತ್ತಮವಾದ ಸ್ಪ್ರೇ ಬಳಸಿ ದೂರವಾಣಿಯನ್ನು ಶುಭ್ರ ಬಟ್ಟೆಯಿಂದ ದಿನನಿತ್ಯ ಶುಚಿ ಮಾಡಿ. STD ಬೂತ್‌ಗೆ ಹೋದಾಗ ರಿಸೀವರ್ ದೂರ ಹಿಡಿದುಕೊಂಡು ಮಾತನಾಡಲು ಮರೆಯದಿರಿ.

– ಕುಯ್ಯಮುಡಿ ಸುನಿಲ್, ಸಣ್ಣಪುಲಿ ಕೋಟು

ಗೀತ ಇಲ್ಲದ ಹೇಳಿಕೆ

ರಾಮಯ್ಯಜ್ಜನೂ ಚಂಗಪ್ಪಜ್ಜನು ಮೊನ್ನೆ ಮಡಿಕೇರಿಂದ ಬಸ್ಸ್‌ಲಿ ಹೋಕಾಕನ ಒಂದೇ ಸೀಟ್‌ಲಿ ಕುದ್ದ್ ಮಾತಾಡಿಕೊಂಡ್ ಹೋಗ್‌ತ್ತಿದ್ದೊ. ರಾಮಯ್ಯಜ್ಜ ತನ್ನ ಮಗಳ ಮನೆಗೆ ಹೊರ್‍ಟಿತ್ತ್. ಅದೇ ಬಸ್ಸ್‌ಲಿ ಇವು ಕುದ್ದಾ ಮುಂದೆ ಸೀಟ್‌ಲಿ ಪಕ್ಕದ ಊರ್ನ ರಾಂಪೈದ ಕುದ್ದಿತ್ತ್. ಅಂವ ಸ್ವಲ್ಪ ಬ್ಯಾಜರಲಿ ಇತ್ತ್. ಆಗ ರಾಮಯ್ಯಜ್ಜ ಮುಂದೆ ಸೀಟ್‌ಲಿ ಕುದ್ದಿದ್ದ ರಾಂಪೈದನ ಬೆನ್ನ್‌ತಟ್ಟಿ- "ಏರಾ ! ರಾಂಪ, ಎತ್ತರ, ಹೊರ್‍ಟದ್, ಮನೆಗೆ ಹೊರ್‍ಟದಾ I ಉಷಾರ್ ಒಳರಾ I ಅದೇಲ್ಲ ಸಾಯಲಿ I ಹೇಳ್ದಂಗೆ ಮೊನ್ನೆ ನಿಮ್ಮಲ್ಲಿ ಸತ್ತ್‌ಹೋದ್ ನೀನಾ ಅತ್ವ, ನಿನ್ನ ತಮ್ಮನಾತ ಕೇಳಿಬುಡೋಕ. ಮೊದ್ಲೆ ತಂಮ ತೀರಿಹೋದ ಬ್ಯಾಜರಲಿ ಇದ್ದ ರಾಂಪೈದಂಗೆ ಏನ್ ಹೇಳ್ಕುತ ಗೊತ್ತಾತ್ಲೆ !

– ಚಂಡಿಮನೆ ರ್‍ಯಾಲಿ, ಮರಂದೊಡ

ಸಂಪಾಜೆಯಲ್ಲಿ ಭಾಷೆ - ಸಾಮರಸ್ಯ ಕಾರ್ಯಕ್ರಮ : ಭಾಷೆಯ ಬಗ್ಗೆ ಜಿಜ್ಞಾಸೆ ಬಿಟ್ಟು ದೃಢ ನಿಲುವು ತಳೆಯಬೇಕು : ಗೌಡ ಜನಾಂಗಕ್ಕೆ ಕೊಡವ ಸಾಹಿತ್ಯ ಅಕಾಡೆಮಿ ಅಧ್ಯಕ್ಷರ ಕಿವಿ ಮಾತು.

ಕೊಡಗಿನ ಗೌಡ ಜನಾಂಗದಲ್ಲಿ ಇನ್ನೂ ತಮ್ಮ ಭಾಷೆ ಯಾವುದು ಎಂಬುದರ ಬಗ್ಗೆಯೇ ಜಿಜ್ಞಾಸೆಯಿದೆ. ಕೆಲವರು ತಮ್ಮ ಭಾಷೆಯನ್ನು ಅರೆ ಭಾಷೆ, ಅರೆ ಕನ್ನಡ ಎಂದು ಕರೆದರೆ, ಮತ್ತೆ ಕೆಲವರು ಹಾಗೆ ಕರೆಯಲೇಬಾರದು, ಅದು ಗೌಡ ಕನ್ನಡ ಭಾಷೆಯೆನ್ನುತ್ತಾರೆ. ಇನ್ನು ಕೆಲವರು ನಮ್ಮದು ನಡುಗನ್ನಡ ಹಳೆಗನ್ನಡ ಭಾಷೆಯೆಂದು ಹೇಳಿಕೊಂಡಿದ್ದಾರೆ. ಒಟ್ಟಿನಲ್ಲಿ ಗೌಡ ಜನಾಂಗದವರು ಒಂದು ಸ್ಪಷ್ಟ ನಿರ್ಧಾರಕ್ಕೆ ಬಂದು ತಮ್ಮ ಭಾಷೆ ಯಾವುದು ಎಂಬುದನ್ನು ಕಂಡುಕೊಳ್ಳಬೇಕಾದ ಅಗತ್ಯವಿದೆ ಎಂದು ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರಾದ ಬಾಚರಣಿಯಂಡ ಅಪ್ಪಣ್ಣನವರು ಗೌಡ ಜನಾಂಗಕ್ಕೆ ಕಿವಿ ಮಾತು ಹೇಳಿದರು. ಅವರು ಸೆಪ್ಟೆಂಬರ್ 15ರಂದು ಸಂಪಾಜೆ ಪದವಿ ಪೂರ್ವ ಕಾಲೇಜಿನಲ್ಲಿ, ಕರ್ನಾಟಕ ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಅಮರ ಕ್ರಾಂತಿ ಉತ್ಸವ ಸಮಿತಿ, ಸಂಪಾಜೆ ಇವುಗಳ ಜಂಟಿ ಆಶ್ರಯದಲ್ಲಿ ಹಮ್ಮಿಕೊಂಡಿದ್ದ ಕೊಡಗಿನಲ್ಲಿ ಭಾಷಾ ಸಾಂಸ್ಕೃತಿಕ ಸಾಮರಸ್ಯ' ಎಂಬ ವಿಚಾರ ಸಂಕಿರಣದ ಅಧ್ಯಕ್ಷತೆ ವಹಿಸಿ ಮಾತನಾಡುತ್ತಾ ಅರೆಭಾಷೆಯಲ್ಲಿ ಉತ್ತಮ ಸಾಹಿತ್ಯಗಳನ್ನು ರಚನೆ ಮಾಡಲು ಸಾಧ್ಯವಿದೆ ಎಂದು, ತಾವೇ ಸ್ವತಃ ರಚಿಸಿದ 'ಗೌಡ ಮತ್ತು ಮಾಪಿಳ್ಳೆ ಕಾಡು ಬೇಟೆ ಆಡಿದ ಪ್ರಸಂಗವನ್ನು ಅರೆಭಾಷೆಯ ಮೂಲಕವೇ ಹಾಡಿ ಸಭಿಕರ ಮನಸೂರೆಗೊಂಡರು. ಕೊಡವ ಸಾಹಿತ್ಯ ಅಕಾಡೆಮಿಯ ಚುಕ್ಕಾಣಿ ಹಿಡಿದಿರುವ ಅವರು ಕೊಡವ ಹೃದಯದ ಸೀಮೆಯನ್ನು ಮೀರಿ, ಎಲ್ಲಾ ಜನಾಂಗದವರ ಹೃದಯ ಮುಟ್ಟಿ ಸಾಹಿತ್ಯ, ಸಂಸ್ಕೃತಿಯ ಬೆಳವಣಿಗೆಗೆ ಶ್ರಮಿಸುವುದಾಗಿ ಭರವಸೆ ನೀಡಿದರು. 1978ರಿಂದೀಚೆಗೆ ಪುನರುಜ್ಜೀವನಗೊಂಡು ಉತ್ತುಂಗ ಸ್ಥಿತಿಯಲ್ಲಿರುವ ಕೊಡವ ಸಾಹಿತ್ಯ ಅಕಾಡೆಮಿಗೆ ಭೌಗೋಳಿಕವಾಗಿ, ಸಾಮಾಜಿಕವಾಗಿ ತನ್ನದೇ ಆದ ತೊಡಕುಗಳಿದ್ದರೂ, ಟೀಕಾಕಾರರು ಬಾಯಿ ಮುಚ್ಚುವಂತೆ ಕೊಡಗಿನ ಸಾಹಿತ್ಯ, ಸಂಸ್ಕೃತಿಯ ಅಭಿವೃದ್ಧಿಯಲ್ಲಿ ಅಕಾಡೆಮಿ ತನ್ನನ್ನು ತಾನು ತೊಡಗಿಸಿ ಕೊಳ್ಳುವುದೆಂದು ಅವರು ಅಲ್ಲಿ ನೆರೆದಿದ್ದ ಎಲ್ಲಾ ವರ್ಗದ ಜನರಿಗೆ ಭರವಸೆ ನೀಡಿದರು.

8ನೇ ಪರಿಚ್ಛೇದಕ್ಕೆ ಕೊಡವ ಭಾಷೆ :
ಎನ್. ಎಸ್. ದೇವಿಪ್ರಸಾದ್ ಬೆಂಬಲ

ಇದೇ ಕಾರ್ಯಕ್ರಮದಲ್ಲಿ ಪ್ರಸ್ತಾವಿಕ ಭಾಷಣ ಮಾಡಿದ ಎನ್. ಎಸ್. ದೇವಿಪ್ರಸಾದ್‌ರವರು ಕೊಡಗಿನಲ್ಲಿ ಜಾತೀಯ ವೈರತ್ವ ಬಿಟ್ಟು, ಸೌಹಾರ್ದತೆ ಮೂಡಿಸಲು ಎಲ್ಲರೂ ಕಾರ್ಯ ಪ್ರವೃತ್ತರಾಗಬೇಕು, ಜಗತ್ತಿನಲ್ಲಿ ಹಲವು ಕಡೆ ವಿಚಾರ ಭೇದಗಳಿದ್ದರೂ, ಕೊಡಗಿನಲ್ಲಿ ನಾವೇಕೆ ಭಿನ್ನ ಹಾದಿಯಲ್ಲಿ ಸಾಗಬೇಕು? ಎಂದು ಪ್ರಶ್ನಿಸಿದರು. ಕೊಡವ ಭಾಷೆಯನ್ನು ಸಂವಿಧಾನದ 8ನೇ ಪರಿಚ್ಛೇದಕ್ಕೆ ಸೇರಿಸಲು ತಮ್ಮದೇನೂ ಅಭ್ಯಂತರವಿಲ್ಲ ಎಂದ ಅವರು ಅಮರ ಸುಳ್ಯ ಕ್ರಾಂತಿಗಾರರನ್ನು ಗೌರವಿಸಲು ಅಕಾಡೆಮಿಗೆ ಮನವಿ ಮಾಡಿ, ಗೌರವಿಸುವ ಭರವಸೆಯನ್ನು ಅಧ್ಯಕ್ಷರಿಂದ ಪಡೆದುಕೊಂಡರು. ಅಪ್ಪಣ್ಣನವರನ್ನು ಸಿ. ಎಂ. ಪೂಣಚ್ಚರವರಿಗೆ ಹೋಲಿಸಿದ ಅವರು, ಹಲವು ಬಣ್ಣಗಳ ಕಾಮನಬಿಲ್ಲಿನಂತೆ ಕೊಡಗಿನ ಸಂಸ್ಕೃತಿ, ಹಲವು ಸಂಸ್ಕೃತಿಗಳಿಂದ ಮಿಳಿತಗೊಂಡ ಶ್ರೀಮಂತ ಸುಂದರ ಸಂಸ್ಕೃತಿ ಎಂದು ಕೊಂಡಾಡಿದರು.

ಇದಕ್ಕೂ ಮೊದಲು ಕಾರ್ಯಕ್ರಮ ಉದ್ಘಾಟಿಸಿದ ನಿವೃತ್ತ ಪ್ರಾಚಾರ್ಯ ವಿ. ಎಸ್. ರಾಮಕೃಷ್ಣರವರು, ತಮ್ಮ ಇಳಿ ವಯಸ್ಸಿನಲ್ಲಿ, ದೇಹ ಬಗ್ಗಿದ್ದರೂ, ತಮ್ಮ ನೇರ ಮಾತುಗಳಿಂದ ಭಾವನೆ, ಭಾಷೆ, ಸಂಸ್ಕೃತಿ, ಪ್ರತ್ಯೇಕತೆ, ಸಾಮರಸ್ಯ ಇವುಗಳನ್ನು ವಿವರಿಸಿ, ಹಲವು ಕವನಗಳನ್ನು ಬೇರೆ ಬೇರೆ ಭಾಷೆಗಳಿಗೆ ತರ್ಜುಮೆ ಮಾಡಿ, ಹಾಡಿ ಸಭಿಕರಿಗೆ ಮೋಡಿ ಮಾಡಿದರು. ವಿಶ್ವವಿಪ್ಲವದ ಕಡೆಗೆ ಸಾಗುವಾಗ, ಶಾಂತಿಯ ತವರಿನಲ್ಲಿ ಸಾಮರಸ್ಯದ ಸಮಾರಂಭ ಏರ್ಪಡಿಸಿದ ಸಂಘಟಕರನ್ನು ಶ್ಲಾಘಿಸಿದರು. ನವೋದಯದ ಕಾಲ ಮುಗಿದು ಭವ್ಯ ಕಾಲ ಈಗ ಆರಂಭವಾಗಿದೆ. ಕನ್ನಡ ಸಾಹಿತ್ಯ ನಿರೀಕ್ಷಿತ ಮಟ್ಟದಲ್ಲಿ ಬೆಳೆಯಲು ಎಲ್ಲರೂ ಟೊಂಕ ಕಟ್ಟಬೇಕೆಂದು ಕರೆ ನೀಡಿದರು.

ಸಾಹಿತ್ಯ ಸೃಷ್ಟಿಗೆ ಪೂರಕ ಪ್ರೋತ್ಸಾಹ ಕೊಡಗಿನಲ್ಲಿಲ್ಲ
ಶ್ರೀ ಶ್ರೀಧರ ಆರಾಧ್ಯ

'ಕನ್ನಡ' ಭಾಷೆಯ ಬಗ್ಗೆ ಪ್ರಬಂಧ ಮಂಡಿಸಿದ ಶ್ರೀ ಶ್ರೀಧರ ಆರಾಧ್ಯರವರು ಭಾಷೆ ವ್ಯಕ್ತಿಯ ವ್ಯಕ್ತಿತ್ವವನ್ನು ಬೆಳೆಸುತ್ತದೆ. ಒಂದು ಭಾಷೆಯನ್ನು ಮಾತಾಡುವ ಜನರ ಸಂಖ್ಯೆಯಿಂದ, ಭಾಷೆಯ ಶ್ರೇಷ್ಠತೆಯನ್ನು ಅಳೆಯಲಾಗದು, ಶ್ರೇಷ್ಠ ಭಾಷೆ ತನ್ನ ಪಕ್ಕದ ಭಾಷೆಯನ್ನು ಬೆಳೆಸುತ್ತದೆ ಎಂದರು. ಕೊಡವ ಭಾಷೆಯ ಮೇಲೆ ಇಂಗ್ಲೀಷ್ ಪ್ರಭಾವ ಹೆಚ್ಚಾಗಿ, ಕನ್ನಡ ಭಾಷೆ ಕುಂಠಿತವಾಗಲು ಕಾರಣವಾಗಿದೆ, ಸೃಜನಶೀಲತೆಗೆ, ಸಾಹಿತ್ಯದ ಬೆಳವಣಿಗೆಗೆ ಕೊಡಗಿನಲ್ಲಿ ಸ್ಪಂದನ ಕಡಿಮೆಯಿದೆ. ಸಾಹಿತ್ಯ ಪರಿಷತ್ತು ಸಹ ಇತ್ತ ಕಡೆ ನಿರ್ಲಿಪ್ತ ಭಾವನೆಯನ್ನು ಹೊಂದಿದೆ ಎಂದು ಅವರು ವಿಷಾಧಿಸಿದರು.

ಸರಳತೆಯಿಂದ - ಸಂಕೀರ್ಣದೆಡೆಗೆ ಕೊಡವ ಸಂಸ್ಕೃತಿ
ಡಾ|| ಕೋಡಿರ.ಎಂ.ಲೋಕೇಶ್

'ಕೊಡವ' ಭಾಷೆಯ ಪ್ರಬಂಧ ಮಂಡಿಸಿದ ಡಾ|| ಕೋಡಿರ.ಎಂ.ಲೋಕೇಶ್‌ರವರು, ಕೊಡಗು ಹಿಂದೆ ಬಲಿಷ್ಠ ವಾಗಿತ್ತು, ಹೈದರಾಲಿ, ಟಿಪ್ಪುರಂತಹವರಿಗೂ ಕೊಡಗನ್ನು ಗೆಲ್ಲುವುದು ಸುಲಭವಾಗಿರಲಿಲ್ಲ. ಕೊಡಗಿನಲ್ಲಿದ್ದ ಜಾತ್ಯಾತೀತತೆಯೇ ಇದಕ್ಕೆ ಮುಖ್ಯ ಕಾರಣ. ಕೊಡವರೆಂದೂ ಅಧಿಕಾರಕ್ಕೆ ಆಸೆ ಪಟ್ಟವರಲ್ಲ ವೆಂಬುದು ಕೊಡಗನ್ನು ಆಳಿದ ಅರಸರನ್ನು ನೋಡಿದರೆ ತಿಳಿಯುತ್ತದೆ. ಅಂದು ಕೊಡಗಿನ ಅರಸರನ್ನು ಉಳಿಸುವುದಕ್ಕಾಗಿ ಸುಳ್ಯದ ಜನ ಅಮರ ಕ್ರಾಂತಿ ನಡೆಸಿದರು. ನಂತರ ನಡೆದ ಶಾಸನ ಸಭಾ ಚುನಾವಣೆಗಳೂ ಜಾತ್ಯಾತೀತವಾಗಿಯೇ ನಡೆದವು. ಆದರೆ

ಇತ್ತೀಚೆಗೇಕೆ ಭಿನ್ನಾಭಿಪ್ರಾಯಗಳು ಹುಟ್ಟಿಕೊಂಡಿವೆ ? ಎಂದು ಪ್ರಶ್ನಿಸಿದರು. ಕೊಡಗಿನಲ್ಲಿ ಬುಡಕಟ್ಟು ಸಂಸ್ಕೃತಿಯ ಮೇಲೆ ವೈದಿಕ ಸಂಸ್ಕೃತಿ, ಕ್ರಮೇಣ ಬ್ರಿಟಿಷ್ ಸಂಸ್ಕೃತಿಗಳು ಪ್ರಭಾವ ಬೀರಿ ನಮ್ಮ ಸರಳ ಸಂಸ್ಕೃತಿ-ಸಂಕೀರ್ಣತೆಯೆಡೆಗೆ ಸಾಗಿದೆ ಎಂದು ಅಭಿಪ್ರಾಯ ಪಟ್ಟರು. ಇದೇ ಸಂದರ್ಭದಲ್ಲಿ ಭಾಷಾ ಅಧ್ಯಯನ ಮತ್ತು ಇತಿಹಾಸ ಅಧ್ಯಯನ ಪೀಠ ಸ್ಥಾಪನೆಗೆ ಅವರು ಒತ್ತಾಯಿಸಿದರು.

ಕೊಡವ ಭಾಷೆಯ ಸಂಪರ್ಕದಿಂದ ಗೌಡ ಕನ್ನಡ ಮಧುರವಾಗಿದೆ.

ಅರೆಭಾಷೆ ಬಗ್ಗೆ ಪ್ರಬಂಧ ಮಂಡಿಸಿದ ಶ್ರೀ ಬಡ್ಡಡ್ಕ ವಿದ್ಯಾಧರ್‌ರವರು ಭಾಷೆಯ ಬಳಕೆಯಲ್ಲಿ ಆಗುವ ತೊಂದರೆಯನ್ನು ವಿವರಿಸಿ, ನಮ್ಮ ಆಡುನುಡಿಗಳನ್ನು ಬಳಸಿದರೆ ಕೆಲವರಿಗೆ ಅದು ಅರ್ಥವಾಗದೆ ನಮ್ಮ ಉದ್ದೇಶ ವಿಫಲವಾಗುವ ಸಂಭವವಿರುತ್ತದೆ. ನಾವು ಆಡು ನುಡಿಗಳನ್ನು ಬಳಸದೇ ಹೋದರೆ ನಮ್ಮ ಸಂಸ್ಕೃತಿಯೇ ಅಳಿಸಿ ಹೋಗುವ ಸಂಭವವಿದೆ ಎಂದರು.

ಗೌಡ ಕನ್ನಡ ಭಾಷೆ ತನ್ನ ಒಡಲೊಳಗೆ ಹೇಳಲಾಗದ, ಆದರೆ ಹೇಳಲೇಬೇಕಿರುವ ವಿಷಯಗಳನ್ನು ಹೊರಹಾಕಲು ಪ್ರತಿಭೆಗಳಿಗಾಗಿ ಕಾದು ಕುಳಿತಿದೆ ಎಂದರು. ಗೌಡ ಭಾಷೆಯ ಮೇಲೆ ಇತರ ಭಾಷೆಗಳ ಪ್ರಭಾವವನ್ನು ವಿವರಿಸಿದ ಅವರು ಕೊಡವ ಭಾಷೆಯ ಸಂಪರ್ಕದಿಂದ ಕೊಡಗಿನಲ್ಲಿ ಗೌಡ ಕನ್ನಡ ಮಧುರವಾಗಿದೆ. ದಕ್ಷಿಣ ಕನ್ನಡ ಜಿಲ್ಲೆಯಲ್ಲಿ ಗಡುಸಾಗಿದೆ. ಬ್ರಿಟಿಷರ ಅವಗಣನೆಯಿಂದ ಗೌಡ ಕನ್ನಡ ತೀವ್ರ ಮಾನಸಿಕ ಕುಸಿತ ಕಂಡಿದೆ. ಇತ್ತೀಚೆಗೆ ಇಂಗ್ಲೀಷ್ ಭಾಷೆ ಕೂಡ ಗೌಡ ಕನ್ನಡದ ಮೇಲೆ ಪ್ರಭಾವ ಬೀರುತ್ತಿದೆ ಎಂದ ಅವರು, ಕಣ್ಮರೆಯಾಗುತ್ತಿರುವ ಭಾಷೆಯನ್ನು ಬೆಳೆಸಿ ಮುಂದಿನ ಪೀಳಿಗೆಗೆ ಉಳಿಸಬೇಕೆಂದು ಅಕಾಡೆಮಿಗೆ ಕರೆನೀಡಿದರು.

'ವಿವಿಧ ಭಾಷೆಗಳ ನಡುವೆ ಸೇತುವೆ ಕಟ್ಟಿ'

ಶ್ರೀ ಕೆ. ಪಿ. ಬಾಲಸುಬ್ರಹ್ಮಣ್ಯ

'ಹವ್ಯಕ ಕನ್ನಡ' ಭಾಷೆಯ ಬಗ್ಗೆ ಪ್ರಬಂಧ ಮಂಡಿಸಿದ ಶ್ರೀ ಕೆ. ಪಿ. ಬಾಲಸುಬ್ರಹ್ಮಣ್ಯರವರು ಯಾವುದೇ ಭಾಷೆ ಯಾವುದೇ ಜನಾಂಗಕ್ಕೆ ಸೀಮಿತವಾಗಿರುವುದಿಲ್ಲ. ಭಾಷೆಗಳ ನಡುವೆ ವಿವಾದವನ್ನು ಹುಟ್ಟು ಹಾಕುವುದನ್ನು ಬಿಟ್ಟು, ಭಾಷೆಯೊಳಗಿರುವ ಸಾಮರಸ್ಯವನ್ನು ಅರ್ಥಮಾಡಿಕೊಳ್ಳಬೇಕೆಂದರು. ಭಾಷೆಗಳ ನಡುವೆ ಗೋಡೆ ಕಟ್ಟದೆ, ಸೇತುವೆ ಕಟ್ಟುವ ಕೆಲಸ ನಡೆಯಬೇಕು. ಅಕೆಡಾಮಿ ಯಾವುದೇ ಭಾಷೆಯ ಬಗ್ಗೆ ಚರ್ಚೆ ನಡೆಸುವಾಗ, ಯಾರನ್ನೂ ಪರಕೀಯರಂತೆ ಕಾಣದೆ ಎಲ್ಲರನ್ನೂ ಸೇರಿಸಿಕೊಳ್ಳಿ ಎಂದು ವಿನಂತಿಸಿದರು.

'ಕೊಡವೇತರರಿಗೂ ಬೆಳೆಯಲು ಅವಕಾಶ ನೀಡಿ'

ಡಾ॥ ಪ್ರಭಾಕರ ಶಿಶಿಲ

'ಮಲಯಾಳಂ' ಭಾಷೆಯ ಬಗ್ಗೆ ಪ್ರಬಂಧ ಮಂಡಿಸಿದ ಡಾ॥ ಪ್ರಭಾಕರ ಶಿಶಿಲರವರು, ಕೊಡವ ಭಾಷೆಗೆ ಮಲಯಾಳ ಲಿಪಿ ಬಳಸಬಹುದೆಂಬ ಅನಿಸಿಕೆ ವ್ಯಕ್ತಪಡಿಸಿ, ಸಂಸ್ಕೃತಿ, ಸಂಪ್ರದಾಯಗಳಲ್ಲಿ, ಕೊಡಗು ಪ್ರಾಯಶಃ ಕೇರಳವನ್ನು ಹೋಲುತ್ತದೆಂದರು. ಕೊಡಗಿನಲ್ಲಿ ಕೊಡವರು ಮಾತ್ರ ಇರುವುದಲ್ಲ, ಎರವರು, ಕೆಂಬಟ್ಟಿಗಳು, ಕುಡಿಯರು, ಪಾಲೆಯರು ಮುಂತಾದವರ ಸಂಸ್ಕೃತಿ, ಸಾಹಿತ್ಯದ ಬೆಳವಣಿಗೆಗೂ ಪ್ರಯತ್ನಿಸಬೇಕು. ಸಾಹಿತ್ಯಾಭಿವೃದ್ಧಿಯನ್ನು ಕೇವಲ ಮೇಲ್ವರ್ಗದ ಕೊಡವರಿಗೆ ಮಾತ್ರ ಸೀಮಿತಗೊಳಿಸಿದರೆ ಸಾಮರಸ್ಯ ಮೂಡುವುದಿಲ್ಲ ಎಂದು ಅಭಿಪ್ರಾಯಪಟ್ಟರು.

'ತುಳುನಾಡಿಗೂ-ಕೊಡಗಿಗೂ ಸಾಮ್ಯವಿದೆ' -

ಶ್ರೀ ಪೂವಪ್ಪ ಕಣಿಯೂರು

'ತುಳು' ಭಾಷೆಯ ಬಗ್ಗೆ ಪ್ರಬಂಧ ಮಂಡಿಸಿದ ಶ್ರೀ ಪೂವಪ್ಪಕಣಿಯೂರುರವರು 1929ರ ನಂತರ ತುಳು ಭಾಷೆ ಹೆಚ್ಚು ಪ್ರಜ್ವಲಮಾನಕ್ಕೆ ಬಂದಿದೆ. ಕೊಡಗು ಮತ್ತು ತುಳುನಾಡು ಕೃಷಿ ಪ್ರಧಾನ ನಾಡುಗಳಾಗಿರುವುದರಿಂದ ಹೆಚ್ಚಿನ ಆಚರಣೆ ಸಂಪ್ರದಾಯಗಳಲ್ಲಿ ಹೋಲಿಕೆಯಿದೆ. ಆದರೆ ಆಚರಿಸಲ್ಪಡುವ ಕಾಲಮಾನದಲ್ಲಿ ಮಾತ್ರ ವ್ಯತ್ಯಾಸವಿದೆ ಎಂದರು.

ವಿಚಾರ ಸಂಕಿರಣದ ಸಂವಾದ ಸಮಾರೋಪ ಕಾರ್ಯಕ್ರಮ, ಕೊಡವ ಭಾಷೆ 8ನೇ ಪರಿಚ್ಛೇದಕ್ಕೆ : ಪರ-ವಿರೋಧ ಅಭಿಪ್ರಾಯ :

ಸೆಪ್ಟೆಂಬರ್ 15ರಂದು ಸಂಪಾಜೆಯಲ್ಲಿ 'ಕೊಡಗಿನಲ್ಲಿ ಭಾಷಾ ಸಾಂಸ್ಕೃತಿಕ ಸಾಮರಸ್ಯ' ಎಂಬ ವಿಷಯದ ಬಗ್ಗೆ ವಿಚಾರ ಸಂಕಿರಣದಲ್ಲಿ ಪ್ರಮುಖರು ತಮ್ಮ ಪ್ರಬಂಧಗಳನ್ನು ಮಂಡಿಸಿದ ಬಳಿಕ ಸಂವಾದ ಚರ್ಚೆಯಲ್ಲಿ ಪಾಲ್ಗೊಂಡ ಉಪನ್ಯಾಸಕ ಡಾ॥ ಪಟ್ಟಾಭಿರಾಮ ಸೋಮಯಾಜಿಯವರು ಮಾತನಾಡಿ, ಸಾಹಿತ್ಯ, ಸಾಂಸ್ಕೃತಿಕ ಆಸಕ್ತಿಯ ವಿಷಯದಲ್ಲಿ ಕೊಡಗು ಪ್ರತ್ಯೇಕವಾಗಿಯೇ ಉಳಿದಿದೆ ಎಂದು ಆತಂಕ ವ್ಯಕ್ತಪಡಿಸಿದರು. ಭಾರತದಲ್ಲಿ 1652 ಭಾಷೆಗಳಿವೆ. ಅವುಗಳಲ್ಲಿ ಕೇವಲ 15 ಭಾಷೆಗಳು 8ನೇ ಪರಿಚ್ಛೇದಕ್ಕೆ ಸೇರಿವೆ, ಅಂದರೆ ಕೇವಲ ಶೇ. 5ರಷ್ಟು ಜನ ಮಾತನಾಡುವ ಭಾಷೆಗಳು ಈ ಪರಿಚ್ಛೇದದಲ್ಲಿ ಸೇರಿದ್ದು ಉಳಿದ ಶೇ. 95ರಷ್ಟು ಜನ ಮಾತನಾಡುವ ಭಾಷೆಗಳು ಇದರ ಹೊರಗಿರುವುದರಿಂದ, ಈ ಪರಿಚ್ಛೇದವನ್ನೇ ತೆಗೆದು ಹಾಕಲು ಹೋರಾಟ ನಡೆಸಬೇಕೇ ಹೊರತು, ಕೊಡವ ಭಾಷೆಯನ್ನು ಅದರಲ್ಲಿ ಸೇರಿಸಲು ಹೋರಾಡುವುದು ಉಚಿತವಲ್ಲ ಎಂದು ವಾದಿಸಿದರು. ಕೊಡವ ಸಾಹಿತ್ಯ ಅಕಾಡೆಮಿ ಕೇವಲ ಕೊಡವರಿಗೆ ಮಾತ್ರ ಸೀಮಿತವಾಗಿರದೆ, ಕೊಡವ ಭಾಷೆ ಬಲ್ಲವರಿಗೆಲ್ಲರಿಗೂ ಸಂಸ್ಕೃತಿಯನ್ನೂ ಬೆಳೆಸಲು ಅನುವು ಮಾಡಿಕೊಡಬೇಕೆಂದು ಸಲಹೆ ನೀಡಿದರು.

ಇದಕ್ಕೆ ಪ್ರತಿಕ್ರಿಯಿಸಿದ ಸಾಹಿತಿ ಶ್ರೀ ಚೇಂದ್ರಿಮಾಡ. ಮುತ್ತಪ್ಪನವರು 8ನೇ ಪರಿಚ್ಛೇದವನ್ನು ತೆಗೆದು ಹಾಕಲು ನಮ್ಮ ಅಭ್ಯಂತರವಿಲ್ಲ. ಆದರೆ ಈ ಪರಿಚ್ಛೇದ ಇರುವವರೆಗೆ ಕೊಡವ ಭಾಷೆಯನ್ನು ಅದರಲ್ಲಿ ಸೇರಿಸಬೇಕೆಂದು ಹೇಳಿದರಲ್ಲದೆ, ಪ್ರತಿಯೊಬ್ಬರಲ್ಲೂ ತಮ್ಮ ತಮ್ಮ ಭಾಷೆಯ ಬಗ್ಗೆ ಅಭಿಮಾನ ಮೂಡಬೇಕು, ಆಗ ಮಾತ್ರ ಭಾಷೆ ಶಾಶ್ವತವಾಗಿ ಉಳಿಯುತ್ತದೆ ಎಂದು ಇಂಗ್ಲೀಷ್ ಮತ್ತು ಸಂಸ್ಕೃತಿ ಭಾಷೆಗಳ ಹೋಲಿಕೆ ಮಾಡಿ ನುಡಿದರು. ಲೈನ್ಕಜೆ ರಾಮಚಂದ್ರ ಮತ್ತು ರಮಾನಾಥರವರುಗಳು

20ನೇ ಪುಟಕ್ಕೆ


ಜನಾಂಗದಲ್ಲೊಬ್ಬ "ವೀರ ಮದಕರಿ ನಾಯಕ", ಪ್ರಥಮ "ಏಕಲವ್ಯ" ಪ್ರಶಸ್ತಿ ವಿಜೇತ ಭಾರತ ದೇಶದ ಕೋ ಕೋ ಟೀಂನ ನಾಯಕ, ಮೊದಲ ಕನ್ನಡಿಗ



ಬೆಳೆಯುವ ಗುಣ ಮೊಳಕೆಯಲ್ಲಿ ಎಂಬ ಮಾತು ಕೇಳಿದ್ದೇವೆ. ಆದರೆ ಒಂದು ಬೀಜ ಮೊಳಕೆಯೊಡೆದೊಡನೆ ನಮ್ಮ ಊಹನೆಗೆ ತಕ್ಕಂತೆ ಬೆಳೆಯುತ್ತದೆ ಎಂಬುದು ಸತ್ಯವಾದರೂ, ಫಲ ಕೊಡುತ್ತದೆ ಎಂಬುದು ಸುಳ್ಳು. ಕಾರಣ ನಮ್ಮ ಊಹನೆಗೆ ತಕ್ಕಂತೆ ಬೆಳೆಯಬೇಕಾದರೆ ಬೀಜಕ್ಕೆ ಸಮಯಕ್ಕೆ ಸರಿಯಾಗಿ ಆರೈಕೆಯಾಗ ಬೇಕು. ಅದು ಗಿಡ ಅಥವ ಬಳ್ಳಿಯಾಗಿ ಬೆಳೆದಾಗ ನಮ್ಮ ಇಚ್ಛೆ ಯಂತೆ ಹಬ್ಬಿಸುವುದು ಸಹಜ. ಆದರೆ ಫಲ ಕೊಡದಿದ್ದರೆ ಹೇಗೆ ತಾನೇ ಫಲ ಬರುವಂತೆ ಮಾಡಲು ಸಾಧ್ಯ. ಆಗ ಆ ಬಳ್ಳಿಯನ್ನು ಶಪಿಸಿ ಕಿತ್ತು ಬಿಸುಡಿ ಬೇರೆ ಬೀಜ ಬಿತ್ತುವುದು ಅನಿವಾರ್ಯ. ಕೊನೆಗೆ ಅದೃಷ್ಟದ ನೆಪ ಹೇಳಿ ಸಮಾಧಾನ ಪಡುವುದು ಸತ್ಯ. ಸಾರ್ವಜನಿಕ ಅಭಿಪ್ರಾಯದಂತೆ ಪ್ರಯತ್ನ ಹಾಗೂ ಅದೃಷ್ಟ ಜೊತೆಯಲ್ಲಿಯೇ ಕಾರ್ಯಪ್ರವರ್ತಿಯಾದರೆ ಫಲ ಖಂಡಿತ. ಈ ರೀತಿಯ ಪ್ರಯತ್ನ ಹಾಗೂ ಅದೃಷ್ಟ ನಮ್ಮ ಜನಾಂಗದ ಕುಡಿ "ವೀರ ಮದಕರಿನಾಯಕ", ರಾಜ್ಯ ಹಾಗೂ ರಾಷ್ಟ್ರಮಟ್ಟದ "ಏಕಲವ್ಯ" ವೀರ ಉಳುವಾರನ ದೇವಯ್ಯ ದೀಪಕ್.

ಕೊಡಗಿನ ಉಳುವಾರನ ಮನೆತನದ ದೇವಯ್ಯನವರ ಮತ್ತು ಭಾಗಮಂಡಲನಾಡು, ಚೇರಂಗಾಲ ಗ್ರಾಮದ ಮೊಟ್ಟನ ಚಂಗಪ್ಪನವರ ಮಗಳು ಚಿಮ್ಮಿಯವರ ಗರ್ಭದಲ್ಲಿ ದಿನಾಂಕ 23-9-1973ರಂದು ಕಾಂತೂರಿನಲ್ಲಿ ಉಳುವಾರನ ದೇವಯ್ಯ ದೀಪಕ್‌ನ ಜನನ. ಚಿಕ್ಕಂದಿನಿಂದಲೇ ಬಡತನವಿದ್ದರೂ ಪ್ರೀತಿಗೆ ಕೊರತೆಯಿಲ್ಲದೆ ಉಳುವಾರನ ಹಾಗೂ ಮೊಟ್ಟನ ಮನೆತನದಲ್ಲಿ ಓಡಾಡಿಕೊಂಡು ಬೆಳೆದ ದೀಪಕ್ ತನ್ನ ವಿದ್ಯಾಭ್ಯಾಸವನ್ನು ಮೈಸೂರಿನಲ್ಲಿ ಮುಂದುವರಿಸಿದ. ತನ್ನ 13ನೇ ವಯಸ್ಸಿನಲ್ಲಿ ಕೋಕೋ ಆಟವನ್ನು ಪ್ರಾರಂಭಿಸಿ, ಇಲ್ಲಿಯವರೆಗೆ ಜಿಲ್ಲಾ, ರಾಜ್ಯ, ರಾಷ್ಟ್ರ ಹಾಗೂ ಅಂತರ ರಾಷ್ಟ್ರ ಮಟ್ಟದಲ್ಲಿ ತನ್ನ ಹಾಗೂ ನಾಡಿನ ಕೀರ್ತಿ ಪತಾಕೆಯನ್ನು ಹಾರಿಸಿ, ಉಳುವಾರನ ಹಾಗೂ ಮೊಟ್ಟನ ಮನೆತನಕ್ಕೆ, ಜನಾಂಗಕ್ಕೆ, ನಾಡಿಗೆ, ರಾಜ್ಯಕ್ಕೆ, ರಾಷ್ಟ್ರಕ್ಕೆ ಗೌರವವನ್ನು ತಂದು ಕೊಟ್ಟ ಪೂರ ದೀಪಕ್‌ನ "ಭಗೀರಥ ಪ್ರಯತ್ನದ ಫಲ ಈ "ಏಕಲವ್ಯ" ಪ್ರಶಸ್ತಿಯ ಫಲ.

1986 ರಿಂದಲೇ ತನ್ನ ಕೋ, ಕೋ ಆಟವನ್ನು ಪ್ರಾರಂಭಿಸಿ ಮುಂದೆ ತಾನು ಈ ಮಟ್ಟಕ್ಕೆ ಬೆಳೆಯುವ ಕನಸೇ ಕಂಡಿರದ ದೀಪಕ್, ಕಾಟಚಾರಕ್ಕೆ ಆಡಿದ ಆಟ ತನ್ನನ್ನು ಕಾಡಿಸಿ ಅದೇ ಕೋ ಕೋ, ಆಟದಲ್ಲಿ ಇವನನ್ನು "ಏಕಲವ್ಯ" ಪ್ರಶಸ್ತಿ ಪಡೆಯುವಂತೆ ಮಾಡಿತು. ತನ್ನ ವಿದ್ಯಾಭ್ಯಾಸ 10ನೇ ತರಗತಿವರೆಗೆ ಮೈಸೂರಿನ ಡಿಂಕೀಸ್ ಶಾಲೆಯಲ್ಲಿ ಮತ್ತು ಪಿ. ಯು. ಸಿ.ಯನ್ನು ಮಹಾರಾಜ ಜೂನಿಯರ್ ಕಾಲೇಜಿನಲ್ಲಿ ಓದಿ ಕೊಂಡಿರುವಾಗಲೇ ಆಟವನ್ನು ಮೈಗೂಡಿಸಿಕೊಂಡು 1986ರಿಂದಲೇ ಮೈಸೂರಿನ "National Sports Club"ಗೆ ಸದಸ್ಯನಾಗಿ ಮುಂದುವರೆದ. ಓದುವಿನಲ್ಲಿಯೂ ಆಸಕ್ತಿಯಿದ್ದರಿಂದ ಆಟಕ್ಕೆ ತನ್ನ ಸಂಸಾರದಿಂದ ಯಾವ ಅಡೆತಡೆ ಇರಲಿಲ್ಲ. 1990ರವರೆಗೆ ಸಬ್‌ಜೂನಿಯರ್ ಹಾಗೂ ಜೂನಿಯರ್ ಆಡಿದ ದೀಪಕ್ 1990ರಲ್ಲಿ ಆಂಧ್ರದ "ಕಡಪಾ"ದಲ್ಲಿ ನಡೆದ Senior Soth Zone ಆಟದಲ್ಲಿ ಆಡಿ ಮೊದಲ ಬಹುಮಾನವನ್ನು ಪಡೆದ ನಂತರ ಹಿಂತಿರುಗಿ ನೋಡಲೇ ಇಲ್ಲ. ದಿನೇ ದಿನೇ ಈತನ ಆಟವನ್ನು ಗಮನಿಸಿದ Karnataka



Police Inspector General Mr. Anand I.P.S.ರವರು ಆ ಕ್ಷಣದಿಂದಲೇ ಇಲಾಖೆಗೆ 12-4-1993ರಲ್ಲಿ ಭರ್ತಿ ಮಾಡಿಸಿದರು. ಈಗ Police Teamನಲ್ಲಿ ಆಡುತ್ತಿರುವ ದೀಪಕ್ 1991ರಲ್ಲಿ ವಿಜಯನಗರದಲ್ಲಿ ನಡೆದ 12ನೇ Senior South Zone ಕೋ ಕೋ ಆಟದಲ್ಲಿ ಮೊದಲ ಬಹುಮಾನ ತೆಗೆದುದ್ದಲ್ಲದೆ "ವೀರ ಮದಕರಿನಾಯಕ" ಪ್ರಶಸ್ತಿಯನ್ನು 1998ರಲ್ಲಿ Indoreನಲ್ಲಿ ನಡೆದ 34ನೇ ಸೀನಿಯರ್ ರಾಷ್ಟ್ರಮಟ್ಟದ ಆಟದಲ್ಲಿ ದೀಪಕ್‌ಗೆ ರಾಷ್ಟ್ರಮಟ್ಟದ "ಏಕಲವ್ಯ" ಪ್ರಶಸ್ತಿ ದಕ್ಕಿತು. ಬಾಂಗ್ಲಾ ದೇಶದ ಢಾಕಾದಲ್ಲಿ ನಡೆದ 2ನೇ ಕೋ ಕೋ ಚಾಂಪಿಯನ್ ಷಿಪ್‌ನಲ್ಲಿ

ಭಾರತ ಟೀಂನ ಕ್ಯಾಪ್ಟನ್ ಆಗಿದ್ದೂ ಅಲ್ಲದೆ ಟೂರ್ನಮೆಂಟಿನ "Best Player" ಆಗಿ ಬಹುಮಾನವನ್ನು ಗಳಿಸಿದ. ಭಾರತ ದೇಶದ ಕೋ ಕೋ ಟೀಂನ ಕ್ಯಾಪ್ಟನ್ ಆಗಿರುವ ಮೊದಲ ಕನ್ನಡಿಗನಾಗಿರುವ ಗೌರವ ಹಾಗೂ 1987 ರಿಂದ 1998ರವರೆಗೆ ಮಹಾರಾಷ್ಟ್ರದ ಕಪಿಮುಷ್ಠಿಯಲ್ಲಿದ್ದ ಏಕಲವ್ಯ ಪ್ರಶಸ್ತಿಯನ್ನು ಕರ್ನಾಟಕಕ್ಕೆ ಕರೆತಂದ ಗೌರವವೂ ಈತನಿಗೆ ಸಲ್ಲುತ್ತದೆ. 1999ರಲ್ಲಿ ಕರ್ನಾಟಕ ಸರಕಾರ ಈತನ ಈ ಮಹಾನ್ ಸಾಧನೆಯನ್ನು ಗುರುತಿಸಿ ರಾಜ್ಯಮಟ್ಟದ "ಏಕಲವ್ಯ" ಪ್ರಶಸ್ತಿಯನ್ನು ರಾಜಭವನದಲ್ಲಿ ಕರ್ನಾಟಕದ ಹಾಲಿ ರಾಜ್ಯಪಾಲೆ ಶ್ರೀಮತಿ ರಮಾ ದೇವಿಯವರು 3ನೇ ಆಗಸ್ಟ್ 2001ರಲ್ಲಿ ನೀಡಿ ಗೌರವಿಸಿದ್ದಾರೆ. ಈತ ರಾಜ್ಯಮಟ್ಟದ ಹಾಗೂ ರಾಷ್ಟ್ರಮಟ್ಟದ ಎರಡೂ ಏಕಲವ್ಯ ಪ್ರಶಸ್ತಿ ಗೆದ್ದ ಮೊಟ್ಟ ಮೊದಲ ಕನ್ನಡಿಗನಾಗಿದ್ದಾನೆ.

ದೀಪಕ್‌ನ ತಮ್ಮ ಮೋಹನ್ ಕೂಡ ರಾಷ್ಟ್ರಮಟ್ಟದ ಕೋ ಕೋ ಆಟಗಾರನಾಗಿದ್ದು 1991ರಲ್ಲಿ ಈತನ ಸಾಧನೆಯನ್ನು ಪರಿಗಣಿಸಿ "ವೀರ ಅಭಿಮನ್ಯು" ಪ್ರಶಸ್ತಿ ನೀಡಿ ಸರಕಾರ ಗೌರವಿಸಿದೆ. ಈ ಸಾಧನೆಯ ಫಲವಾಗಿ ಈತನಿಗೆ M. B. B. S. ಸೀಟು ಲಭ್ಯವಾಗಿ ಈಗ ಅಂತಿಮ M. B. B. S.ನಲ್ಲಿ ಓದುತ್ತಿದ್ದಾನೆ. ಅಲ್ಲದೆ ಹಾಲಿ Medical College Sport Secretary ಆಗಿ ಕಾರ್ಯನಿರ್ವಹಿಸುತ್ತಿರುತ್ತಾನೆ. ಅಂತಿಮ M. B. B. S. ಓದುತ್ತಿರುವುದರಿಂದ ಓದುಗೆ ಹೆಚ್ಚು ಸಮಯ ವ್ಯಯಿಸುತ್ತಿರುವುದರಿಂದ ಹೆಚ್ಚಿನ ಪ್ರಶಸ್ತಿಯನ್ನು ಪಡೆಯಲು ಸಾಧ್ಯವಾಗಲಿಲ್ಲ.

ದೀಪಕ್ ಪ್ರತಿದಿನ ತನ್ನ ಕೋ ಕೋ ಅಭ್ಯಾಸವನ್ನು ಮುಂದುವರೆಸಿಕೊಂಡು ಹೋಗುತ್ತಿದ್ದಾನೆ. ಮುಂದೊಂದು ದಿನ ಈತನಿಗೆ "ಅರ್ಜುನ್" ಪ್ರಶಸ್ತಿ ಅಲ್ಲದೆ "ಖೇಲ್ ರತ್ನ" ಪ್ರಶಸ್ತಿ ಲಭಿಸಲಿ ಎಂದು ಜನಾಂಗದವರಾದ ನಾವುಗಳು ಶುಭ ಹಾರೈಸುವ.

ತನ್ನ ಈ ಸಾಧನೆಗೆ ದಿವಂಗತ ತಾಯಿ ಅಲ್ಲದೆ ತಂದೆಯನ್ನು ಸದಾ ನೆನಪಿಸಿ ಕಣ್ಣೀರಿಡುವ ದೀಪಕ್ ಈ ಪ್ರಶಸ್ತಿ ಯನ್ನು ಕಣ್ಣಾರೆ ಕಂಡು ಮುದ್ದಾಡುವ ತಾಯಿ ಇಲ್ಲವಲ್ಲ ಎಂಬ ಕೊರಗು ಆತನ ಮನಸ್ಸನ್ನು ಕಾಡುತ್ತಿದೆ. ಈ ವೀರನನ್ನು ಹೆತ್ತ ತಾಯಿ ಇದ್ದಿದ್ದರೆ ತನ್ನ ಕಂದನ ಹಾಗೂ ಮಕ್ಕಳ ಈ ಸಾಧನೆಯನ್ನು ಹೇಗೆ ಆಚರಿಸುತ್ತಿದ್ದಳು ಎಂಬುದು ಊಹೆಗೂ ಮೀರಿದ್ದು. ಈ ಮಕ್ಕಳನ್ನು ಹಡೆದ ತಾಯಿ ನಿಜಕ್ಕೂ ಧನ್ಯಳು.

2000ದ ಇಸವಿಯಲ್ಲಿ ಮರಗೊಡುನಾಡಿನ ಮುಕ್ಕಾಟಿ ಕುಶಾಲಪ್ಪ ಹಾಗೂ ಮೋಹಿನಿಯವರ ಮಗಳಾದ ರೋಸ್‌ನಿಯನ್ನು ಕೈಹಿಡಿದು ಸಂಸಾರಸ್ಥನಾಗಿರುವ ಈತನಿಗೆ ಜನಾಂಗದವರಾದ ನಾವುಗಳು ಪ್ರೋತ್ಸಾಹ ನೀಡಿ ಶುಭ ಹಾರೈಸುವ. ಉಳುವಾರನ ದೇವಯ್ಯ ದೀಪಕ್‌ನ ಸಾಧನೆಯನ್ನು ಗಮನಿಸಿ ಜನಾಂಗದ ಸಮಾಜಗಳು "ವೀರಮದಕರಿನಾಯಕ" ಹಾಗೂ "ಏಕಲವ್ಯ"ನನ್ನು ಸನ್ಮಾನಿಸುವುದು ಆದ್ಯ ಕರ್ತವ್ಯವೂ ಹೌದು. ದೀಪಕ್‌ನ ಸಾಧನೆಗಳ ಪಟ್ಟಿ ಈ ಕೆಳಗೆ ನಮೂದಿಸಲಾಗಿದೆ.

1)	4th Sub Junior Nationals held at Pondicherry		IInd Place
2)	5th Sub Junior Nationals held at West Bengal		Ist Place
3)	4th Junior South zone held at Pondicherry		Ist Place
4)	14th Junior Nationals held at Nagpur		IInd Place
5)	9th Senior South Zone Cadappa 1990		Ist Place
6)	10th Senior South Zone held at Thiruanpuram		Ist Place
7)	11th Senior South Zone held at Nizamabad		Ist Place
8)	12th Senior South zone held at Vijayanagarm		
	and awarded "Veera Madakari Nayaka"		Ist Place
9)	29th Senior Nationals held at Bangalore	1992	IInd Place
10)	30th Senior Nationals held at Hassan	1994	Ist Place
11)	31st Senior Nationals held at Bombay	1996	IInd Place
12)	32nd Senior Nationals held at Nasik	1996	IInd Place
13)	33rd Senior Nationals held at Payyonus	1997	IInd Place
14)	34th Senior Nationals held at Indore	1998	IIn Place
	and awarded "EKALAVYA AWARDE" 25th to 29h December 1998		
15)	35th Senior Nationals held at Delhi	1999	IInd Place
16)	36th Senior Nationals held at Latun	2000	IInd Place
17)	6th Senior Federation cup held at Punjab	1993	IIInd Place
18)	7th Senior Federation Cup held at Nizambad	1994	IInd Place
19)	8th Senior Federation Cup held at Mandya	1995	IInd Place
20)	10th Federation Cup held at Siliguri	1997	IInd Place
21)	11th Federation cup held at Delhi	1998	Ist Place
22)	12th Federation cup held at Hyderabad	1999	Ist Place
23)	13th Federation cup held at Culcutta	2000	Ist Place
24)	IIIrd National games held at Pune	1994	IInd Place
25)	IVth National games held at Bangalore	1997	IInd Place

20ನೇ ಪುಟಕ್ಕೆ

ಕೈಲು ಮುಹೂರ್ತ ಹಬ್ಬದ ಹಿನ್ನೆಲೆ

ಕೈಲು ಮುಹೂರ್ತ ಹಬ್ಬವು (ಕೈಲ್‌ಪೋದು) ಕೊಡಗಿನ ರೈತರ ಸಾಂಪ್ರದಾಯಕ ಹಬ್ಬವಾಗಿರುತ್ತದೆ. ಕೊಡಗು ಸುಮಾರು 250 ವರ್ಷಗಳ ಹಿಂದೆ ದಟ್ಟ ಅರಣ್ಯ ಪ್ರದೇಶವಾಗಿದ್ದು, ಆಗ ಇಲ್ಲಿ ಧಾಳಿ ನಡೆಸಿದ ಹೈದರಾಲಿ, ಟಿಪ್ಪು ಇವರ ಸೈನಿಕರು ತಮಗಾದ ಭೀಕರ ಅನುಭವಗಳನ್ನು ಚರಿತ್ರೆ ಹೇಳುತ್ತದೆ. ಆಗ ಕಾಡು ಪ್ರಾಣಿಗಳ ಹಾವಳಿ ಕೂಡಾ ಅಷ್ಟೇ ಇತ್ತು. ಅಲ್ಲಲ್ಲಿ ಹಂಚಿ ಹೋಗಿ ಒಂಟಿ ಮನೆಗಳನ್ನು ಹೊಂದಿದ ರೈತ ಜನರು ಒಗ್ಗಟ್ಟಿನಿಂದ ಗುಂಪಾಗಿ, ವರ್ಷವಿಡೀ ತಮ್ಮ ವ್ಯವಸಾಯ ಹಾಗೂ ಇನ್ನಿತರ ಕೆಲಸಗಳನ್ನು ಮಾಡುತ್ತಿದ್ದರು. ರೈತರು ಮಳೆಗಾಲದ ಆರಂಭದ ಕೆಲಸವನ್ನು ಸುಮಾರು 2 ತಿಂಗಳು ಪೂರ್ತಿ ಮಳೆಯಲ್ಲಿ ಕೊರೆಯುವ ಚಳಿಯಿಂದ ತಮ್ಮ ನೇಗಿಲು ನೊಗ ಮತ್ತು ಎತ್ತುಗಳೊಡನೆ ಕಳೆಯುತ್ತಿದ್ದರು. ಸೋಣತಿಂಗ ಅಂದರೆ ಸೆಪ್ಟೆಂಬರ್ 3ನೇ ದಿನದ ತನಕ ನಾಟಿಯನ್ನು ಮಾಡಬಹುದು. ನಂತರ ಅಗೆಯನ್ನು ನಿಂತಲ್ಲಿಯೇ ಬಿಟ್ಟು ಬರುವುದು ಪದ್ಧತಿ. ಹೀಗೆ ಒಬ್ಬರು ಇನ್ನೊಬ್ಬರಿಗೆ ಸಾಮೂಹಿಕವಾಗಿ ಕೆಲಸ ಕಾರ್ಯಗಳನ್ನು ನಡೆಸುತ್ತಿದ್ದರು. ಪ್ರೀತಿ, ವಿಶ್ವಾಸ, ಸಹಕಾರಗಳ ಕಾಲವಾಗಿತ್ತು ಅಂದಿನ ದಿನಗಳು. ಹಿಂದೆ ಮಳೆಗಾಲವು ವರ್ಷದ 8 ತಿಂಗಳೂ ಇರುತ್ತಿದ್ದುದರಿಂದ ಸೆಪ್ಟೆಂಬರ್ ತಿಂಗಳಷ್ಟರಲ್ಲಿ ಮುಂಗಾರಿನ ತೀವ್ರತೆ ಕಡಿಮೆ ಆದಂತೆ ನಾಟಿ ಕೆಲಸವನ್ನು ಮಾಡಿ ಮುಗಿಸಿ ದಣಿದ ರೈತರಿಗೆ ಒಂದು ದಿನ ಸಂತೋಷಕೂಟದ ಅವಶ್ಯಕತೆ ಇತ್ತು.

ಹಾಲೇರಿ ಅರಸರ ಆಳ್ವಿಕೆಯ ಹಿಂದೆಯೂ ಈ ರೀತಿ ರೈತರು ನಡೆಸುತ್ತಿದ್ದರೋ ಏನೋ. ಆದರೆ ಅರಸರು ಕೈಲ್‌ಪೋದುವಿಗೆ ಪ್ರೋತ್ಸಾಹ ನೀಡಿದರು. ಕೊಡಗು ದೇಶದ ರೈತ ಸೈನಿಕರು ಸರದಿ ಪ್ರಕಾರ ರಾಜನ ಅರಮನೆಯಲ್ಲಿ 20 ದಿವಸ ಕೆಲಸ ಮಾಡಿ 10 ದಿನ ರಜೆಯಲ್ಲಿ ಹೋಗಿ ತನ್ನ ಭತ್ತದ ಗದ್ದೆ ಕೆಲಸದಲ್ಲಿ ತೊಡಗುತ್ತಿದ್ದರು. ಆಗ ಕೊಡಗಿನ ವಿವಿಧ ಭಾಗಗಳಿಗೆ ಕಾಲ್ನಡಿಗೆ ಅಥವಾ ಕುದುರೆಗಳ ಮೇಲೆ ಹೋಗುವುದಿತ್ತು. ಕೈಲುಪೋದುವನ್ನು ತನ್ನ ನೆಂಟರಿಷ್ಟರೊಡನೆ ಕಳೆಯಲು ರೈತ ಸೈನಿಕರು ತಮ್ಮ ಮನೆಗಳಿಗೆ ಒಟ್ಟಿಗೆ ತೆರಳಿದರೆ ಒಂದು ವೇಳೆ ವೈರಿಗಳು ಆಕ್ರಮಣ ಮಾಡಿದರೆ ಅವರನ್ನು ಎದುರಿಸಲು ಕಷ್ಟವೆಂಬ ಕಾರಣಕ್ಕೆ ರಾಜನು ಸೋಣ ತಿಂಗಳು 12 ಮತ್ತು 18ರ ದಿನಗಳಂದು (ಆಗಸ್ಟ್ 28 ಮತ್ತು ಸೆಪ್ಟೆಂಬರ್ 3) 2 ಬಾರಿ ಆಚರಿಸಲು ಅನುವು ಮಾಡಿದನು. ಉದಾಹರಣೆಗೆ-ಹೊರಮಲೆನಾಡು (ಗಾಳಿಬೀಡು) ಮತ್ತು ತಾವು ನಾಡು (ಭಾಗಮಂಡಲ) ಈ ಕಡೆ 12ರಂದು ಉಳಿದ ನಾಡುಗಳಲ್ಲಿ 18ರಂದು ಆಚರಿಸಲು ವ್ಯವಸ್ಥೆ ಮಾಡಿದಾಗ, ಬೇರೆ ಬೇರೆ ಕಡೆಯಿಂದ ನೆಂಟರು ಆಚೀಚೆ ಹೋಗಿ ಬರುವುದಕ್ಕೆ ಅನುಕೂಲವಾಯಿತು. ಹೀಗೆ 12ರ ಕೈಲ್‌ಪೋದುಗೆ ಹೋದವರು ಅರಮನೆಗೆ ಬಂದ ನಂತರ 18ಕ್ಕೆ ಇನ್ನೊಂದು ಪಾಳಿಯ ಜನರು ಹೊರಡುತ್ತಿದ್ದರು. ಹೀಗೆ ರೈತ ಸೈನಿಕರು ಕಾವಲುಗಾರರು 20 ದಿನ ಅರಮನೆಯಲ್ಲೂ 10 ದಿನ ತಮ್ಮ ಗದ್ದೆಯ ಕೆಲಸ ಮಾಡುವ ಅವಕಾಶವನ್ನು ಅರಸರು ಮಾಡಿಕೊಟ್ಟರು. ಹೀಗೆ ಮಡಿಕೇರಿ ಅರಮನೆಯಲ್ಲಿ ವರ್ಷದ 365 ದಿನವೂ ಕಾವಲುಗಾರರು ಇರುವ ಹಾಗಾಗುತ್ತಿತ್ತು. ಇಂತಹ ದಿನಗಳಲ್ಲಿ ತಮ್ಮ ನೆಂಟರಿಷ್ಟರ ಇತರ ನಾಡುಗಳಿಗೆ ಹೋಗಿ 4 ದಿನವಿದ್ದು ಹಾಯಾಗಿ ಸಂತೋಷದಿಂದ ಬರುತ್ತಿದ್ದರು.

ಕೈಲುಪೋದು ದಿನ ಬೆಳಿಗ್ಗೆ ರೈತ ಗಂಡಸರು ಎದ್ದು ಮನೆಯ ಹೊರಮನೆ (ಲೈನ್‌ಮನೆ) ಶುಚಿ ಮಾಡಿ ತಾವು ಗದ್ದೆ ಕೆಲಸಕ್ಕೆ ಬಳಸಿದ ನೇಗಿಲು, ನೊಗ ಗುದ್ದಲಿ ಕತ್ತಿ ಕೋವಿ ಪಿಕ್ಕಾಸಿ ಈ ತರದ ಎಲ್ಲಾ ವಸ್ತುಗಳನ್ನು ಮತ್ತು ಎತ್ತುಗಳ ಮೈಯ್ಯನ್ನು ಭತ್ತದ ಹುಲ್ಲಿನಿಂದ ನೀರು ಹಾಕಿ ಒರೆಸಿ ತೊಳೆದು ಕ್ರಮವಾಗಿ ಇಟ್ಟು, ದಪ್ಪ ಗಂಧದ ಕೊರಡನ್ನು ಕಲ್ಲಿನಲ್ಲಿ ತೇದು ಅರಶಿನ ಮಿಶ್ರಮಾಡಿ ಗಂಧವನ್ನು ಹಚ್ಚಿ ಬಾಳೆಯ ತಟ್ಟೆಯಲ್ಲಿ ಬೆಂಕಿಯ ಕೆಂಡವನು ಹಾಕಿ ಗಂಧದ ಚೂರು ಮತ್ತು ಧೂಪದ ಹುಡಿಯನ್ನು ಹಿಡಿ ತುಂಬಾ ಹಾಕಿ ದಪ್ಪ ಹೊಗೆಯಿಂದ ನೇಗಿಲನ್ನು ಪೂಜಿಸಿ ಆರತಿ ಬೆಳಗುತ್ತಾರೆ. ಎತ್ತುಗಳ ಹಣೆಗೆ ಗಂಧ ಹಚ್ಚಿ ಕೊಂಬಿಗೆ ಹೂವಿನ ಅಲಂಕಾರ ಮಾಡುತ್ತಾರೆ. ಹೆಂಗಸರು ಹುರಿದ ಅಕ್ಕಿಯ ತರಿಯಿಂದ ತೊಳಸಿದ ಹಿಟ್ಟನ್ನು ಮಾಡಿ 2 ಮೊರಗಳಲ್ಲಿ ತುದಿ ಬಾಳೆಲೆ ಇಟ್ಟು ಪಾಯಸದಂತೆ ಹರಡಿ ಪ್ರಸಾದವಾಗಿ ಎತ್ತುಗಳಿಗೆ ತಿನ್ನಲು ಕೊಡುತ್ತಾರೆ. ಎತ್ತುಗಳು ತಿನ್ನುವುದನ್ನು ಕಂಡು ರೈತ ಸಂತೃಪ್ತಿ ಪಡುತ್ತಾನೆ. ವರ್ಷದ ಅನ್ನಕ್ಕೆ ದುಡಿದ ಎತ್ತಿನ ಋಣವನ್ನು ತೀರಿಸುವುದು ಹೀಗೆಂದು ನೆನೆಯುತ್ತಾನೆ.

ನೇಗಿಲು ಪೂಜೆ ಮುಗಿದಂತೆ ಸಾಯಂಕಾಲ ಅದನ್ನು ಅಟ್ಟದ ಮೇಲೆ ಸೇರಿಸಿದರೆ ಮತ್ತು ತೆಗೆಯುವುದು ಮುಂದಿನ ಯುಗಾದಿ ಸಮಯಕ್ಕೆ.

ಇದಿಷ್ಟು ಬೆಳಗಿನ ಕೆಲಸವಾದರೆ ಹಿಂದೆ ಬಂದ ನೆಂಟರಿಷ್ಟರು ಮಧ್ಯಾಹ್ನಕ್ಕೆ ಮಾಂಸದೂಟವನ್ನು ಬೈನೆ ಮರದ ಸೇಂದಿಯನ್ನು ಭತ್ತದಿಂದ ಮಾಡಿದ ಸಾರಾಯಿಯನ್ನೊ ಕುಡಿಯುತ್ತಿದ್ದರು. ನಂತರ ಊರಿನವರೆಲ್ಲಾ ಊರಿನ ಅಂಬಲದ ಮೈದಾನದಲ್ಲಿ ಸೇರಿ ತೆಂಗಿನ ಕಾಯಿಗೆ ಗುಂಡು ಹೊಡೆಯುವುದು, ಭಾರದ ಗುಂಡು ಎಸೆತಗಳನ್ನು ಆಡುತ್ತಿದ್ದರು. ಇದು ನಿಜವಾದ ಕೈಲ್ ಮುಹೂರ್ತ ಹಬ್ಬ.

ಇದು ಕೊಡಗಿನ ರೈತರ ಹಬ್ಬವಾದರೆ ಇಂದು ಉದ್ಯೋಗಾರ್ಥಿಗಳಾಗಿ ನಗರ ಪ್ರದೇಶಕ್ಕೆ ತೆರಳಿದ ಕುಟುಂಬ ದವರೊಂದಿಗೆ ಇತರರೂ ಸೇರಿ ಆಟೋಟ ಊಟ ಭಾರ ಗುಂಡು ಎಸೆತ ಹಗ್ಗ ಜಗ್ಗಾಟ ಮತ್ತು ಇತರ ಪ್ರತಿಭೆಗಳಲ್ಲಿ ಬಲಾ ಬಲ ಪ್ರದರ್ಶಿಸಿ ಸಂತೋಷಪಡುತ್ತಾರೆ. ತೆಂಗಿನಕಾಯಿಗೆ ಕಲ್ಲು ಹೊಡೆಯುವುದು ಗುಂಡು ಹಾರಿಸುವುದು ಇವುಗಳ ಬಗ್ಗೆ ಮಹಿಳೆಯರಿಗೂ ಮಕ್ಕಳಿಗೂ ತರಬೇತಿ ನೀಡುತ್ತಾರೆ ಹಿರಿಯರು. ತಮ್ಮ ಗಂಡು ಮಕ್ಕಳಿಗೆ ಕೋವಿಯನ್ನು ಆ ದಿನ ಹಿಡಿಸುತ್ತಾರೆ. ಇಂದು ಸಾಂಪ್ರದಾಯದ ಹಬ್ಬದಿಂದ ಸಂಘಟನೆಯಾಗುತ್ತಿದೆ. ಯುವ ಪ್ರತಿಭೆ ಸಂಘಟನೆ ರಾಜಕೀಯ ಪ್ರೋತ್ಸಾಹ ಇಂತಹ ವಿಷಯಗಳನ್ನು ಚರ್ಚಿಸುವ ಒಂದು ವೇದಿಕೆಯಾಗಿದೆ. ಪ್ರತಿಭಾ ಪ್ರದರ್ಶನಕ್ಕೆ ಅವಕಾಶವಿದೆ. ಹೀಗೆ ಇದು ಒಂದು ರೈತರ ನಾಡ

ಮುಂದಿನ ಪುಟಕ್ಕೆ

ಸಾಧನೆಯ ಹಾದಿಯಲ್ಲಿ :

ಇತಿಹಾಸದ ಪುಟಗಳನ್ನು ತಿರುವಿದಾಗ ನಮ್ಮ ಗಮನ ಸೆಳೆಯುವ ಅಂಶವೆಂದರೆ, 'ಪ್ರತಿಯೊಂದು ಗೆಲುವಿನ ಕತೆಗಳು ಸೋಲಿನಿಂದ ಕೂಡಿರುತ್ತದೆ'-ಆದರೆ ನಮ್ಮ ಮನಸ್ಸಿನಲ್ಲಿ ಗೆಲುವಿನ ಹಿಂದಿನ ಅಪಾರ ಪರಿಶ್ರಮವಾಗಲಿ ಅಥವಾ ಸೋಲಿನ ಹಿಂದಿನ ನೋವಿನ ಕ್ಷಣಗಳಾಗಲಿ, ಬಹಳ ಕಾಲ ನಿಲ್ಲುವುದಿಲ್ಲ. ನಾವು ಸಫಲತೆಯ ಸುಖಾಂತವನ್ನು ಮಾತ್ರ ನೆನಪಿನಲ್ಲಿಟ್ಟುಕೊಂಡು, 'ಓ, ಬಿಡಿ-ಆತ ಅದೃಷ್ಟಶಾಲಿ, ದೇವರ ದಯೆಯಿದ್ದದ್ದರಿಂದ ಜಯ ಶೀಲನಾದ' ಎಂದು ಉದ್ಗರಿಸಿ ಸುಮ್ಮನಾಗುತ್ತೇವೆ.

21ರ ಹರೆಯದ ಯುವಕನೊಬ್ಬ ವ್ಯಾಪಾರಕ್ಕೆ ಕೈಹಾಕಿ ನಷ್ಟ ಹೊಂದಿದ. 22ನೇ ವಯಸ್ಸಿಗೆ ಲೆಜಿಸ್ಲೇಟಿವ್ ಚುನಾವಣೆಯಲ್ಲಿ ಸೋತ. 24ಕ್ಕೆ ಮತ್ತೆ ವ್ಯಾಪಾರಕ್ಕೆ ಕೈಹಾಕಿ ದುಡ್ಡು ಕಳೆದುಕೊಂಡ. 26ನೇ ವಯಸ್ಸಿಗೆ ಆತನ ಪ್ರೇಯಸಿ ತೀರಿಕೊಂಡಳು. ಅತೀವ ದುಃಖದಿಂದ ಆತ 27ನೇ ವಯಸ್ಸಿನಲ್ಲಿ Nervous Break downನಿಂದ ಬಳಲಿದ. ನಿಧಾನವಾಗಿ ಚೇತರಿಸಿಕೊಂಡು 34ರಲ್ಲಿ ಕಾಂಗ್ರೆಸ್ ಚುನಾವಣೆಗೆ ಸ್ಪರ್ಧಿಸಿ ಮತ್ತೆ ಸೋತ. 45ರಲ್ಲಿ ಸಿನೇಟ್ ಚುನಾವಣೆಯಲ್ಲಿ ಪರಾಜಯವನ್ನನುಭವಿಸಿ 47ರಲ್ಲಿ ವೈಸ್ ಪ್ರೆಸಿಡೆಂಟ್ ಪದವಿಗಾಗಿ ಸೆಣೆಸಾಡಿದ. ಅದರಲ್ಲೂ ಗೆಲುವು ಸಿಗಲಿಲ್ಲ. ಕೊನೆಗೆ 52ನೇ ವಯಸ್ಸಿಗೆ ಅಮೇರಿಕಾದ ಪ್ರೆಸಿಡೆಂಟ್ ಪದವಿಗೇರಿದ. ಈತ ಅಮೇರಿಕಾದ ಪ್ರಸಿದ್ಧ ವ್ಯಕ್ತಿ ಅಬ್ರಹಾಂ ಲಿಂಕನ್.

ರೈಟ್ ಸಹೋದರರು ಗಾಳಿಗಿಂತ ಭಾರವಾದರೂ ಗಾಳಿಯಲ್ಲಿ ಹಾರಾಡಬಲ್ಲ ಯಂತ್ರವನ್ನು ಕಂಡುಹಿಡಿಯಲು ಪ್ರಯತ್ನಿಸುತ್ತಿದ್ದರು. ಡಿಸೆಂಬರ್ 10, 1903ರಂದು 'ದಿ ನ್ಯೂಯಾರ್ಕ್ ಟೈಂಸ್' ಪತ್ರಿಕೆಯಲ್ಲಿ ರೈಟ್ ಸಹೋದರರು ಮಾಡಲೆತ್ನಿಸಿದ್ದ ಅನ್ವೇಷಣೆಯ ಬಗ್ಗೆ ತೀವ್ರವಾದ ಖಂಡನೆ ಪ್ರಕಟಗೊಂಡಿತು. ಸರಿಯಾಗಿ ಒಂದು ವಾರದ ನಂತರ ಕಿಟ್ಟೀಹಾಕ್ ಎಂಬಲ್ಲಿ ರೈಟ್ ಸಹೋದರರು ತಾವು ಕಂಡುಹಿಡಿದ ಪುಟಾಣಿ ಯಂತ್ರದಲ್ಲಿ ಕೂತು ಆಕಾಶದಲ್ಲಿ ಹಾರಾಡಿ ಜಗತ್ತನ್ನೇ ಅಚ್ಚರಿಗೊಳಿಸಿದರು.

ವ್ಯಂಗ್ಯಚಿತ್ರಕಾರ ವಾಲ್ಟ್‌ಡಿಸ್ನೀ ಬರೆದ ಚಿತ್ರಗಳನ್ನು ಪತ್ರಿಕೆಗಳು ಅನೇಕ ಬಾರಿ ನಿರಾಕರಿಸಿದ್ದಲ್ಲದೆ, 'ನಿನಗೆ ಪ್ರತಿಭೆಯಿಲ್ಲ' ಎಂದು ಹೇಳಿಕಳಿಸಿಬಿಟ್ಟರು. ಒಂದು ದಿನ ಮಂತ್ರಿಯೊಬ್ಬ ಚರ್ಚ್ ಒಂದರಲ್ಲಿ ಆತನಿಗೆ ಹಲವಾರು ಚಿತ್ರಗಳನ್ನು ಬರೆಯುವ ಕೆಲಸ ವಹಿಸಿದ. ಡಿಸ್ನೇ ಚರ್ಚ್ ಪಕ್ಕದಲ್ಲಿದ್ದ ಪಾಳುಬಿದ್ದ ಷೆಡ್ ಒಂದರಲ್ಲಿ ಚಿತ್ರ ರಚಿಸುತ್ತಿದ್ದಾಗ ಹತ್ತಿರ ಸುಳಿದಾಡುತ್ತಿದ್ದ ಚಿಕ್ಕ ಇಲಿಯೊಂದನ್ನು ನೋಡಿ ಸ್ಫೂರ್ತಿಗೊಂಡ. ಅಂದಿನಿಂದಲೇ ಪ್ರಾರಂಭವಾಗಿದ್ದು Mickey Mouseನ ಕಾರ್ಟೂನ್ ಜಗತ್ತು.

ಕಿವಿ ಮಂದವಾಗಿದ್ದ 4 ವರ್ಷದ ಪುಟ್ಟ ಬಾಲಕನೊಬ್ಬ ಅಳುತ್ತಾ ಮನೆಗೆ ಬಂದ. ಆತನ ಕಿಸೆಯಲ್ಲಿ ಆತನ ಕ್ಲಾಸ್ ಟೀಚರ್ ಕಳಿಸಿದ್ದ ಪುಟ್ಟ ಪತ್ರವಿತ್ತು. "ನಿಮ್ಮ ಟಾಮಿ ದಡ್ಡ ಶಿಖಾಮಣಿ, ಆತನಿಗೆ ಏನನ್ನು ಕಲಿಸಲಾಗುವುದಿಲ್ಲ. ದಯವಿಟ್ಟು ಆತನನ್ನು ಶಾಲೆಯಿಂದ ಬಿಡಿಸಿಬಿಡಿ" ಎಂದು ಆ ಪತ್ರದಲ್ಲಿ ಬರೆದಿತ್ತು. ಆ ಪತ್ರವನ್ನು ಓದಿ ದುಃಖಭರಿತ ತಾಯಿ - "ನನ್ನ ಟಾಮಿ ದಡ್ಡನಲ್ಲ. ಆತನಿಗೆ ನಾನೇ ಪಾಠ ಹೇಳಿಕೊಡುತ್ತೇನೆ" ಎಂದು ಕಾಗದ ಬರೆದು ತಿಳಿಸಿದಳು. ಆ ಪುಟ್ಟ ಬಾಲಕ ಟಾಮಿ ದೊಡ್ಡವನಾಗಿ Thomas Alva Edisonನಾದ. ಆತನಿಗೆ ದೊರೆತೆ ಶಾಲಾ ವ್ಯಾಸಂಗ ಕೇವಲ 3 ತಿಂಗಳು ಮಾತ್ರ. ಅದಲ್ಲದೆ, ಆತನಿಗೆ ಕಿವಿ ಕೂಡ ಸರಿಯಾಗಿ ಕೇಳುತ್ತಿರಲಿಲ್ಲ. Edison ಕಂಡುಹಿಡಿದ ಟೆಲಿಗ್ರಾಫ್, ಫೋನೋ ಗ್ರಾಮ್, ಎಲೆಕ್ಟ್ರಿಕ್ ಬಲ್ಪ್ ಇನ್ನೂ ಹಲವಾರು ಆವಿಷ್ಕಾರಗಳಿಗಾಗಿ ಮಾನವ ಜನಾಂಗವೇ ಆತನಿಗೆ ಋಣಿಯಾಗಿದೆ.

ಬಲ್ಪ್ ಕಂಡುಹಿಡಿಯುವ ಪ್ರಯತ್ನದಲ್ಲಿ Edison 10,000 ಸರ್ತಿ ಸೋತು, ಬಳಿಕ ಸಫಲತೆಯನ್ನು ಪಡೆದರು.

ಹೆನ್ರಿ ಫೋರ್ಡ್ [Henry Ford] ತನ್ನ ಮೊದಲ ಕಾರಿನಲ್ಲಿ ರಿವರ್ಸ್ ಗೇರ್ ಇಡುವುದನ್ನೇ ಮರೆತುಬಿಟ್ಟಿದ್ದನಂತೆ. ಯುವಕ Beethovanನನ್ನು ಸಂಗೀತದ ಗಂಧವೇ ಇಲ್ಲದವನೆಂದು ತಿರಸ್ಕರಿಸಿದ್ದರು. ಆದರೆ ಆತ ಜಗತ್ತಿನಲ್ಲೇ ಉನ್ನತವೆಂದು ಪರಿಗಣಿಸಲ್ಪಡುವ ಸಂಗೀತವನ್ನು ನೀಡಿದ್ದಾನೆ.

ಈ ಎಲ್ಲಾ ಸಾಧಾರಣ ವ್ಯಕ್ತಿಗಳು ಅಸಫಲತೆಯ ರುಚಿಯನ್ನು ನೋಡಿದ ನಂತರವೇ ಗೆಲುವನ್ನು ಕಂಡುಕೊಂಡು ಜಗತ್ತಿನಲ್ಲಿ ಅಸಾಧಾರಣರೆನಿಸಿಕೊಂಡಿದ್ದಾರೆ. No pain, no gain ಎಂಬಂತೆ, ಕಷ್ಟಪಡದೆ ಸುಖ ನಿಮ್ಮದಾಗದು. ಈ ವ್ಯಕ್ತಿಗಳು ಪ್ರತಿ ಸರ್ತಿ ಸೋಲನ್ನನುಭವಿಸಿದಾಗ ಹಲ್ಲು ಕಚ್ಚಿ ಮತ್ತೆ ಪ್ರಯತ್ನಕ್ಕೆ ನಿಂತು ಪಣತೊಟ್ಟು ಸಾಧಿಸಿದರು. ಪ್ರತಿ ಸರ್ತಿ ಸೋತಾಗ ಅದರಿಂದ ಪಾಠ ಕಲಿತು ನಾವು ಮುಂದೆ ಸಾಗಬೇಕು. ಅಡಚಣೆಗಳು ಬಾಳಿನ ಪ್ರತೀ ಹಂತದಲ್ಲೂ ಸರ್ವೇ ಸಾಮಾನ್ಯ. ದುಃಖಿತಪ್ತರಾದಾಗ ಮನಸ್ಸಿನಲ್ಲಿ ರೋಷ ಹಾಗೂ ಸಾಧಿಸಲೇ ಬೇಕೆಂಬ ಛಲ ಹೊಂದಬೇಕು. ಭಯ ಹಾಗೂ ಸಂಶಯಗಳು ಮನಸ್ಸಿನಲ್ಲಿ ಅಳುಕನ್ನುಂಟು ಮಾಡುತ್ತವೆ. ಸೋತಾಗ-'ನಾನು ಸೋಲಲು ಕಾರಣಗಳೇನು?' ಎಂದು ವಿಶ್ಲೇಷಿಸಿ ಮರುಪ್ರಯತ್ನ ಮಾಡಿ. ಕೊಡಗು ಸಂಗಾತಿ ಹಠವನ್ನು ಬಿಡದೆ, ಧೈರ್ಯವಾಗಿ ಮುಂದುವರಿಯಲಿ. ಆಗ ಮಾತ್ರ ನಾವು ಸೋಲೆಂಬ ಎಡಗ ಬಹುದಾದ ಬಂಡೆಕಲ್ಲನ್ನು ಸಫಲತೆಯ ಮೆಟ್ಟಿಲುಗಳನ್ನಾಗಿ ಪರಿವರ್ತಿಸಿಕೊಳ್ಳಲು ಸಾಧ್ಯ.

- ಎಡಿಕೇರಿ ಸುದರ್ಶನ್, ಬೆಂಗಳೂರು

ಹಿಂದಿನ ಪುಟದಿಂದ

ಹಬ್ಬವಾಗಿ ಮುಂದುವರಿಯುತ್ತಾ ತನ್ನ ಸಾಂಪ್ರದಾಯದ ಮಹತ್ವವನ್ನು ಉಳಿಸಿಕೊಳ್ಳಬಹುದೆಂಬ ನಂಬಿಕೆಯಿದೆ. ಕರ್ನಾಟಕ ಸರ್ಕಾರ ರಜೆ ಘೋಷಿಸಿರುವುದರಿಂದ ಎಲ್ಲರಿಗೂ ಅನುಕೂಲವಾಗುವಂತೆ ತಾ॥ 3ನೇ ಸೆಪ್ಟೆಂಬರ್‌ನಂದು ಎಲ್ಲರೂ ಕೊಡಗಿನಾದ್ಯಂತ ಒಂದೇ ದಿನ ಆಚರಿಸುವುದು ಉತ್ತಮವೆಂದು ಪರಿಗಣಿಸಿ ಘೋಷಿಸಲ್ಪಟ್ಟಿದೆ.

- ಬೈತಡ್ಕ ಜಾನಕಿ, ಮಡಿಕೇರಿ

ಮದುವೆಗೆ ಹೇಳುವ ಕ್ರಮ ಮತ್ತೆ ಚಪ್ಪರ ಕಂಬ ನೆಡ್ದು

ಕೊಡಗು ಗೌಡ ಮಹಿಳಾ ಒಕ್ಕೂಟದವರು ನಡೆಸಿಕೊಟ್ಟ ಹಳೆಗನ್ನಡ (ಅರೆಬಾಸೆ) ಕಾರ್ಯಕ್ರಮ, ಮಡಿಕೇರಿ ಆಕಾಶವಾಣಿ, ಪ್ರಸಾರ : 17-7-2001 ಮಹಿಳಾ ಲೋಕ, ಭಾಗವಹಿಸಿದವರು : ಬೈತಡ್ಕ ಜಾನಕಿ, ಬೈತಡ್ಕ ದೇವಮ್ಮ, ಪಂಜಿಪಳ್ಳ ಇಂದ್ರಾಕ್ಷಿ, ಮಂಞಾಂಡ್ರ ರೇಖಾ

ಹಿಂದೆನ ಕಾಲಲಿ ಎಲೆ ಅಡ್ಕೆನ ಹರಿವಾಣಲಿ ತುಂಬ ತುಂಬುಸಿ ಮನೆ ಮನೆಗೆ ಹೋಗಿ ವೀಳ್ಯ ಕೊಟ್ಟ್ ಬಾಕೆ ಹೇಳ್ದು ಕ್ರಮ. ಕಾಲ ಮುಂದುವರ್ದಂಗೆ ಆಮಂತ್ರಣ ಪತ್ರಿಕೆ ಮಾಡ್ಸಿ-ಕುಟುಂಬದವುಕೆ ಸ್ವಾದರದವುಕೆ ಹೇಳಿ ವೀಳ್ಯಕೊಟ್ಟ್. ಮದುವೆಗೆ ಬಂದ್ ಲಾಯ್ಕಾಗಿ ನಡ್ಸಿಕೊಡಕುತ ಕೇಳಿಕಂಡ್ ಅವರ ಪಾದ ಮುಟ್ಟಿ ನಮಸ್ಕಾರ ಮಾಡುವ ಈ ಪದ್ಧತಿ ಇಂದಿಗೂ ನಡಿತಾಉಟ್ಟು.

ಇನ್ನ್ 3 ವೀಳ್ಯ ಕೊಟ್ಟುವೆ. 1. ವಾದ್ಯ ಮಾಡುವವುಕೆ 2. ಮಡಿವಾಳಂಗೆ ಮಡಿಬಟ್ಟೆ ಹಾಸಿಕೆ ಮತ್ತೆ ಮೇಲ್ಕಟ್ಟ್ ಕಟ್ಟಕ್ಕೆ 3. ಕ್ಷೌರಿಕಂಗೆ. ಗಂಡ್‌ನ ಮದುವೆ ಆದರೆ ಮೊಖ ಚವರ ಮಾಡಿಕೆ-ಇವುಕೆ ಸಹ ಆಮಂತ್ರಣ ಪತ್ರಿಕೆ ಸಮೇತ ಐದೆಲೆ ಎದಡಿಕೆ ಸೇರ್ಸಿಕೊಟ್ರ್ ಅವರ ಖರ್ಚು ವೆಚ್ಚಗಳ ಬಗ್ಗೆ ಮಾತಾಡೊಕು ಈ ಮೂವರಿಗೆ ಕೊಡುವ ವೀಳ್ಯಕ್ಕೆ ಸಂಚಿಕಾರ ಹೇಳುವೆ.

ಇನ್ನ್ ಚಪ್ಪರ ಕಂಬ ಹಾಕುವ ಕೆಲ್ಸ. ಚಪ್ಪರಕ್ಕಿರುವ ಕಂಬಗಳ ಕಡಿಯಕೆ ಊರವು ಮತ್ತೆ ನೆರೆಕರೆಯವು ಚಪ್ಪರದ ದಿನ ಹೊತಾರೆ ಬಂದ್ ಮನೆಯವರ ಕೈಂದ ಕತ್ತಿ ತಕಂಡ್ ಕಾಡಿಗೆ ಹೋಗಿ (ಹಾಲ್ ಬರುವ ಮರದ) ಹಲಸ್‌ನ ಮರದ 12 ಕಂಬಗಳ್ನ ಕಡ್ದ್ ತಂದ್ ಕಂಬಗಳ್ನ ಎಲ್ಲಿ ಮಡ್ಗುದುತ ಕೇಳುವೆ. ಅದರ್ನ ಈಗ ಹಾಡ್‌ನ ರೂಪಲಿ ಕೇಳೊನೊ.

ಸೋಬಾನೆ

ಮೂಡಂದ ಬಂದಾವು ಮುತ್ತೀ...... ನಾ ಹಸೆಕಂಬಾ ....।
ಯಾವ ಮೂಲೆಲಿ ನಿಲ..... ಬೇಕು?...... ಯಾವ..... ಮೂಲೆಲಿ
ನಿಲಬೇಕು ಈ ಕಂಬಾ.... ಈಶಾನ್ಯದ ಮೂಲೆಲಿ ನಿಲ...ಬೇಕು ॥

ಪಡುವಂದ ಬಂದಾವು ನೀಲಾದ......ಹಸೆಕಂಬಾ ....।
ಯಾವ ಮೂಲೆಲಿ ನಿಲ..... ಬೇಕು?...... ಯಾವ..... ಮೂಲೆಲಿ
ನಿಲಬೇಕು ಈ ಕಂಬಾ.... ವಾಯುವ್ಯದ ಮೂಲೆಲಿ ನಿಲ...ಬೇಕು ॥

ಬಡಗಂದಾ-ಬಂದಾವು ಬೆಡಗಿನ ಹಸಕಂಬಾ-
ಯಾವ ಮೂಲೆಲಿ ನಿಲಬೇಕು ಯಾವ ಮೂಲೆಲಿ
ನಿಲಬೇಕು ಈ ಕಂಬಾ-ಆಗ್ನೇಯದ ಮೂಲೆಲಿ-ನಿಲ...ಬೇಕು ॥

ತೆಂಕಂದ-ಬಂದಾವು ಅಪರಂಜಿ ಹಸೆಕಂಬಾ-
ಯಾವ ಮೂಲೆಲಿ ನಿಲ-ಬೇಕು ?-ಯಾವ ಮೂಲೆಲಿ
ನಿಲಬೇಕು ಈ ಕಂಬಾ-ನೈಋತ್ಯದ ಮೂಲೆಲಿ-ನಿಲಬೇಕು ?

ಆ ಮೂಲೆ ಈ ಮೂಲೆ ನಾವೇನು ಬಲ್ಲೇವು-
ನಾಲ್ಕು ರಾಜ್ಯಕ್ಕೆ ಹೆಸರಾದ ಈ ಕಂಬಾ-ದೇವರ ಮೂಲೆಲಿ ನಿಲಬೇಕು-।

ಒಂದು ಕಂಬಕೆ ಚಿನ್ನಾ । ಒಂದು ಕಂಬಕೆ ರನ್ನಾ ।
ಮುಂದಿನ ಕಂಬಕೆ ಮುಡುವಾಳ । ಮುಂದಿನ ಕಂಬಕೆ
ಮುಡುವಾಳ ಪಚ್ಚೆತೆನೆ । ಕುಲಸ್ವಾಮಿ ದೇವರ ಮೂಲೆಲಿ ನಿಲಬೇಕು-।

ಮೂಡಲಿಂದಾ ಬಂದಾ ಮುತ್ತೀನಾ ಹಸೆಕಂಬಾ-
ಎತ್ತಿದರೆ ಮುತ್ತು ಗಿಲಿರೆಂದು । ಎತ್ತಿದರೆ ಮುತ್ತು
ಗಿಲಿರೆಂಬಾ ಈ ಕಂಬಾ..... ದೇವರ ಮೂಲೆಲಿ ನಿಲ....ಬೇಕು ॥

ಇನ್ನ್ ಕಂಬಗಳ ಮಹತ್ವ :

ಸಾಮಾನ್ಯವಾಗಿ ಎಲ್ಲವರ ಮದುವೆಲೂ ಚಪ್ಪರ ಹಾಕುವೆ. ಆದರೆ ನಮ್ಮ ಹತ್ತು ಕುಟುಂಬ ಹದ್ನೆಂಟ್ ಗೋತ್ರದ ಗೌಡ ಜನಾಂಗದವು ಮನೆ ಮುಂದೆ ತಪ್ಪದೆ 12 ಕಂಬಗಳ್ನ ನೆಟ್ಟುವೆ. (ಹಾಕುವೆ) ಆ ಕಂಬಗಳ ಬುಡನ ಸೆಗಣಿ ಹಾಕಿ ಸಾರ್ಸಿ-ರಂಗೋಲೆ ಬರ್ದ್ ಅಲ್ಲಿ 12 ಮಣ್ಣ್‌ನ ಗುಂಬಗಳ್ನ ಮಡ್ಗುವೆ. ಗುಂಬಗಳಿಗೆ ಸುಣ್ಣದ ತುಂಡುಂದ ಚಿತ್ತಾರಗಳ್ನ ಬರ್ದಿದ್ದವೆ. ವೀಳ್ಯದೆಲೆ ಅಡ್ಕೆನೂ ಮಡ್ಗುವೆ.

ಚಪ್ಪರದ ಮಧ್ಯ ಬಾಗಲಿ ಇರುವ 4 ಕಂಬಗಳಿಗೆ ವಿಸೇಸ ಸ್ಥಾನ ಉಟ್ಟು. ಇದರ್ಲಿ ಬಲಬಾಗಲಿ ಒಂದು ಹಾಲ್ ಬರುವ ಮರದ ಕಂಬನ ನೆಟ್ಟುವೆ. ಇದ್ಕೆ ಹಾಲೆ ಮರದ ಕಂಬ ತೇಳುವೆ. ಇದ್ ಗಣಪತಿ ಸಂಕೇತ. ಉಳ್ದ 3 ಕಂಬಗಳಿಗೆ ಬ್ರಹ್ಮ ವಿಷ್ಣು ಮಹೇಶ್ವರತ ತ್ರಿಮೂರ್ತಿಗಳ ಸ್ಥಾನ ಕೊಟ್ಟಲೊ. ಇನ್ನಿರುವ 8 ಕಂಬಗಳಿಗೆ ಅಷ್ಟದಿಕ್ಪಾಲರ ಹೆಸ್ರ್ ಕೊಟ್ರಲೊ ಮಧ್ಯ ಬಾಗಲಿ ಬರುವ ಹಾಲೆ ಮರದ ಕಂಬಗಳಿಗೆ ಗೊನೆಯಿರುವ 2 ಬಾಳೆ ಕಂಬಗಳ್ನ ನೆಟ್ಟ್ ಮಾವಿನೆಲೆ ತ್ವಾರಣಕಟ್ಟುವೆ. ಮತ್ತೆ ತೂಗುದೀಪ ತೂಗುವೆ. ಕೆಳಗೆ ಗಣಪತಿಗೆ ಹಣ್‌ಕಾಯಿ ಮಡ್ಗಿ ಮ್ಯಾಲೆ ಮೇಲ್ಕಟ್ರ್‌ಕಟ್ಟಿ. ಅಲಂಕಾರಕ್ಕೆ ಹಣ್ಣ್ ಸೌತೆಕಾಯಿಗಳ್ನ ತೂಗುವೆ. ತೆಂಗಿನಕಾಯಿ ಎಲೆ ಹಣ್ಣಡಿಕೆನೂ ಕಟ್ಟುವೆ. 4 ಕಂಬಗಳ ಎದ್‌ರ್‌ಗೆ ದಿಬ್ಬಣ ಬಂದ್ ನಿಲ್ಲುದು. ಮಂಟಪದೊಳಗೆ ಧಾರೆ ಆದೆ. ಈ ಧಾರೆ ಆಗುವ ಚಪ್ಪರದ ಮ್ಯಾಲೆ ಮಡಿವಾಳ ಮೇಲ್ಕಟ್ಟ್ ತೇಳುವ ಬಿಳಿ ಬಟ್ಟೆನ ಕಟ್ಟಿದೆ. 5 ಎಲೆ 1 ಹಣ್ಣ್ ಅಡ್ಕೆನೂ ತೂಗುವೆ. ಈ ಎಲೆ ಅಡ್ಕೆಗೆ ಪಂಚಪಾಂಡವರ ಮತ್ತೆ ದ್ರೌಪದಿನ ಹೋಲ್ಸಿ ಮಡ್ಗುದುತ ಹಿರಿಯವು ಹೇಳ್ದ ಮಾತ್. ಚಪ್ಪರದ ಮ್ಯಾಲೆ ಹಲಸ್‌ನ ಮರದ ಸೊಪ್ಪುನ ಹೋಸುವೆ. 12 ಕಂಬಗಳಿಗೆ ಮಾವಿನೆಲೆ ಸೊಪ್ಪುನ ಕಟ್ಟುವೆ ಮತ್ತೆ ಬಿಳಿ ಬಟ್ಟೆನ ಅರಶಿನ ಹಾಕಿ ಸುತ್ತಿ ಕಟ್ಟುವೆ. ಇದ್ ಶಾಸ್ತ್ರ ಮಾಡಿ ಕೈ ಒರ್ಸಿಕೆ ಮತ್ತೆ ಒಂದು ಸುಬ ಸಂಕೇತನೂ ಹೌದು. ಈಗ ಇದ್ ದೇವಸ್ಥಾನದಷ್ಟೇ ಪವಿತ್ರ ಆತ್. **ಈ 12 ಕಂಬದ ಚಪ್ಪರಕ್ಕೆ ಸೀತಾವಳಿ ಚಪ್ಪರತ ಹೇಳುವೆ.** ಮಧ್ಯ ಭಾಗನ ದೇವಸಭೆ ಕರ್ದವೆ. 12 ಕಂಬದ ಕಲ್ಲ್‌ನ ಚಪ್ಪರ ಇಂದ್ ಸಹ ಹಂಪಿಲಿ ಉಟ್ಟು. ಇದ್ ನಮ್ಮವು ಅಲ್ಲಿದ್ದದರ ಸಂಕೇತ ಸಹ ಹೌದು.

ಹಂಗಾಗಿ ಸಮಾಜದಲ್ಲೇ ಆಗಲಿ, ಮನೆಲಿ ಆಗಲಿ, ಚಪ್ಪರಡಿಲೇ ಆಗಲಿ, ಆದಸ್ಟ್ ಪವಿತ್ರತೆನ ಕಾಪಾಡಿಕಂಡ್ ನಮ್ಮ ಕುಲದೇವ್ರು ಶ್ರೀ ವೆಂಕಟರಮಣ ಸ್ವಾಮಿನ ಮತ್ತೆ ಶೃಂಗೇರಿ ಶಾರದಾಂಬೆನ ಅಲ್ಲದೆ ಆ ಕಾವೇರಮ್ಮ ಇಗ್ಗುತಪ್ಪನನ ಕೃಪೆಗೆ ಪಾತ್ರರಾಕುತ ನಾವು ಕೇಳಿಕೊಂಡವೆ.

ಬರೆದವರು : ಬೈತಡ್ಕ ಜಾನಕಿ ಬೆಳ್ಯಪ್ಪ

ಚೋಮನ ಸಮಾನ ಕರ್ಸುದು

ರಾಮಂತೇಳುವ ಒಂದೂರ್ಲಿ ಇತ್ತ್. ಇವಂಗೆ ಚೋಮಂತೇಳುವ ಸೋದರ ಬಾವ ಆಗಿದ್ದದೆ. ಚೋಮ ಈ ವರ್ಷ ಮದ್ವೆ ಆದೆ. ಹಂಗೆ ರಾಮ ಈಗ ಚೋಮನ ಹೊಸತ್ತಾಗಿ ಸಮಾನ ಕರ್ಸಿದೆ.

ರಾಮ ಚೋಮನ ನೆಂಟ್ರಾಗಿ ಕರ್ಸಿದ ಮ್ಯಾಲೆ ನೆಂಟ್ರಿಗೆ ಬೇಕಾದಂಗೆ ಅಡಿಗೆ ಮಾಡಕು. ಅದರ್ಲಿ ಕೂರ್ಗ್ ಸ್ಪೆಷಲ್, ಕೋಳಿಮಾಂಸ, ತುಪ್ಪದನ್ನ, ಅನ್ನ, ರೊಟ್ಟಿ, ಪಾಯಸ, ಅಲ್ಲದೆ ಕುಡಿಯಕ್ಕೆ, ಎನ್. ಎಸ್, ಬ್ರಾಂಡಿ, ಮತ್ತೆ ಬೀರ್ ಎಲ್ಲಾ ಬೇಕಾದೆ.

ಎಲ್ಲಾ ಸಾಮಾನ್ ತಂದ್ ಆಕನ ರಾಮಂಗೆ ಹಂದಿಮಾಂಸ ತಾಕೇ ದುಡ್ಡು ಇಲ್ಲೆ. ಹಂಗೆ ಗ್ಯಾನ ಮಾಡ್‌ಕಾಕನ ರಾಮನ ದೋಸ್ತಿ ಮಾಧುನ ಗ್ಯಾನ ಆತ್. ಮಾಧು ಮೊದ್ಲು ಒಂದು ಸಲ ರಾಮನ ಕಂಡ್ ನಮ್ಮ ಮನೆಲೀ ಹೆಗ್ಗಣಗ ಬಾಳ ತುಂಬಿ ಹೋಗೋಳ. ಈ ಹೆಗ್ಗಣಗಳ ಸಂತಾನ ಮುಕ್ಸಕುತ್ತೇಳಿತ್ತ್. ಹಂಗೆ ಸೀದಾ ಮಾಧುನ ಮನೆಗೆ ಹೋಗಿ ಭತ್ತದ ಕಡಿಕೆಂದ (ಕಣ) ಒಂದು ಹೆಗ್ಗಣನ ಹೊಡ್ಕಂಡ್ ಬಾತ್. ಹಂಗೆ ಸಾಯಂಕಾಲಕ್ಕೆ ನೆಂಟ್ರು ಬಂದವೆ, ನೀ ಬರಕುತ್ತೇಳಿ ಮಾಧುಗೆ ಹೇಳಿ ಮನೆಗೆ ಬಾತ್. ಮಾಧು ಮಾಂಸ ತಿಂಬಕ್ಕೆ ಸ್ವಲ್ಪ ಹಿಂದೆ, ಕುಡಿಯಕ್ಕೆ ಎಲ್ಲಕ್ಕಿಂತ ಮುಂದೆ. ರಾಮ ಮಾಧುಗೆ ಮೊದ್ಲೆ ಹೇಳಿತ್ತ್. ನಾನ್ ಹೆಗ್ಗಣ ಮಾಂಸ ಮಾಡ್ದ ಸುದ್ದಿ ನೆಂಟ್ರಿಗೆ ಹೇಳ್ಬೇಡ, ಆದ್ರೆ ಮಾಧು ಕುಡ್ದ ಮ್ಯಾಲೆ ಎಲ್ಲಾ ಗುಟ್ಟುನ ವಿಷಯನ್ನ ಒಪಾನ್ನಾಗಿ ಹೇಳ್ವ ಅವನ ಸ್ವಭಾವ.

ಸಾಯಂಕಾಲ ಆಕನ ರಾಮನ ಮನೆಗೆ ಚೋಮ ಮತ್ತೆ ಅವನ ಹೆಣ್ಣ್ ಚೋಮುಣಿ ಬಂದೋ. ಅದೇ ಸಮಯಕ್ಕೆ ಮಾಧುನೂ ಬಾತ್ ಸಾಯಂಕಾಲ ನೆಂಟ್ರಿಗೆ ಕಾಫಿ-ತಿಂಡಿ, ಎಲ್ಲಾ ಕೊಟ್ಟೊ. ಕಾಫಿ ಕುಡ್ದೊ. ಆಮ್ಯಾಲೆ ಕಷ್ಟ-ಸುಖ ಮಾತಾಡಿಕೆ ಸುರುಮಾಡ್ದೋ. ಮಾತಾಡದಷ್ಟು ಮಾತೆ ಮುಗಿಯಲೆ, ಆ ಮನೆವು ಹಿಂಗೆಣ್ಣ, ಈ ಮನೆವು ಹಿಂಗತ್ತೇಳಿ ಕಂಡ್ ಆಕನ ರಾತ್ರಿ ಗಂಟೆ 11 ಆತ್.

ಮಾಧುನ ಮಾತ್ ಮುಗಿಯದ್ಲೆ. ರಾಮಂಗೆ ಈ ಮಾತ್‌ನ್ನೆಲ್ಲಾ ಕೇಳಿ ಸಿಟ್ಟು ಬಂದ್ ತಡಿಯಕ್ಕೆ ಆದ್ಲೆ. ಆದ್ರೆ ಏನ್ ಮಾಡ್ವು ನೆಂಟ್ರ್ ಒಳೋ ಅಲ್ಲಾ ಇಲ್ಲದಿದ್ರೆ ಬೈದ್ ಕಳ್ಸ್‌ತಿತ್ತ್.

ಹಿಂಗೆ ಮಾತಾಡಿ ಮಾತಾಡಿ ಆಕನ ರಾತ್ರಿ 12 ಗಂಟೆ ಆತ್. ನೆಂಟ್ರ್‌ಗೆ ಒಂದು ಕಡೆ ಹೊಟ್ಟೆ ಹಸಿವು. ಇನ್ನೊಂದು ಕಡೆಂದ ಜೋರು ನಿದ್ದೆನೂ ಬರ್‍ತುಟ್ಟು. ಮತ್ತೆ ರಾಮ ಚೋಮನವುಕ್ಕೂ ಮಾಧುಗೂ ಊಟಕ್ಕೆ ನೀರ್ ಕೊಟ್ಟಿದೆ. ಊಟಕ್ಕೆ ಕುದ್ದು ಆಕಾಕನ ಮೊದ್ಲು ಕುಪ್ಪಿಗ ಎದ್ರುಗೆ ಬಾತ್. ಎಲ್ಲಾ ಖಾಲಿ ಆದಂಗೆ ಮೊದ್ಲು ತುಪ್ಪದ್ದನ್ನ ಬಾತ್, ಅದ್ ಕುಡ್ದ ಬಾಯಿಗೆ ಬ್ಯಾಡತ್ತೇಳಿ ವಾಪಾಸ್ಸು ಮಾಡ್ದೊ. ಎರಡ್ನೆದಾಗಿ ರೊಟ್ಟಿನೂ ಮತ್ತು ಮಾಂಸನೂ ಬಾತ್. ಮತ್ತೆ ಅನ್ನ ಬಾತ್, ಅನ್ನ ತಿಂದ್ ಆಕನ ನಿದ್ರೆ ಬಾಕೆ ಸುರಾತ್. ಲಾಸ್ಟಿಗೆ ಪಾಯಸ ಬಾತ್, ಕುಡ್ದ ಮೇಲೆ ಪಾಯಸ ತಿಂದರೆ ಮರಕ ಜಾಸ್ತಿಂತ್ತೇಳಿ ಅದರ್‍ನೂ ವಾಪಾಸ್ಸು ಮಾಡ್ದೊ.

ಹಿಂಗೆ ನೆಂಟ್ರಿಗ್ ಹೆಗ್ಗಣ ಮಾಂಸನ ಹಂದಿ ಮಾಂಸತ್ತೇಳಿ ತಿಂದ್ ಆದ ಮ್ಯಾಲೆ ಕುಡ್ದದ್ ಪಿರಿಯಗಂಟ ಮಾತ್ ಸುರು ಮಾಡ್ದೆ. ಇವುಕೆ ಕುಡ್ದ ಆಕನ ನಿದ್ರೆ ಎಲ್ಲಾ ಮಾಯ ಆತ್. ಹಿಂಗೆ ಮಾತ್ ಸುರಾಕನ ಕುಡ್‌ಕ ಮಾಧು ನೆಂಟ್ರಿಗೆ ಹೇಳ್ದೆ, ನಿಮಗೆ ನಿಮ್ಮ ಬಾವ ಮೊಸ ಮಾಡಿಟ್ಟಣ್ಣ, ನಿಮಗೆ ಹಂದಿ ಮಾಂಸತ್ತೇಳಿ ಹೆಗ್ಗಣ ಮಾಂಸನ ತಿನ್ಸಿಟ್ಟುತಾ.

ಆದ್ಕೆ ಮದ್ವೆಯಾದ ಮ್ಯಾಲೆ ಹೊಸತ್ತಾಗಿ ಸಮಾನ ಕರ್ಸಿರೆ ಕುಡಿಯದರ್ಲಿ ತಿನ್ನುದರಲಿ ಜಾಗ್ರತೆ, ಇರ್ಲಿತ ಬರ್‍ದೊಳೊ, ಮತ್ತನಿಲ್ಲೆ. ಅತಾ, ಟಾ ಟಾ, ಬೈ ಬೈ.........

ಬರಹ : ಹುಲಿಮನೆ ಸಹದೇವ ಕೇಶವಯ್ಯ, ಮದೆನಾಡು

ಗೀತ ಸಾರ

"ಆದದೆಲ್ಲ ಒಳ್ಳೆಯದಕ್ಕೆ ಆಗಿದೆ
ಆಗುತ್ತಿರುವುದೆಲ್ಲ ಒಳ್ಳೆಯದೇ ಆಗುತ್ತಿದೆ,
ಆಗಲಿರುವುದು ಒಳ್ಳೆಯದೇ ಆಗಲಿದೆ,
ರೋದಿಸಲು ನೀನೇನು ಕಳೆದುಕೊಂಡಿರುವೆ?
ಕಳೆದುಕೊಳ್ಳಲು ನೀನು ತಂದಿರುವುದಾದರೂ ಏನು?
ನಾಶವಾಗಲು ನೀನು ನಿರ್ಮಾಣಮಾಡಿರುವುದಾದರೂ ಏನು?
ನೀನೇನು ಪಡೆದಿದ್ದರೂ ಅದನ್ನು ಇಲ್ಲಿಗೆ ನೀಡಿರುವೆ
ನಿನ್ನೆ ಬೇರ್‍ಯಾರದ್ದೊ ಆಗಿದ್ದದ್ದು ಇಂದು ನಿನ್ನದಾಗಿದೆ.
ಮತ್ತೆ ನಾಳೆ ಇನ್ಯಾರದ್ದೊ ಆಗಲಿದೆ "ಪರಿವರ್ತನೆ ಜಗದ ನಿಯಮ"

ಕಟ್ರತನ ಸುಧಿ ಉಲ್ಲಾಸ, ಬೆಂಗಳೂರು

ನಿಧನ

ಬೆಂಗಳೂರು ವಾಸಿ ತಳೂರು ಮೊಂಣಪ್ಪನವರು ದಿನಾಂಕ 2-7-2001ರಲ್ಲಿ ವೈಕುಂಠವಾಸಿಯಾದರು. ಇವರಿಗೆ 56 ವರ್ಷ ಪ್ರಾಯವಾಗಿತ್ತು. ಶ್ರೀಯತರು ಪತ್ನಿ 2 ಗಂಡು ಮಕ್ಕಳು ಒಂದು ಹೆಣ್ಣು ಮಗಳು ಅಲ್ಲದೆ ಅಪಾರ ಬಂಧುವರ್ಗದವರನ್ನು ಅಗಲಿದ್ದಾರೆ.

ಬೆಂಗಳೂರು ವಾಸಿ ಪೂಜಾರಿರ ಪೂವಯ್ಯನವರ ಪತ್ನಿ ತಾರಾರವರು ದಿನಾಂಕ 7-7-2001ರಲ್ಲಿ ಸ್ವರ್ಗಸ್ಥರಾದರು. ಇವರಿಗೆ 52 ವರ್ಷ ಪ್ರಾಯವಾಗಿತ್ತು. ಇವರು ಪತಿ ಹಾಗೂ ಇಬ್ಬರು ಗಂಡು ಮಕ್ಕಳನ್ನು ಅಲ್ಲದೆ ಅಪಾರ ಬಂಧು ವರ್ಗದವರನ್ನು ಅಗಲಿದ್ದಾರೆ. ಇವರು ಬೆಂಗಳೂರಿನಲ್ಲಿ ಕೊಡಗು ಮತ್ತು ದ. ಕ. ಜಿಲ್ಲೆ ಗೌಡ ಮಹಿಳಾ ಒಕ್ಕೂಟದ ಅಧ್ಯಕ್ಷೆಯಾಗಿ ಕಾರ್ಯ ನಿರ್ವಹಿಸಿದ್ದರು.

ಬೆಂಗಳೂರು ವಾಸಿ ಕುದುಕುಳಿ ರವಿಕುಮಾರ್‌ರವರು ದಿನಾಂಕ 26-6-2001ರಲ್ಲಿ ನಿಧನರಾದರು. ಇವರಿಗೆ 52ವರ್ಷ ಪ್ರಾಯವಾಗಿತ್ತು. ಇವರು ಪತ್ನಿ ಹಾಗೂ ಇಬ್ಬರು ಹೆಣ್ಣು ಮಕ್ಕಳನ್ನು ಅಗಲಿದ್ದಾರೆ.

- ಗೋವಿಂದಮ್ಮನ ಪ್ರವೀಣ್ ಕುಮಾರ್, ಬೆಂಗಳೂರು

ವಾಂಟೆಡ್ ಮಿಸ್ಟರ್ ರಾಜು [ನಮ್ಮ ರಾಜು ಮಂಜನ ಕಥೆ]

ಲೇಖನ : ಶಂಕರನ ಬಸಪ್ಪ

ಧಾರಾವಾಹಿ - 37

ಹಿಂದೆ ನಡದದ್......

ತಂಗೆ ಶೋಭನ ಮದ್ವೆಮೂಹೂರ್ತದ ಸಮಯ ಹತ್ರ ಬರುತಾ ಉಟ್ಟು. ಇನ್ನೂಮಂಜ ರಾಜುನ ಪತ್ತೇನೆಇಲ್ಲೆ. ಬೋಪಜ್ಜ, ಅಮ್ಮ.ತಂಗೆ ಎಲ್ಲಾ ದಾರಿ ಕಡೇ ಮಂಜಗೋಸ್ಕರ ನೋಡ್ತಿದ್ದೊ. ಆದ್ರೇಯಾರಿಗೂ ಗೊತ್ತೇ ಆಗದಂಗೆ ರಾಜು ಮಂಜ ಜೊತಲಿ ಒಂದ್ ಕುಂಟಿಗೂಡೆನ ಕರ್‌ಕಂಡ್ ಮನೆ ಒಳಗೆ ಬಂದ್ ತನ್ನ ಆಗಮನನ ಅಪ್ಪ, ಅಮ್ಮ, ತಂಗೆಗೆ ತಿಳ್ಸಿ ಟಿಬೇಟ್ ಹೈದನ ವೇಷಲೇ ಈಗ ತನ್ನ ವೈರಿಗಳ ಮಧ್ಯೆ ಹೋಗಿ ಮಾತ್‌ಕಥೆಗೆ ಕುದ್ದಿತ್.........

ಮುಂದಕೆ...........

ಈ ಮೈಸೂರ್‌ಂದ ಬಂದಿದ್ದ ಸ್ಪೆಷಲ್ ಗೆಸ್ಟ್ ಜನರ ಹೊಟ್ಟೆಗೆ ಸ್ವಲ್ಪ ಕಳ್ಳ್ ಮತ್ತೆ ಮಾಂಸ ಚೂರ್ ಬಿದ್ದ್ ಆಕನ ಹಂಗೆ ಇವುಕೆ ಕೈಕಾಲುಗಳಿಗೆ ಶಕ್ತಿ ಬಂದಗಾತ್. ಮನ್ಸ್‌ಗೆ ಧೈರ್ಯನೂ ಬಾತ್. ಆದುದರಂದ ಈಗ ಅವರ ತಲೆ ಒಳಗಿಂದ ಒಂದೊಂದೇ ದುರ್ಬುದ್ಧಿಗುಣಗ ಹೊರಗೆ ಹೊರ್‌ಡಿಕೆ ಶುರ್ ಆತ್. ಕುಡ್ದ್ ತಲೆಗೆ ಏರಿ ಆಕನ ಈಗ ನಾಲಿಗೆ ಕೂಡಾ ತೊದಲಿಕಂಡ್ ಮಾತಾಡಿಕೆ ಶುರು ಮಾಡ್ದೊ.

ಇದರಲ್ಲಿ ಬಾಂಬೆ ಗಾರ್ಮೆಂಟ್ಸ್‌ನ ಕೃಷ್ಣವತಾರ್ ಸಿಂಗ್‌ಗೆ ಬೇಗ ಇವರ ಮೇಲೆ ಅನುಮಾನ ಪಡ್ತ್. ಆದ್ರಂದ ಸ್ವಲ್ಪ ಜೋರಾಗೇ ಕೇಳ್ತ್ ಎಯ್ ಧರ್ಮಪಾಲ್, ಮಹೇಂದ್ರಪಾಲ್ ನಮ್ಮ ಖಾಸಾದೋಸ್ತ್ ಎಲ್ಲಿಟ್ಟು ಅಂವನ ಇಲ್ಲಿಗೆ ಕರ್ಕಂಡ್ ಬನ್ನಿ. ಅಂವ ನಂಗೆ ಸಿ. ಬಿ. ಐ. ಇನ್ಸ್‌ಪೆಕ್ಟರ್‌ತಾ ಹೇಳಿಕಂಡ್ ನನ್ನ ಕೆಲ್ಸ ಮಾಡ್ವ ಫ್ಯಾಕ್ಟರಿಗೆ ಬಂದ್ ನಂಗೆ ಹೆದ್ರ್ಸಿ, 25 ಸಾವಿರ ರೂಪಾಯಿನ ಒಂದೇ ಗಂಟ್‌ಲಿ ಹೊಡ್ಕಂಡ್ ಬಂದುಟು. ಈಗ ಅಂವನ ನಾನ್ ಸುಮ್ನೆ ಬುಡಿಕಿಲ್ಲೆ. ಅಂವನ ಶೂಟ್ ಮಾಡಿ ಬುಟ್ಟನೆತಾ ಕಿರ್‌ಚಾಡ್ತ್.

ಆಗ ಇನ್ನೊಬ್ಬ ಸಂನ್ಯಾಸಿ ಕರಿಬಸವಯ್ಯ ಹೇಳ್ತ್. ನಿಮ್‌ಗೇನಪ್ಪಾ ಕೋಟ್ಯಾಂತರ ರೂಪಾಯಿ ಸಂಪಾದ್ನೆ ಮಾಡ್ದರಲ್ಲಿ ಬರೀಇಪ್ಪತ್ತೈದ್ ಹೊಡ್ಕಂಡತ್ ಆದ್ರೇ ನಂಗೆ ಮೈಗೆ ಉಟ್ಟ್ ಕಂಬಕೆ ಒಂದುಚೂರು ಬಟ್ಟೆನ ಬುಡದಂಗೆ ಹೊತ್ತ್‌ಕಂಡ್ ಓಡಿ ಹೋಗುಟ್ಟು. ನಾನ್ ನನ್ನ ಸನ್ಯಾಸಿ ಬಟ್ಟೆ, ಬರೆ, ಜೋಳಿಗೆ ಎಲ್ಲನೂ ಹೊಳೆ ಕರೆಲಿ ಬಿಚ್ಚಿಮಡ್‌ಗಿ ಹೊಳೆ ಒಳಗೆ ಮೀಯಕೆ ಇಳ್ದ್‌ದರ ನೋಡಿಕಂಡೇ ನಂಗೆ ಈತರ ಮೋಸ ಮಾಡಿಬುಡ್ತಲಾ ನಾನ್ ಈಗ ಅಂವನ ಉಳ್ಸಿಕ್ಯಾದ್ಯೇತಾ, ಕಪಟ ಸನ್ಯಾಸಿ ಕರಿಬಸವಯ್ಯ ಎಗ್‌ರಾಡ್ತ್. ಆಗ ಡ್ರೈವರ್ ದಾಸ್ ಎದ್ದ್ ನಿಂತಿತ್. ಅಯ್ಯೋ ಬುಡಿ. ಅಂವ ಬರೀ ಮೋಸಗಾರ. ಅಂವ ಪೋಲೀಸ್ ಇನ್ಸ್‌ಪೆಕ್ಟರ್‌ನ ವೇಷನ ಹಾಕಂಡ್ ಹೋಗೋ ಬರೋ ಲಾರಿಗಳ ಟೆಂಪೋಗಳ ಅಡ್ಡಹಾಕಿ ಸುಮ್ಮ ಸುಮ್ಮನೆ ಹಣನ ವಸೂಲಿ ಮಾಡಿಟ್ಟು. ಇಂತವು ಇದ್ದರೆ ನಮ್ಮಂತಹ ಡ್ರೈವರ್‌ಗ ರಸ್ತೆ ಮೇಲೆ ಲಾರಿನ ಓಡ್ಸಿಕೆ ಆದುಲ್ಲೆ. ಅದ್‌ಕೆ ಅಂವನ ಕಾಲ್‌ನ ಕಡ್ದ್ ಒಂದ್ ಮೂಲೆಲಿ ಕುದ್ರಿಸಿಬುಟ್ಟನೆ ತಾ ಹೂಂಕರಿಸಿತ್.

ಆಗ ಪೋಲಿಸ್ ದಫೇದಾರ ಭೀಮಯ್ಯ ತಾನ್ ಕುಡಿತ್ತಿದ್ದ ಗ್ಲಾಸ್‌ನ ಮೇಜ್ ಮೇಲೆ ಜೋರಾಗಿಕುಟ್ಟಿ ಮೊಡಗಿ ಹೇಳ್ತ್. ನೀವು ಯಾರೂ ಆ ಮಿ. ರಾಜುನ ಒಂದ್ ರೋಂನ ಕೂಡಾ ಅಲ್ಲಾಡಿಸಿಕೆ ಆದುಲ್ಲೆ. ಅಂವ ನಿಮ್ಮಂತಹ ಮೋಸಗಾರರಿಂದ ಮಾತ್ರ ಮೋಸಂದ ಸಂಪಾದಿಸಿ ಸಿಟ್ಟ್‌ಕಂಡದರಲಿ ಒಂದ್‌ಚೂರು ಉಪಾಯಲಿ ಕಿತ್ತುಕಂಡುಟು ಅಷ್ಟೆ. ಇನ್ನಾದ್ರೂ ನೀವು ಎಚ್ಚೆತ್ ಕಣಿ. ಸಮಾಜಲಿ ವಂಚನೆ ಮಾಡುದು ನಿಮಗೇ ತೊಂದರೆ ಆದೆತಾ ತೋರ್ಸಿ ಕೊಡಿಕೆ ಇದ್ ಒಂದ್ ಸ್ಯಾಂಪಲ್‌ನ ಮಾತ್ರ ಅಂವ ತೋರ್ಸಿದ್.

ನೀವು ಹತ್ತು ಜನ ಹೋಗಿ ಒಟ್ಟಿಗೆಬಿದ್ರೂ ನಿಮಿಗೆ ಅವನ ಜಯಿಸಿಕೆ ಆದುಲೆ. ನೀವೇನಾದ್ರೂ ಅವನ ವಿಚಾರ ಗೊತ್ತಾಗದೆ ಅವನ ಎಟ್ಯಾಕ್ ಮಾಡಿಕೆ ಹೋದ್ರೆಆಮೇಲೆ ಮೈಲಿ ಮೂಳೆಗ ಒಂದೂ ಸರಿ ಇರ್ಕಿಲೆ ಗೊತ್ತಾತಾ? ಅಂವನ ಕಥೆನ ನಾನ್ ಹೇಳಿನೆ ಕೇಳಿಕಣಿ. ಇಲ್ಲಿ ಕುದ್ದುಟಲ್ಲಾ ಈ ವುಲ್ಲಾಭಕ್ಷ್ ಅವಂಗೆ ಎರಡೇ ನಿಮಿಷಲಿ ನೀರ್ ಕುಡ್ಸಿದಂವ. ಅಂವ ರಸ್ತೆಲಿ ನಿಂತ್‌ಕಂಡ್ ದರೋಡೆ ಮಾಡ್ವವರ ಹೊಡ್ದ್ ಅವರೆಲ್ಲವರ ಕಾಲ್‌ನ ಮುರ್ದ್ ಪೋಲಿಸ್ ನವುಕೆ ಹಿಡ್ದ್ ಕೊಟ್ಟಂವ. ಅದ್ ಹೋಗಲಿ, ಅರಸಿಕೆರೆ ರೋಡ್‌ಲಿ ಒಂದ್ ಲಕ್ಷುರಿ ಬಸ್‌ನ ಶಸ್ತ್ರ ಸಮೇತದ ದರೋಡೆ ಕೋರರು ಲಪಟಾಯಿಸ್‌ಕನ ಅವರನ್ನೆಲ್ಲಾ ಇಂವ ಬರೀ ಕೈಲಿ ಹೋರಾಡಿ ಅವರನ್ನೆಲ್ಲಾ ಹೊಡ್ದ್ ಬೀಳ್‌ಸಿ ಅವರ ಕೈಕಾಲ್‌ಗಳನ್ನೆಲ್ಲಾ ಆ ಬಸ್ಸ್‌ಲಿದ್ದ ಜನರ ಸಹಾಯಂದ ಮೂಟೆ ಕಟ್ಟಿದಂಗೆ ಕಟ್ಟಿಹಾಕಿ ಆ ನಾಲ್ಕು ಜನ ಇಂಟರ್‌ನೇಷನಲ್ ದರೋಡೆಕೋರರ ಎಳ್ಕಂಡ್ ಬಂದ್ ನಮ್ಮ ಪೋಲೀಸ್ ಸ್ಟೇಷನ್ನಿಗೆ ಕೊಟ್ಟಂವ. ಇಂತಹ ಒಂದ್ ಆಪರೇಷನ್‌ನ ನಮ್ಮ ಪೋಲಿಸ್ ಡಿಪಾರ್ಟ್‌ಮೆಂಟ್‌ನವು ಮಾಡೋಕುತಾದರೆ ನಮಿಗೆ ಲಕ್ಷಾಂತರ ರೂಪಾಯಿ ಖರ್ಚಾದೆ. ನೂರಾರು ಜನ ಸಶಸ್ತ್ರ ಪೋಲಿಸ್‌ನವು ಬೇಕಾದವೆ ಗೊತ್ತಾತಾ? ಇಂತಹ ದರೋಡೆಕೋರರ ಜೊತೆ ಹೋರಾಡಿಕೆ ಸಾಧಾರಣ ಮಟ್ಟಿನ ಧೈರ್ಯ ಸಾಲ್ದ್. ಈ ಮಿ. ರಾಜುನ ಧೈರ್ಯ ಸಾಹಸಗಳ ವಿಚಾರಗಳ ನಾವು ತಿಳ್ದ ಮೇಲೆ ಈ ಮನುಷ್ಯನ ಹಿಂದಿನ ಮತ್ತೆ ಮುಂದಿನ ಎಲ್ಲಾ ಕಥೆಗಳ ನಮ್ಮ ಡಿಪಾರ್ಟ್‌ಮೆಂಟ್ ಕೂಲಂಕುಶವಾಗಿ ತಿಳ್ಕಂಡ್ ಆದ ಮೇಲೆ ಇವನ ಸಾಮರ್ಥ್ಯಕ್ಕೆ ಮೆಚ್ಚಿ ನಮ್ಮ ಗೃಹಮಂತ್ರಿಗ ಶೌರ್ಯ ಪ್ರಶಸ್ತಿನ ಕೊಡಿಕೆ ಸಂತೋಷಲಿ ಒಪ್ಪಿ ಕಂಡೊಳೊ. ಇದೆಲ್ಲಾ ಅವನ ಒಂದ್ ತರಹದ ಕಥೆ ಆದ್ರೇ ಅವನ ಮಾನವೀಯತೆಯ ಬಗ್ಗೆ ಕೂಡಾ ನಾವು ಹೆಮ್ಮೆ ಪಡುವಂತಹ ಹಲವಾರು ಕೆಲ್ಸಗಳ ಅಂವ ಮಾಡಿಟ್ಟು. ಅಂವ ತುಂಬಾ ಕಷ್ಟದಲ್ಲಿದ್ದ

ಹೆತ್ತವಳು ಮಕ್ಕಳ ಕೊಟ್ಟಾಳಾ

ತುಂಬಾ ಅಸಹಾಯಕ ಜನರಿಗೆ ಮಾಡಿದಂತಹ ಸಹಾಯನ ನೋಡಿರೆ ಯಾರೂ ಕೂಡಾ ನಂಬಿಕಿಲ್ಲೆ. ಅಂವಂದ ಪ್ರಯೋಜನ ಪಡಕಂಡಂತಹ ಜನ ಮಾತ್ರ ಈಗ ಇಲ್ಲಿಗೆ ಒಬ್ಬರೂ ಕೂಡಾ ಬಾತ್‌ಲೆ. ಆದ್ರೇ ಅಂವಂದ ಮುಖ ಭಂಗ ಮಾಡ್ನಿ ಕಂಡಂತಹ ಜನ ಮಾತ್ರ ತಮ್ಮ ಸ್ವಾರ್ಥ ಸೇಡ್‌ನ ತೀರ್ಸಿಕಂಬಕ್ಕೋಸ್ಕರ ಬಂದೊಳೊಲಿವು ಯಾರು ಗೊತ್ತುಟಾ? ತಾ ಒಂದ್ ಪ್ರಶ್ನೆನ ಕೇಳ್ತ್. ಈ ಪ್ರಶ್ನೆಗೆ ಉತ್ತರನ ಇಲ್ಲಿ ಬಂದ್ ಕುದ್ದಿದ ಯಾರೊಬ್ಬರಿಗೂ ಉತ್ತರ ಹೇಳಿಕಾತ್ಲೆ. ಹಾಂ! ಅವಳೇ ಒಂದ್ ಕುಂಟಿ ಗೂಡೆ. ಆ ಅಂಗವಿಕಲ ಗೂಡೆನ ಅವಳು ಆತ್ಮಹತ್ಯೆ ಮಾಡಿಕಣಿಕೆ ನೀರೊಳಗೆ ಮುಳುಗಿರ್‌ಕಾಕನ ಇಂವ ತನ್ನ ಪ್ರಾಣನ ಲೆಕ್ಕಕೆ ತಕಣದೆ ಸೇತುವೆ ಮೇಲೆಂದ ಹೊಳೆಗೆ ಹಾರಿ ಈ ಗೂಡೆನ ಪ್ರಾಣನ ಉಳ್ಸಿತ್. ಅಷ್ಟೇ ಅಲ್ಲ ಇವಳು ಅಂಗವಿಕಲೆತ ಗೊತ್ತಾದ ಮೇಲೆ ಈ ಗೂಡೆಗೊಂದು ಬಾಳ್‌ನ ಕೊಡಿಕ್ಕೋಸ್ಕರ ಇವಳನ್ನೇ ಮದ್ವೆ ಆನೆತ್ತೇಳಿ ಮಾತ್ ಕೊಟ್ಟ್, ಈಗ ಅದರ ಪ್ರಕಾರ ಈ ಮದುವೆಯ ಶುಭಮುಹೂರ್ತಲೆ ಅವಳ ಕುತ್ತಿಗೆಗೆ ತಾಳಿ ಕಟ್ಟಿದೆ. ಆ ಮದ್ವೆ ಆಗುವ ಗಂಡ್ ಯಾರು ಗೊತ್ತುಟಾ ನಿಮಗೆ? ಅವನೇ ಮಿ. ರಾಜು. ನಮ್ಮ ಊರ್‌ನ ನಮ್ಮ ಗಂಡು ನೆಲದ ಗಂಡ್ ಹೈದ. ಮದು ಮಗಳು ಶೋಭಂಗೆ ಚಿನ್ನಾಭರಣದ ಅಲಂಕಾರ ಎಲ್ಲಾ ಆಗಿತ್ತ್. ನೀಲಿ ರೇಷ್ಮೆ ಸೀರೆ ಅದಕೊಪ್ಪುವ ರವಿಕೆ, ಇದಕ್ಕೆ ಒಪ್ಪುವಂಗೆ ಮುಖದ ಮೇಕಪ್ ಎಲ್ಲಾ ಮಾಡಿ ಈಗ ಅವಳ್ನ ಸೌಂದರ್ಯದ ರಾಣಿಯಂಗೆ ಮಾಡಿದ್ರೊ. ಅಲ್ಲದೆ ಇನ್ನೊಬ್ಬಳು ಮದುವಳಿಗೆ ಗೂಡೆ. ಬೆಳಿಗ್ಗೆ ತಾನೇ ಮೈಸೂರು ಗೆಸ್ಟ್‌ಗಳೊಟ್ಟಿಗೆ ಕುಂಟಿಕಂಡ್ ಬಂದ ಶಾಂತಿಗೂಡೆಗೂ ಅಲ್ಲಿ ಇದ್ದ ಫ್ರೆಂಡ್ಸ್ ಗೂಡೆಗ ಎಲ್ಲಾ ಒಟ್ಟಿಗೆ ಸೇರಿ ಬೇಗ ಬೇಗ ಸ್ನಾನ ಮಾಡ್ನಿ, ಅವಳ ಮೇಕಪ್ ಮಾಡ್ರೊ. ಆಮೇಲೆ ಅಣ್ಣ ರಾಜು ಕಳ್ಸಿ ಕೊಟ್ಟಿದ್ದ ಜರತಾರಿ ರೇಷ್ಮೆ ಸೀರೆನ ಉಡ್ಸಿ, ಬೇಕಾದಷ್ಟ್ ಚಿನ್ನಾಭರಣಗಳಿಂದ ಅಲಂಕಾರ ಮಾಡಿ ನಾಜೂಕಾಗಿ ತಿದ್ದಿ ತೀಡಿ, ದಂತದ ಪುತ್ತಳಿಯಂಗೆ ನೋಡ್ವವರ ಕಣ್ಣ್‌ಂದ ದೃಷ್ಠಿ ಆಗುವಂಗೆ ಅಲಂಕಾರ ಮಾಡಿ ಬುಟ್ಟಿದ್ರೊ. ವಾದ್ಯದವರವಾಲಗ ಸೆಟ್ಟ್‌ದ ಸಂಗೀತ ಅಬ್ಬರ ಆಗಿ ಕೇಳ್‌ತಿತ್ತ್.

ಅಲ್ಲಿ ಇನ್ನೊಂದ್ ಕೊಂಬರೆಲಿ ಇದ್ದ ಮದುವಣ್ಣಿಂದ್ ಸಾಸ್ತ್ರ ಗೋತ್ರ ಎಲ್ಲಾ ಮಾಡಿ ಆಗಿತ್. ಹಂಗೇ ಈಗ ಅವುವಾದ್ಯ ಸೆಟ್ಟ್‌ನೊಂದಿಗೆಮದ್ವೆ ಚಪ್ಪರದ ಸ್ವಲ್ಪ ದೂರಲಿ ಒಂದ್ ಹಲ್ಸ್‌ನ ಮರದ ಕೆಳಗೆ ದೂರಂದ ದಿಬ್ಬಣ ಬಂದವರಂಗೆ ಮದುವೆಣ್ಣ ಅಡೋಳಿ ಸಮೇತನ್ನಾಗಿ ತನ್ನ ಹತ್ರದ ಸಮ್ಮಂದದವರೊಟ್ಟಿಗೆ ಕುದ್ದಿತ್.

ಈಗ ಧಾರೆ ಮುಹೂರ್ತಕ್ಕೆ ಸಮಯ ಹತ್ರ ಆಗಿ ಹೋಗುಟ್ಟು. ಅಲ್ಲಿ ಸುತ್ತಾ ಕುರ್ಚಿಲಿ ಬಂದ್ ಕುದ್ದಿದ ಜನ ಕುದ್ದ್ ಕಂಡ್ ಮಾತ್‌ಕಥೆಗಳ ಆಡಿಕಂಡ್ ಧಾರೆ ಮುಹೂರ್ತಆಗುದರ ನೋಡಿ ಕಂಡ್ ಕುದ್ದಿದ್ರೊ. ಈಗ ಈ ಮದ್ವೆ ಮನೇಲಿ ಧಾರೆ ಎರಿಯಕೆ ಎರಡ್ ಮದುವಳಿಗೆಗ ರೆಡಿ ಆಗಿ ನಿಂತೊಳೊ. ಆದ್ರೇ ಒಂದು ಮದುವಳಿಗೆಗೆ ಗಂಡ್ ರೆಡಿ ಆಗಿ ಬಂದ್ ಹೊರಗಡೆ ಕುದ್ದುಟ್ಟು. ಇನ್ನೊಂದು ಗೂಡೆಗೆ ಯಾವ ಮದುವಣ್ಣನೂ ರೆಡಿಆಗಿ ಕುದ್ದತಿಲ್ಲೆ. ಅಲ್ಲೇ ಈ ಬೋಪಜ್ಜನ ಮದ್ವೆ ಕಾಗದಲಿ ಇವಳ ಮಗಳು ಶೋಭತ್ತೇಳುವ ಗೂಡೆನ ಮೋಹನತ್ತೇಳುವ ಗಂಡಿಗೆ ಮದ್ವೆ ಮಾಡಿಕೊಡ್ದುತಾ ಇತ್ತ್. ಆದ್ರೇ ಇಲ್ಲಿ ಜನ ಎಲ್ಲಾ ತಮ್ಮ ತಮ್ಮಲ್ಲೆ ಮಾತಾಡಿ ಕಂಬೊತಿದ್ರೊ. ಈ ಧಾರೆ ಮಂಟಪಲಿ ಈಗ ಎರಡು ಜೋಡಿಗಳದ್ ಮದ್ವೆ ನಡ್ದದೆತಾ ಅಂದ್ರೇ ಇನ್ನೊಂದ್ ಮದ್ವೆ ಗಂಡ್ ಯಾರ್? ಯಾರಿಗೂ ಇದಕೆ ಉತ್ತರ ಇದೂವರ್ಗೂ ಸಿಕ್ಕಿತಿಲ್ಲೆ. ಎಲ್ಲವೂ ಇದೇ ಪ್ರಶ್ನೆನ ಅವರವರ ಕೆಮಿ ಹತ್ರ ಕೇಳಿಕಂಡ್ ಕುದ್ದ್ ಕಂಡಿದ್ರೊ.

ಮೊದ್ಲ್ ಗಂಡ್‌ನ ಕಡೇವು ವಾಲಗದೊಂದಿಗೆ ದಿಬ್ಬಣ ಬಂದ್ ಧಾರೆ ಮಂಟಪಲಿ ಬಂದ್ ನಿಂತ್‌ಕಂಡೊ. ಅಲ್ಲೂ ಕೂಡಾ ಆರತಿ, ದೃಷ್ಠಿ ಕಾಯಿ ಒಡಿಯೋದೂ. ಅದೂ ಇದೂತಾ ಸಾಸ್ತ್ರ ಆಕಾಕ್ಯಾಕನ ಮದುಮಗಳ ಹೊತ್ತುಕಂಡ್ ಅವಳ ಸೋದರಮಾಂವ ಈ ಧಾರೆ ಮಂಟಪದ ಒಳಗೆ ತಂದ್ ಇಳ್ಸಿತ್. ಆಗ ಸುತ್ತಮುತ್ತ ಇದ್ದ ಅಕ್ಕಂದಿರ್‌ಗ, ಅಣ್ಣಂದಿರ್‌ಗ ನೆಂಟ್ರ್‌ಗ ಎಲ್ಲಾ ಎದ್ದ್ ಬಂದ್ ಅಲ್ಲಿ ಗುಂಪಾಗಿ ಸೇರ್ರೊ. ಆ ಹೊತ್ತಿಗೆ ಈ ಮೈಸೂರುಂದ ಬಂದಂತಹ ಚೀಫ್ ಗೆಸ್ಟ್‌ಗಳ ಮಿ. ಮಹೇಂದ್ರಪಾಲ್ ಹೊರಡಿಸಿ ಕಂಡ್ ಈ ಚಪ್ಪರದಹತ್ರಕ್ಕೆ ಕರ್ಕಂಡ್ ಬಾತ್. ಬನ್ನಿ ಬನ್ನಿ ನಮ್ಮ ಊರ್‌ಲಿ ಮದ್ವೆ ಸಮಾರಂಭನ ಯಾವ ಕ್ರಮಲಿ ನಾವು ಮಾಡ್ವಿತಾ ನೋಡಿ. ನಿಮ್ಮ ಊರ್‌ಲಿ ನಡಿಯುವ ಮದ್ವೆಗೂ ಇಲ್ಲಿ ನಡಿಯುವ ಮದ್ವೆಗೂ ಸ್ವಲ್ಪ ವ್ಯತ್ಯಾಸ ಇದ್ದದಲ್ಲಾ? ತಾ ಹೇಳ್ತ್. ಹಾಂ ಹೌದು ಹೌದು. ನಾವುಕೂಡಾ ಅಲ್ಲಿಗೆ ಬಂದವೆ. ನೀವೇ ಹೇಳ್ದರಲ್ಲಾ? ಆ ಕುಂಟಿ ಗೂಡೆನ ಮಿ. ರಾಜು ಈ ಧಾರೆ ಮೂಹುರ್ತಲೇ ಮದ್ವೆ ಆದೆ ತಾ ಇಂತಂಹ ಒಂದ್ ಅಪೂರ್ವ ಮದ್ವೆನ ನಾವು ನೋಡುವ ಒಂದ್ ಒಳ್ಳೆ ಅವಕಾಶ ನಮಿಗೆ ಸಿಕ್ತಲ್ಲಾತಾ ಕುಷಿ ಪಟ್ಟ್‌ಕಂಡ್ ಹೇಳ್ರೊ.

ಆಗ ಅಲ್ಲಿ ಹೆಣ್ಣಿಗೂ ಗಂಡಿಗೂ ಮಧ್ಯೆ ಎತ್ತರಕೆ ಒಂದ್ ಬಿಳಿ ಬಟ್ಟೆನ ಅಡ್ಡ ಮರೆ ಮಾಡಿಹಿಡ್ರೊ. ಸೋದರ ಮಾಂವ ಈ ಮದುಮಕ್ಕಳಿಗೆ ಮೊದ್ಲ್, ಹೂವು ಹಿಂಗಾರದ ಹಾರನ ಬದಲಿಸಿ ಕಂಬಕೆ ಹೇಳ್ರೊ. ಇದರ ಮಧ್ಯೆ ಅಕ್ಕಂದರ್. ಹೆಣ್ಣ್‌ಜನ ಎಲ್ಲಾ ಒಟ್ಟಿಗೆ ಬಂದ್ ವೀಳ್ಯನ ಬದಲಿಸಿಕಂಬೋದು ಆರತಿ ದೀಪನ ಅತ್ತ ಇತ್ತ ಬದಲಿಸಿಕಂಬೋದು ಆಮೇಲೆ ಹೂವಿನ ದೊಡ್ಡ ದೊಡ್ಡ ಹಾರಗಳ ಬದಲಿಸಿಕಂಬೋದು ಎಲ್ಲಾ ಶಾಸ್ತ್ರಗ ಒಂದೊಂದೇ ಮುಗಿಯುತಾ ಬರ್‌ತಿತ್ತ್. ಇನ್ನೇನ್ ಕುತ್ತಿಗೆಗೆ ಮಾಂಗಲ್ಯನ ಕಟ್ಟೋಕು ಅಷ್ಟೆ. ಅಷ್ಟೋತ್ತಿಗೆ ಅಲ್ಲಿಗೆ ಬಂದ ಮಹೇಂದ್ರಪಾಲ್ ಜೋರಾಗಿ ಕಿರ್‌ಚಿಕಂಡತ್ "ಎಲ್ಲಿ ಒಂದ್ ನಿಮಿಷ ಈ ನಮ್ಮ ಹೆಣ್ಣ್. ಗಂಡಿಗೆ ಒಂದ್‌ಮುಖ್ಯವಾದ ಹಾರನ ಹಾಕಿಕೆ ಉಟ್ಟು. ನನ್ನ ತಂಗೆ ಶೋಭನ ಕೈಯಿಂದಲೇ ಗಂಡ್ ಮೋಹನನ ಕುತ್ತಿಗೆಗೆ ಹಾಕಿದೆ. ಈಹಾರನ ನಮ್ಮ ಭಾವ. ಮದ್ವೆಗಂಡ್ ಹಾಕಿಸಿಕಂಡ ಮೇಲೆ ಮಾತ್ರ ನನ್ನ ತಂಗೆನ ಕುತ್ತಿಗೆಗೆ ತಾಳಿ ಕಟ್ಟಿರೆ ಸಾಕ್. ಇದರಲ್ಲಿ ಸರಿಯಾಗಿ ಒಂದ್ ಲಕ್ಷ ರೂಪಾಯಿ ಪೂರ್ತ ಹಣ ಉಟ್ಟು. ಇಲ್ದೇ ಇದ್ರೆ ನಾವ್ ಕೊಟ್ಟ ಮಾತಿಗೆ ತಪ್ಪಸಿ ಕಂಡಂಗೆ ಆದೆ ತಾ ಹೇಳ್ತ್. ಆಗ ತಂಗೆ ಶೋಭ ತನ್ನ ಗಂಡನ ಕುತ್ತಿಗೆಗೆ ಈ ಹಾರನ ಹಾಕಿಕೆ ಕೈ ನೀಡ್ತ್. ಆ ಮದುಮಂಜ ನಾಚಿಕೆಲಿ ತನ್ನ

ತಲೆನ ವಾರೆ ಮಾಡ್‌ತಿತ್ತ್. ಆಗ ಮಿ. ಮಹೇಂದ್ರಪಾಲ್ ಬಂದ್ ಈ ಬಾವನ ಕೆಮಿ ಹತ್ರ ಮೆಲ್ಲಂಗೆ ಹೇಳ್ತ್ ಸಂಕೋಚ ಪಟ್ಟ್ ಕಂಬೋದು ಬ್ಯಾಡ ಬಾವ ಈ ಹಾರನ ಹಾಕ್ಷಿಕಣಿ ಒಳ್ಳೆ ಲಾಯಕ್ ಕಂಡದೆ ನಾನ್ ಕೂಡಾ ನಿಮ್ಮೊಟ್ಟಿಗೆ ಪೋಟೋಕೆ ಒಂದ್ ಪೋಸ್‌ನ ಕೊಟ್ಟನೆ ತಾ ಹೇಳ್ತ್.

ಆಗ ಅಲ್ಲಿ ಸುತ್ತ ನೆರೆದಿದ್ದ ದೊಡ್ಡವೂ ಸಣ್ಣವೂ ಹೆಣ್ಣ್ ಜನ ಎಲ್ಲವೂ ನಗೆ ಆಡಿಕೆ ಶುರು ಮಾಡ್ದೊ. ಹಂಗೆ ಅವು ಕೂಡಾ ಹೇಳ್ದೋ. ಬಾವ ಈಹಾರನ ಬುಡ್‌ಬ್ಯಾಡಿ ಇಷ್ಟೊಂದು ದೊಡ್ಡ ಗಂಟ್‌ನ ಹಾರಕ್ಕೆ ನಾವೆಲ್ಲಾ ಸಾಕ್ಷಿ ಬೇಕಲ್ಲಾ ಇದರ ಕೊಡ್ದೇ ಇದ್ರೆ ತಾಳಿ ಕಟ್ಟುದೇ ಬೇಡತಾ ನಿಮ್ಮ ಅಪ್ಪ ಹೇಳ್ಯೊಳಗಡ. ಆದ್ರೇ ನಾವೆಲ್ಲಾ ಕೊಟ್ಟ ಮಾತಿಗೆ ತಪ್ಪಿಸಿ ನಡೆಯವು ಅಲ್ಲಾ ಗೊತ್ತಾತಾ? ಬಾವ ಈಹಾರ ಮಾತ್ರ ಅಂತಿಂತ ಹಾರ ಅಲ್ಲಾ!! ಇದಕ್ಕೋಸ್ಕರ ಬಹಳ ರಂಪಾಟ ನಡ್ದ್‌ಹೋಗುಟ್ಟು. ಈಮನೆಲಿ ಅಪ್ಪ ಮಂಜಂಗೆ ಜಗಳ ಆಗಿ ಕೊನೆಗೆ ಮಂಜ ಮನೆ ಬುಟ್ಟು ಓಡಿಹೋತ್. ಈಗ ನೋಡ್ರೆ ಆ ಮಂಜನ ಹಿಡ್ದ್ ಸಾಯಿಸಿಕೆ ಅವನ ಜೊತೆಲೇ ಆಗುಂತಕರ್ ಬೆನ್ನ್ ಹಿಂದೆ ಬಂದ್ ಇಲ್ಲೇ ನಿಂತೊಳೊ. ಈ ಹಣಕ್ಕೋಸ್ಕರನೇ ನಮ್ಮ ರಾಜು ಬಾವ ತುಂಬಾ ಜನರ ಹತ್ರ ವಿರೋಧಿ ಆಗಿ ಅವರ ದ್ವೇಷನ ಕಟ್ಟಿಕಂಡ್ ಬಂದುಟು. ಈ ಹಣಕ್ಕೋಸ್ಕರ ಈಗ ನಾವು ನಮ್ಮ ರಾಜು ಬಾವನ ಕಳ್ಕಂಬಂತಹ ಪರಿಸ್ಥಿತಿ ಬಂದುಟುತಾಹೇಳ್ದೊ. ಇದರ ಮಧ್ಯೆ ಪೋಟೋಗ್ರಾಫರ್‌ಗಳಿಗೆ ಪುರುಸತ್ತಿಲ್ಲದಂಗೆ ಅವರ ಕೆಲ್ಸಗ ನಡಿಯುತಿತ್ತ್.

ಆದ್ರೆ ಈ ಧಾರೆ ಮಂಟಪದ ಮಧ್ಯೆ ಸುತ್ತಮುತ್ತ ಇರುವ ನೆಂಟ್ರ್‌ಗಳ ಮಧ್ಯೆ ಆ ವರದಕ್ಷಿಣೆತ್ತೇಳುವ ರೂಪಾಯಿ ನೋಟುಗಳ ಹಾರನ ಕುತಿಗೆಗೆ ಹಾಕಿಸಿ ಕಂಬೋರುತ್ತೇಳುವ ಈ ಜನರ ಒತ್ತಾಯಕೆ (ಮಿ. ಮೋಹನ್) ಮದ್ವೆಗಂಡ್ ಬಹಳ ಬೇಜಾರ್ ಪಟ್ಟ್‌ಕಂಡತ್. ನಂಗೆ ಸತ್ಯವಾಗ್ಲೂ ನಿಮ್ಮ ಹಣ ಬೇಡ. ನಿಮ್ಮ ವರದಕ್ಷಿಣೆನೂ ಬೇಡ ನಂಗೆ ನೀವು ದಾರೆ ಎರ್ದ್ ಕೊಡುವ ಮಗಳು ಮಾತ್ರ ಸಾಕ್. ನನ್ನನ್ನ ಇಲ್ಲಿ ಹಂಗೆ ಎಲ್ಲಾ ಜನರ ಮುಂದೆ ಅವಮಾನ ಮಾಡ್ದುರ ದಯವಿಟ್ಟು ನಿಲ್ಸಿ. ಬೇಕಾದ್ರೆ ಈ ಹಣನ ನನ್ನ ಅಪ್ಪನ ಕುತಿಗೆಗೆ ಕಟ್ಟಿ. ವರದಕ್ಷಿಣೆನ ಕೇಳ್ದ್ ಅವು ತಾನೆ? ಅವೇ ಹಿಂದೆ ನಿಂತ್‌ಕಂಡ್ ಪೋಟೋನ ಹೊಡ್ಸಿಕಣಲಿ, ಅಲ್ಲಿದ ಹಿರಿಯವುಕೆ ಕೈಮುಗ್ದ್ ಕೇಳಿಕಂಡತ್.

ಇಷ್ಟಾಕ್ಯಾಕನ ಗಂಡಿನ ಕಡೆಯ ಕೆಲವು ಜನ ಗಲಾಟೆ ಶುರು ಮಾಡ್ದೊ. ನೀವು ಈಗ ನಮ್ಮನ ಬೇಕ್‌ಬೇಕ್‌ತಾ ವಿನಾಕಾರಣ ಅವಮಾನ ಮಾಡ್ತಾ ಒಳೋರಿ. ನೀವು ಒಂದ್ ಲಕ್ಷ ಹಣನ ಕೊಟ್ಟನೆತ ಒಪ್ಪಿಕಂಡಿದ್ದರೆ ಅದರ ಈ ಮದ್ವೆಗೆ ಮೊದ್ಲೋ ಅಥವಾ ಆಮೇಲೆನೋ ಈ ಹುಡ್ಗನ ಅಪ್ಪನ ಕೈಗೆ ಕೊಡಕಾಗಿತ್ತ್. ಇಷ್ಟೆಲ್ಲಾ ಜನರ ಮುಂದೆ ಹಿಂಗೆ ಅವಮಾನ ಮಾಡ್ದುರ ಬದ್ಲ್ ನಮಿಗೆ ವರದಕ್ಷಿಣೆ ಹಣನ ಕೊಡಿಕೆ ಆದುಲ್ಲೆತಾ ಅಂದೆ ಹೇಳಕ್ಕಾಗಿತ್. ಇದ್ ನಿಮ್ಮದ್ ಸುದ್ದ ತಪ್ಪ್‌ತಾ ಜೋರಾಗಿ ಬಾಯಿ ಮಾಡಿಕಂಡ್ ಹೇಳ್ದೊ. ಹಿಂಗೆ ಆ ಧಾರ ಮಂಟಪದ ಮದ್ವೆಲಿ ಅತ್ತ ಇತ್ತ ಸುಮಾರ್ ಹೊತ್ತ್ ಅತ್ತ ಇತ್ತ ಬಯ್ದಾಡಿಕಂಡ್ ಕಿರುಚಾಡಿಕಂಡ್ ಇದ್ದೊ.

ಈಗ ಈ ಪರಿಸ್ತಿತಿನ ನೋಡ್ದ ಮದುವಣ್ಣಿನ ಅಪ್ಪ ಜೋಯಪ್ಪನವು ಮುಂದೆ ಬಂದೊ. ಬೋಪಜ್ಜನವರ ಕೈನ ಹಿಡ್ಕಂಡೋ. ಬಾವಾ ನಂದ್ ತಪ್ಪಾಗಿಹೋತ್. ನಾನ್ ನಿಮ್ಮ ಹತ್ರ ಒಂದ್ ಲಕ್ಷ ಹಣನ ವರದಕ್ಷಿಣೆ ಬೇಕ್‌ತಾ ಕೇಳ್ದರಂದ ನಿಮಿಗೆ ಇಷ್ಟೆಲ್ಲಾ ತಾಪತ್ರೆ ಅನಾಹುತ ಆಗಿ ಹೋದೆತಾ ನಾನ್ ನಂಬಿಕಂಡಿತ್ಲೆ. ಈಗ ಸ್ವಲ್ಪ ಹೊತ್‌ಲಿ ನಿಮಿಗೆ ಆಗಿ ಹೋದ ತೊಂದ್ರೆಗಳ ಯಾರೋ ತಿಳಿಸಿದೊ. ನಿಮ್ಮ ಮಗಳನ್ನ ನಂಗೆ ಸೊಸೆ ಆಗಿ ಕಳ್ಸಿ ಕೊಡಿ ಸಾಕ್. ನಾನ್ ಅವಳ್ನ ನನ್ನ ಸ್ವಂತ ಮಗಳಂಗೆ ನೋಡಿಕಂಡನೆ. ನಂಗೆ ನಿಮ್ಮ ವರದಕ್ಷಿಣೆ ಹಣ ಖಂಡಿತವಾಗ್ಲೂ ಬೇಡ. ಅದರ ನೀವೇ ಮಡಗಿಕಣಿ. ನಾನ್ ಹಿಂದ್ ಮುಂದ್ ವಿಚಾರಮಾಡದೆ ನಿಮಗೆ ತೊಂದ್ರೆ ಕೊಟ್ಟದಕ್ಕೆ ನನ್ನನ್ನೂ ನನ್ನ ಮಂಜನೂ ದಯಮಡ್ಗಿ ಕ್ಷಮಿಸಿ ತಾ ಕೈಮುಗ್ದ್ ಕೇಳಿಕಂಡೊ. ಇನ್ನ್ ನಮ್ಮನ್ನ ಅವಮಾನ ಮಾಡದೆ ನಿಮ್ಮ ಮಗಳ ಕುತ್ತಿಗೆಗೆ ತಾಳಿ ಕಟ್ಟಿಕೆ ಅನುಮತಿ ಕೊಡೋಕು ತಾ ರಿಕ್ವೆಸ್ಟ್ ಮಾಡಿಕಂಡೊ. ಈ ವಿಷ್ಯಗಳ ಕೇಳಿಕಂಡ ಕೆಲವು ನೆಂಟ್ರ್‌ಗೆಲ್ಲಾ. ಓಹೋ ಇವರ ವಿಷ್ಯ ಇದೇನಾ?! ಹಿಂಗುಟ್ಟಾ ಇದರ ಗುಟ್ಟು! ಅದಕೇ ಮತ್ತೆ ಇವರ ಮಂಜ ಹಣನಸಂಪಾದನೆ ಮಾಡಿಕಂಡ್ ಬನ್ನೆತ್ತೇಳಿ ಮನೆಬುಟ್ಟು ಹೋಗಿದ್ದದ್ ತಾ ಮಾತಾಡಿಕಂಡೊ. ಇಲ್ಲಿ ನಡೆತ್ತಿದ್ದ ಈ ಗಲಾಟೆಗಳ ವಿಚಾರಗಳನೆಲ್ಲಾ ಅಲ್ಲಿಗೆ ಬಂದ್ ನಿಂತ್‌ಕಂಡ್ ನೋಡ್ತಿದ್ದ ಅನಪೇಕ್ಷಿತ ನೆಂಟ್ರ್‌ಗ ನೋಡಿ ಅರ್ಥ ಮಾಡಿಕಂಡೋ. ಏನು ಮಾಡ್ತಿರಾ ಪಾಪ ಈ ಅಣ್ಣನಾದ ಮಿ. ರಾಜುಗೆ ಅನಿವಾರ್ಯ ವಾಗಿ ನಮ್ಮಂತಹ ಸಮಾಜ ದ್ರೋಹಿಗಳ ವೀಕ್‌ನೆಸ್‌ನ ಹಿಡ್ದ್ ಕೆದಕಿ ನಮಿಗೆ ಟೋಪಿ ಹಾಕಿ ಹೋಗುಟ್ಟು. ಇದೆಲ್ಲಾ ಅಂವ ಅನಿವಾರ್ಯದ ಒತ್ತಡಕೆ ಸಿಕ್ಕಿದರಿಂದ. ನಮ್ಮಂತವುಕೆ ಮೋಸ ಮಾಡ್ತ್‌ತಾ ಮನ್ಸ್‌ಲೆ ಯೋಚನೆ ಮಾಡಿಕಂಡೊ.

ಆಗ ಮಿ. ಧರ್ಮಪಾಲ್ ಆಗಲಿ ಬಾವ. ಈಗ ನಂಗೆ ಖುಷಿ ಆತ್. ನೀವು ಕೂಡಾ ಮಾನವೀಯತೆಗೆ ಬೆಲೆ ಕೊಡುವಂತಹ ನನ್ನ ಪ್ರೀತಿಯ ಭಾವನ ಸ್ಥಾನನ ಪಡ್ಕಂಡರಿ. ಈಗ ನೀವು ನನ್ನ ತಂಗೆ ಶೋಭನ ಕುತಿಗೆಗೆ ತಾಳಿ ಕಟ್ಟಕ್ ತಾ ಹೇಳಿ. ತಂಗೆ ಹಿಡ್ದಿದ್ದ ರೂಪಾಯಿ ನೋಟ್‌ಗಳ ಹಾರನ ವಾಪಾಸ್ ತಕಂಡತ್. ಆಗ ಜೋರಾದ ವಾಲಗದ ಸದ್ದನ್ನೊಟ್ಟಿಗೆ ಗಂಡ್ ಹೆಣ್ಣ್‌ನ ಕುತ್ತಿಗೆಗೆ ಮಾಂಗಲ್ಯ ತಾಳಿನ ಕಟ್ಟಿದೊ. ಇಂತಹ ಒಂದ್ ಅಪೂರ್ವ ಸನ್ನಿವೇಶದ ಮದ್ವೆ ಇದೂವರ್ಗೂ ಎಲ್ಲೂ ನಡ್ದೇ ಇತ್ತ್‌ಲೆತ್ತೇಳಕ್ಕ್.

ಮುಖ್ಯವಾಗಿ ಈ ವರದಕ್ಷಿಣೆ ಹಣ ಒಂದ್ ಲಕ್ಷಕೋಸ್ಕರನೆ ಈ ಬೋಪಜ್ಜನ ಮನೆಲಿ ಇಷ್ಟೆಲ್ಲಾ ರದ್ದಾಂತ ನಡ್ದ್‌ಹೋದ್. ಆದ್ರೇ ಈಗ ಒಂದೇ ನಿಮಿಷಕ್ಕೆ ಈ ವರದಕ್ಷಿಣೆ ಎಂಬ ಭೂತದ ಉದ್ಘಾಟನೆ ಆಗಿ ಹೋಗಿ ಒಂದ್ ಆದರ್ಶ ರೀತಿಲಿ ಮದುವೆ ನಡಿಯುವಂಗೆ ಮಾಡ್ದ ಮಿ. ರಾಜುನ ಇವನ ಫ್ರೆಂಡ್ಸ್‌ಗ ಎಲ್ಲಾ ಸೇರಿಕಂಡ್ ಖುಷೀಲಿ ಎತ್ತಿಹಿಡ್ದ್ ಮುದ್ದಾಡಿಕಂಡ್ ಕೊಣ್ದಾಡಿ

20ನೇ ಪುಟಕ್ಕೆ

ಗೌಡ ಮಹಿಳಾ ಒಕ್ಕೂಟ, ಮೈಸೂರು

ವಾರ್ಷಿಕ ಸಭೆ ಹಾಗೂ ಮಹಿಳಾ ಸಶಕ್ತೀಕರಣ ದಿನ

ದಿನಾಂಕ 16-9-2001ರ ಭಾನುವಾರದಂದು ಸಂಘದ ವಾರ್ಷಿಕ ಮಹಾಸಭೆ ಹಾಗೂ ಮಹಿಳಾ ಸಶಕ್ತೀಕರಣ ದಿನ ಆಚರಿಸಿತು. ಬೆಳಿಗ್ಗೆ 10-45ಕ್ಕೆ ಸಾಂಸ್ಕೃತಿಕ ಸ್ಪರ್ಧೆಯೊಂದಿಗೆ ಕಾರ್ಯಕ್ರಮ ಪ್ರಾರಂಭವಾಯಿತು. ಸೋಬಾನೆ ಹಾಗೂ ಜಾನಪದ ಗೀತೆ ಸ್ಪರ್ಧೆಗಳಿದ್ದವು. ಆಟೋಟ ಸ್ಪರ್ಧಾಕಾರ್ಯಕ್ರಮಗಳು ನಡೆದವು. Lucky Woman, ನೀರಿನಿಂದ ಬಾಲು ತೆಗೆಯುವುದು, ಬಿಂದಿ ಅಂಟಿಸುವುದು, ಬಾಟ್ಲಲ್ಲಿ ನೀರು ತುಂಬಿಸಿ ಓಡುವುದು, ಮ್ಯೂಸಿಕಲ್ ಚೇರ್ ಆಟಗಳಿದ್ದವು. ಮಧ್ಯಾಹ್ನದ ನಂತರ ಸಭಾ ಕಾರ್ಯಕ್ರಮ ನಡೆಯಿತು. ಕಡ್ಯಡ ಶ್ಯಾಮಲರವರ ಪ್ರಾರ್ಥನೆಯೊಂದಿಗೆ ಸಭೆ ಆರಂಭವಾಗಿ ಪಟ್ಟಡ ಶೀಲಾಮಣಿಯವರು ಸ್ವಾಗತಿಸಿದರು. ಸಂಘದ ಖಜಾಂಚಿ ಕೂರನ ಚಂದ್ರಾವತಿಯವರು ಲೆಕ್ಕಪತ್ರ ಮಂಡಿಸಿದರು. ಕಾರ್ಯದರ್ಶಿನಿ ಗೀತಾ ಮೋಂಟಡ್ಕರವರ ವರದಿ ವಾಚನದ ನಂತರ 2001 - 2002ನೇ ಇಸವಿಯ ಹೊಸ ಕಾರ್ಯಕಾರಿ ಮಂಡಳಿಯ ರಚನೆಯಾಯಿತು. ಹೊಸ ಕಾರ್ಯಕಾರಿ ಮಂಡಳಿ ರಚಿತವಾಗುವುದಕ್ಕಿಂತಲೂ ಹಳೆಯ ಕಮಿಟಿಯೇ ಮುಂದುವರಿಯಬೇಕೆಂಬ ಸದಸ್ಯರ ಒಕ್ಕೊರಲಿನ ಧ್ವನಿಗೆ ದಂಬೆಕೋಡಿ ಭಾಗೀರಥಿಯವರು ತಲೆಬಾಗಲೇ ಬೇಕಾಯ್ತು. ಕಾರ್ಯದರ್ಶಿನಿಯಾಗಿ ಗೀತಾ ಮೋಂಟಡ್ಕರವರೂ, ಖಜಾಂಚಿಯಾಗಿ ದೀನಾ ರವಿಯವರು, ಉಪಾಧ್ಯಕ್ಷೆಯಾಗಿ ಕೂಡಕಂಡಿ ಲಲಿತಾ ಸೋಮಣ್ಣ ಹಾಗೂ ಜತೆ ಕಾರ್ಯದರ್ಶಿಯಾಗಿ ಕುಯ್ಯಮುಡಿ ನೀನಾ ಚಂಗಪ್ಪರವರು ಆಯ್ಕೆಯಾದರು. ಅದಲ್ಲದೇ ಕಾರ್ಯಕಾರಿ ಸಮಿತಿ ಸದಸ್ಯರುಗಳಾಗಿ ಮೊಟ್ಟನ ಪೊನ್ನಮ್ಮ ಜೋಯಪ್ಪ, ನಾಟೋಳನ ಸೀತಮ್ಮ, ಶ್ರೀಧರ್, ಚೆಟ್ಟಿಮಾಡ ಲಕ್ಷ್ಮೀ ರಘುಪತಿ, ಕಡ್ಯದ ಶ್ಯಾಮಲ ತಾರಣಯ್ಯ, ಕಡ್ಯದ ಸರೋಜ ಚುಂಡಯ್ಯ, ಬಾಲಾಡಿ ಲಕ್ಷ್ಮೀ ಉತ್ತಯ್ಯ, ತುಮ್ತಜ್ಜೀರ ಉಲ್ಲಾಸ ಭಾರತಿ, ತೆಕ್ಕಡೆ ಶಾರದ ಜನಾರ್ಧನ, ಚೆರಿಯಮನೆ ಯಶೋಧ ರಾಮಚಂದ್ರ, ಉಳುವಾರನ ಘನು ಚಂದ್ರಶೇಖರ, ಗುಡ್ಡೆ ಸುಶೀಲ ಕುಮಾರಪ್ಪ ಆಯ್ಕೆಯಾದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ ಚೀಯ್ಯಂಡಿರ ರಾಧಾ ಯಾದವ್ ಅಧ್ಯಕ್ಷರು ಕೊಡಗು ಗೌಡ ಮಹಿಳಾ ಒಕ್ಕೂಟ ಮಡಿಕೇರಿ ಇವರು ತಮ್ಮ ಅಧ್ಯಕ್ಷ ಸ್ಥಾನದಿಂದ ಮಾತನಾಡುತ್ತಾ ಹೆಣ್ಣು ಯಾವುದಕ್ಕೂ ಕಡಿಮೆ ಇಲ್ಲ. ಹೆಣ್ಣಲ್ಲಿ ಎಲ್ಲಾ ರೀತಿಯಾ ಶಕ್ತಿಯೂ ಇದೆ. ಅದನ್ನು ಸಂದರ್ಭ



ಕ್ಕನುಸಾರವಾಗಿ ಉಪಯೋಗಿಸಿಕೊಳ್ಳಬೇಕು. ಹೆಣ್ಣು ಅಬಲೆಯಲ್ಲ ಸಬಲೆ, ಹೆಣ್ಣು ವಿದ್ಯಾವಂತಳಾಗಬೇಕು ಅಲ್ಲದೆ ಬ್ಲಡ್ ಬ್ಯಾಂಕ್‌ನ್ನು ತೆಗೆಯುವುದರ ಬಗ್ಗೆ ಹಾಗೂ ಅದರ ಬಗ್ಗೆ ಮಾಹಿತಿಯನ್ನು ನೀಡಿದರು. ಸಭೆಯ ಅಧ್ಯಕ್ಷ ಸ್ಥಾನದಿಂದ ಮಾತನಾಡಿದ ಶ್ರೀಮತಿ ವಿಮಲಾ ಗಿರಿಗೌಡ ಅವರು ಸಮಾಜದ ಶೋಷಣೆಯನ್ನು ನಿವಾರಿಸಿಕೊಂಡು ಸರಿಪಡಿಸಿಕೊಂಡು ಹೆಣ್ಣು ಇಂದು ಎಲ್ಲಾ ರಂಗಗಳಲ್ಲೂ ಮುಂದೆ ಬರ್ತಿದ್ದಾಳೆ ಎಂದು ಹೇಳಿ, ಅವರು ವಿದ್ಯಾಭ್ಯಾಸದ ಕಡೆ ತುಂಬಾ ಮಹತ್ವ ನೀಡುತ್ತಾ ಕೇರಳದಲ್ಲಿ ಸಾಕ್ಷರತೆ 100% ಇದೆ. ಉಳಿದ್ಯಾವ ಕಡೆಯಲ್ಲೂ ಇಲ್ಲ. ಗ್ರಾಮೀಣ ಪ್ರದೇಶದಲ್ಲಿ ಹೆಣ್ಣಿಗೆ ಓದಲು ಅವಕಾಶಗಳಿರುವುದಿಲ್ಲ. ಆದರೆ ಇಂತಹ ಸಂಘ ಸಂಸ್ಥೆಗಳು ವಿದ್ಯಾಭ್ಯಾಸಕ್ಕೆ ಅವಕಾಶ ಮಾಡಿ ಕೊಡುವಲ್ಲಿ ಶ್ರಮಿಸಬೇಕು. ಜಿಲ್ಲಾ ಪಂಚಾಯತ್ ರಾಜ್ಯದಲ್ಲಿ 33% ಮೀಸಲಾತಿಯನ್ನು ಉಪಯೋಗಿಸಿಕೊಳ್ಳುವಲ್ಲಿ ಪ್ರಯತ್ನಿಸಬೇಕು. ಮಹಿಳಾ ಸಶಕ್ತೀಕರಣದ ಈ ವರುಷದಲ್ಲಿ ಮಹಿಳೆ ಎಲ್ಲಾ ರಂಗದಲ್ಲಿ ತನ್ನ ಧ್ವನಿಯ ಮಹತ್ವವನ್ನು ನಿಜವಾಗಿಯೂ ಇಡೀ ಜಗತ್ತಿಗೆ ತೋರಿಸಿಕೊಡುವಂತಾಗಬೇಕೆಂದು ತಿಳಿಹೇಳಿದರು. ಪ್ರತಿಯೊಂದೂ ಹೆಣ್ಣು ಸಾಕ್ಷರಳಾಗಬೇಕು ಎಂದು ಸಾಕ್ಷರತೆಯ ಮಹತ್ವವನ್ನು ತಿಳಿಸಿದರು.

ಸಂಘಕ್ಕೆ ನಾಟೋಳನ ಶ್ರೀಮತಿ ಸೀತಮ್ಮ ಶ್ರೀಧರ್‌ರವರು 500ರೂ.ಗಳ ಧನ ಸಹಾಯ ನೀಡಿದರು. ಚೆಟ್ಟಿಮಾಡ ಲಕ್ಷ್ಮೀ ರಘುಪತಿಯವರು ವಂದನಾರ್ಪಣೆ ಮಾಡಿದರು. ಕಾರ್ಯಕ್ರಮವನ್ನು ಗೀತಾ ಮೋಂಟಡ್ಕರವರು ನಿರೂಪಿಸಿದರು.

- ಸಂಗಾತಿ

ಮಾತಾಡ್ತಾ ಮಾತಾಡ್ತಾ ಗೌಡ ಅವರೆಕಾಯಿ ಕುಯ್ದನಂತೆ

ದೊಡ್ಡ ಪತ್ರೆ

ಸುಮಾರು ಎರಡು ಅಡಿಯಷ್ಟು ಎತ್ತರದ ಪೊದೆಯ ರೂಪದಲ್ಲಿ ಬೆಳೆಯುವ ದೊಡ್ಡ ಪತ್ರೆ ಹಚ್ಚ ಹಸಿರೆಲೆಗಳು ಗುಂಪಿರುವ ಗಿಡ. ಮರಳು ಮಿಶ್ರಿತ ಮಣ್ಣಿನಲ್ಲಿ ತೇವಾಂಶ ಜಾಸ್ತಿಯಿರುವ ಪ್ರದೇಶದಲ್ಲಿ ದೊಡ್ಡಪತ್ರೆಯ ಕಾಂಡವನ್ನು ನೆಟ್ಟು ಬಳಸಬಹುದು.

ಕಾಂಡವನ್ನು ನೆಟ್ಟು ಎರಡು ತಿಂಗಳಲ್ಲಿ ಗಿಡ ಬೆಳೆದು ನಿಲ್ಲುತ್ತದೆ. ಸುವಾಸನೆಯಿಂದ ಕೂಡಿದ ಎಲೆಗಳಿಂದ ದೊಡ್ಡ ಪತ್ರೆಯನ್ನು ಆಯುರ್ವೇದದಲ್ಲಿ 'ಪರ್ಣಯ ವಾನಿ' ಎಂದು ಕರೆಯುತ್ತಾರೆ.

ಜೀರ್ಣಶಕ್ತಿ ಹೆಚ್ಚಿಸುವ ಶಕ್ತಿಯಿರುವ ದೊಡ್ಡಪತ್ರೆಯ ಎಲೆಗಳನ್ನು ಅಜೀರ್ಣ, ಪಿತ್ತದ ಗಂಧೆ, ನೆಗಡಿ, ಕೆಮ್ಮು, ಹುಳು ಕೀಟಗಳ ಕಡಿತದ ಸಮಯದಲ್ಲಿ ಔಷಧೀಯ ರೂಪದಲ್ಲಿ ಬಳಸಲಾಗುತ್ತದೆ.

ಒಂದು ಚಮಚ ಜೇನುತುಪ್ಪದೊಂದಿಗೆ, ಒಂದು ಚಮಚ ದೊಡ್ಡ ಪತ್ರೆ ಎಲೆಯ ರಸವನ್ನು ಸೋಸಿ ಆಹಾರ ಸೇವಿಸುವ ಮೊದಲು, ದಿನಕ್ಕೆ ಮೂರಿ ಬಾರಿ ತೆಗೆದುಕೊಳ್ಳುವುದರಿಂದ ನೆಗಡಿ ಹಾಗೂ ಕೆಮ್ಮಿನ ಬಾಧೆ ಕಡಿಮೆಯಾಗುತ್ತದೆ. ಐದರಿಂದ ಹತ್ತು ವರ್ಷದ ಮಕ್ಕಳಿಗೆ ಇದರ ಅರ್ಧ ಭಾಗ ಕೊಡಬಹುದಾದರೆ ; ಎರಡರಿಂದ ಐದು ವರ್ಷದ ಮಕ್ಕಳಿಗೆ ಕಾಲು ಭಾಗ ಸಾಕು.

ದೊಡ್ಡಪತ್ರೆಯ ಒಂದೆರಡು ಎಲೆಗಳಿಗೆ ಒಂದು ಚಿಟಿಕೆ ಉಪ್ಪು ಸೇರಿಸಿ ದಿನಕ್ಕೆ ಮೂರು-ನಾಲ್ಕು ಬಾರಿ ಸೇವಿಸುವುದರಿಂದ ಅಜೀರ್ಣ ಮತ್ತು ಕೆಮ್ಮು ಕಡಿಮೆಯಾಗುತ್ತದೆ.

ದೊಡ್ಡ ಪತ್ರೆ ಎಲೆಯೊಂದಿಗೆ ಜೀರಿಗೆ, ಮೆಣಸು ಸೇರಿಸಿ ಹುರಿದು ನಂತರ ಚೆನ್ನಾಗಿ ಅರೆಯಬೇಕು. ಅದಕ್ಕೆ ಹುಳಿಯಿಲ್ಲದ ಮಜ್ಜಿಗೆ ಅಥವಾ ಮೊಸರು ಹಾಕಿ, ರುಚಿಗೆ ತಕ್ಕಷ್ಟು ಉಪ್ಪು ಹಾಕಿ, ಬಿಸಿ ಅನ್ನದೊಡನೆ ಸೇವಿಸಿದರೆ ಜೀರ್ಣಶಕ್ತಿ ವೃದ್ಧಿಸುತ್ತದೆ. ಚಳಿ ಹಾಗೂ ಮಳೆಗಾಲಕ್ಕೆ ಅತ್ಯುತ್ತಮವಾದ ಈ ಮಿಶ್ರಣ ಪಿತ್ತದ ತೊಂದರೆಯನ್ನು ನಿವಾರಿಸುವಲ್ಲಿ ಕೂಡ ಫಲಕಾರಿಯಾಗಿದೆ.

ನಾಲ್ಕೈದು ದೊಡ್ಡ ಪತ್ರೆ ಎಲೆ, ಸ್ವಲ್ಪ ಜೀರಿಗೆ ಪುಡಿ ಎರಡನ್ನು ಒಲೆಯ ಮೇಲಿನ ಕಾವಲಿಯ ಮೇಲೆ ಬಿಸಿ ಮಾಡಿ ನಂತರ ಹೊರ ತೆಗೆದು ಹಿಂಡಿ ರಸ ತೆಗೆಯಬೇಕು. ಈ ರಸಕ್ಕೆ ಸ್ವಲ್ಪ ಉಪ್ಪು ಜೇನುತುಪ್ಪ ಸೇರಿಸಿ ಆಹಾರ ಸೇವನೆಗಿಂತ ಮುಂಚೆ ದಿನಕ್ಕೆ ಎರಡು ಅಥವಾ ಮೂರು ಬಾರಿ ಸೇವಿಸುವುದರಿಂದ ಅಜೀರ್ಣ, ಹೊಟ್ಟೆ ನೋವು ಕಡಿಮೆಯಾಗುತ್ತದೆ. ಮಕ್ಕಳಿಗೆ ಇದು ಹೆಚ್ಚು ಪರಿಣಾಮಕಾರಿಯಾದರೂ ಪ್ರಮಾಣದಲ್ಲಿ ಅರ್ಧದಷ್ಟು ಮಾತ್ರ ಸಾಕಾಗುತ್ತದೆ.

ದೊಡ್ಡಪತ್ರೆ ರಸದೊಂದಿಗೆ ಜೀರಿಗೆ ಪುಡಿ ಸೇರಿಸಿ ಸೇವಿಸುವುದರ ಮೂಲಕ, ರಸವನ್ನು ಗಂಧೆಯ ಜಾಗಕ್ಕೆ ಹಚ್ಚುವ ಮೂಲಕ ಪಿತ್ತದ ಗಂಧೆಯನ್ನು ಕಡಮೆ ಮಾಡಬಹುದು.

– ಸಂಗಾತಿ

ಶೃಂಗೇರಿ ಶಾರದೆ

ಶೃಂಗ ಗಿರಿಯ ಮೇಲೆ ಒಂದು ಕೇರಿ ಇರುವುದಮ್ಮ
ಆ ಕೇರಿಯೊಳಗೆ ನೆಲೆಸಿಹಳು ನಮ್ಮ ಶಾರದಮ್ಮ
ಅರೆಭಾಷೆ ಗೌಡರು ನಂಬಿ ಹರಿಕೆ ಕಟ್ಟುವ ಮುತ್ತೈದೆ
ಸಬ್ಬಮ್ಮ ದೇವಿಯೆ ಶಾರದಮ್ಮ ॥ ಶೃಂಗ ಗಿರಿಯ॥

ಸುತ್ತಲಿನ ಹಸಿರು ತಾಣ ನೋಡಲೆನಿತು ರಮ್ಯ
ಪ್ರಾಣಿ, ಪಕ್ಷಿ, ಸಂಕುಲ ಇಲ್ಲಿ ಎಷ್ಟು ಸೌಮ್ಯ
ವಾಣಿ ವೀಣೆ ಧ್ವನಿಯು ಕಿವಿಗೆ ಕೇಳಲೆನಿತು ಮಧುರ
ದೇವಲೋಕ ಸಭೆಯ ಇಲ್ಲಿ ಬಂದು ನೆರೆಯಿತಮ್ಮ ॥ ಶೃಂಗ ಗಿರಿಯ॥

ಕಲ, ಕಲ, ರವ ತುಂಗೆಯ ಜಲ ಪಾನಕದುವೆ ರುಚಿಯು
ತಿಳಿ, ತಿಳಿ, ತಿಳಿ ಪುಣ್ಯ ಜಲ ಸ್ನಾನಕದುವೆ ಶುಚಿಯು
ಘಣ, ಘಣ, ಘಣ ಘಂಟೆ ಧ್ವನಿಗೆ ಬಂದು ನೆರೆದ ಭಕ್ತ ಜನ
ಭೂಲೋಕದ ಜನರಿಗೆ ಇದೋ ಇಲ್ಲೆ ಸ್ವರ್ಗ ॥ಶೃಂಗ ಗಿರಿಯ॥

ಸೂರ್‍ಯಕಿರಣ ನಾಟ್ಯವಾಡುವ ಗುಡಿಯೊಳಗಣ ಕಂಭ
ವಿಭಾಂಡಕ ಮುನಿಪುತ್ರ ಶೃಂಗಮುನಿಯ ತಪೋ ಭೂಮಿ
ಆದಿಗುರು ಶಂಕರರ ಮನ ಸೂರೆಗೊಂಡ ಪುಣ್ಯ ನೆಲ
ಬ್ರಹ್ಮಾಣಿಯೇ ಮನಸೋತು ನೆಲೆ ನಿಂತಿಹ ಈ ತಾಣ ॥ಶೃಂಗ ಗಿರಿಯ॥

ರಚನೆ : ಬಿಟ್ಟೀರ ಚೋಂದಮ್ಮ ಶಂಭು

ಬಾಳ್‌ದ್ ಯೋಗ್ಯತೆ

ರೂಪ ಪಡ್‌ಕಂಡ್ ಹುಟ್ಟುವ ಪ್ರತೀ ಒಂದ್ ಜೀವಕ್ಕೂನಾಶ ಉಟ್ಟೇಉಟ್ಟು. ಅಲ್ಲದೆ ಹುಟ್ಟಿದ ಮನ್ಸ ಸತ್ತೇ ಸಾಯೊಕು. ಇದರ ದೇವರ ಕೈಯಿಂದಲೂ ತಪ್ಪಿಸಿಕ್ಕಾದ್‌ಲೆ.

ಬಾಳ್ ಬದ್‌ಕ್‌ಲಿ "ಬದುಕು" ಗೆ ಯೋಗ್ಯತೆ ತ್ತೇಳ್ದು ಉಟ್ಟು. ಬಾಳ್‌ಲಿ ಯೋಗ್ಯತೆ ಇರುವ ಕಾಲಲಿ, ಲೋಕ ಕಂಟಕ ನಾ ಕಂಡ್ ಸಮಾಜ ವಂಚಕನಾಗಿರ್‍ಪ್ ಕಂಡ್ ನೂರು ಕಾಲ ಬಾಳ್ದುಗಿಂತ ಸಾವು ಸುಖ ತುಂಬಿ ಕಾಲ ಬದ್‌ಕಿರೆ ಪಾಪದ ಭಾರ ಜಾಸ್ತಿ ಆದೆ. ದೀರ್ಘಾಯುಷ್ಯ ಒಳ್ಳದಲ್ಲ. ಬಾಳ್‌ದ್ ರಸನ ಅರಿಯದೆ, ಪ್ರೇಮ, ಪ್ರೀತಿ, ನೇಮ, ನಿಷ್ಠೆಯ ರುಚಿನ ಅರಿಯದೆ, ಬಂಡೆ ಕಲ್‌ನಂಗೆ ನೂರು ವರ್ಷ ಬದುಕಿ ಏನ್ ಪ್ರಯೋಜನ? ನೂರು ವರ್ಷ ಬಾಳಿಬುಟ್ಟರೆ ಮಹಾತ್ಮನಾಗಿ ಹೋದುಲೆ. ಪ್ರತೀ ಕ್ಷಣನೂ ಒಳ್ಳೆತನಕೆ ಉಪಯೋಗ ಮಾಡಿಕಂಡ್ ಮನುಷ್ಯತ್ವತ್ತೇಳುವ ಹೂವಿನ ವಾಸನೆಲಿ ನೂರು ವರ್ಷ ಇರ್‍ವಂಗೆ ಬಾಳುದೇ ಬಾಳ್. ಉಪಕಾರ ಇಲ್ಲದ ಜೀವನ ವ್ಯರ್ಥ. ತನ್ನ ಬಾಳ್ ಇನ್ನೊಬ್ಬಂಗೆ ಉಪಕಾರ ಆಕು. ಅದೇ ಒಳ್ಳ ಬಾಳ್.

ಕೊಡವ ಭಾಷೆ : ಚೇಂದ್ರಿಮಾಡ ಜೆ. ಮುತ್ತಪ್ಪ
ಹಳೆಗನ್ನಡಕ್ಕೆ : ಪಟ್ಟಡ ಪ್ರಭಾಕರ್

ಕೊಡಗು ಸಂಗಾತಿ, ಪಾಕ್ಷಿಕನ್ನ ತಕ್ಕಂಡೊದಕು

ಕೊಡಗಿನಲ್ಲಿ ಸಾಮರಸ್ಯ ಮೂಡುವುದೇ?

ಸೆಪ್ಟೆಂಬರ್ 15ರಂದು ಸಂಪಾಜೆಯಲ್ಲಿ, ಕೊಡವ ಸಾಹಿತ್ಯ ಅಕಾಡೆಮಿ ಮತ್ತು ಅಮರ ಕ್ರಾಂತಿ ಉತ್ಸವ ಸಮಿತಿ ಆಶ್ರಯದಲ್ಲಿ ಕೊಡಗಿನಲ್ಲಿ ಭಾಷಾ ಸಾಂಸ್ಕೃತಿಕ ಸಾಮರಸ್ಯ ಎಂಬ ವಿಷಯದ ಬಗ್ಗೆ ವಿಚಾರ ಸಂಕಿರಣ ನಡೆಯಿತು. ಅಂದು ಸಂಪಾಜೆಯ ಸುಂದರ ಪರಿಸರದ-ನಡುವಿನ ವಿದ್ಯಾಮಂದಿರದಲ್ಲಿ ಸಾಂಸ್ಕೃತಿಕ ಮಿಲನವೇ ನಡೆದಿತ್ತೆನ್ನಬಹುದು. ಹಲವು ಸಂಸ್ಕೃತಿಗಳ, ಹಲವು ಸಂಪ್ರದಾಯಗಳ, ಹಲವು ಭಾಷೆಗಳ, ಹಲವು ಜಾತಿಗಳ ಜನ ಅಲ್ಲಿ ನೆರೆದು, ಈ 'ಹಲವು', ಎನ್ನುವುದನ್ನು ಮರೆತು ನಾವೆಲ್ಲಾ ಒಂದೇ ಎಂದು ಒಂದು ಕ್ಷಣ ಬೆರೆತರು. ನಮ್ಮಲ್ಲಿರುವ ಭಿನ್ನತೆಗಳಿಗೆ ಕಾರಣ ಹುಡುಕಿದರು. ಅದನ್ನು ಮೆಟ್ಟಿ ನಿಂತು ಒಂದಾಗಿ ಮುನ್ನಡೆಯುವ ಸಂಕಲ್ಪ ಮಾಡಿದರು. ಎನ್. ಎಸ್. ದೇವಿಪ್ರಸಾದ್‌ರವರು ನಮ್ಮಲ್ಲಿರುವ ದ್ವೇಷಾಸೂಯೆಗಳನ್ನು ಬಿಡಬೇಕು ಎಂದರು. 'ಭಾರತ-ಪಾಕ್ ನಡುವೆ ಭಿನ್ನಾಭಿಪ್ರಾಯವಿದ್ದರೂ ವಾಜಪೇಯಿ-ಮುಷರ್ರಫ್ ಆಗ್ರಾ ಮಾತುಕತೆ ನಡೆಸಲಿಲ್ಲವೇ, ಹಾಗೆ' ಎಂದರು. ಆದರೆ ಇದು ಕೇವಲ ನಾಯಕರಿಗೆ ಮಾತ್ರ ಸೀಮಿತವಾಗಬಾರದು. ವಾಜಪೇಯಿ-ಮುಷರ್ರಫ್ ಮಾತುಕತೆ ನಡೆಸಿದರೂ ಭಾರತ-ಪಾಕ್ ತಮ್ಮ ಹಗೆತನ ಬಿಡಲಿಲ್ಲ. ಈಗ ಮಾತ್ರವಲ್ಲ ಈ ಹಿಂದೆಯೂ ಸಿಮ್ಲಾ, ಲಾಹೋರ್ ಮುಂತಾದ ಕಡೆ ಮಾತುಕತೆ ನಡೆದಿದ್ದರೂ ಬಾಂಧವ್ಯದ ದೃಷ್ಟಿಯಲ್ಲಿ ಫಲಿತಾಂಶ ಶೂನ್ಯವಾಗಿತ್ತು. ಆದುದರಿಂದ ಮೊದಲು ನಮ್ಮ ಹೃದಯವನ್ನು ಶುದ್ಧೀಕರಿಸಿಕೊಳ್ಳಬೇಕಿದೆ. ಅದು ತಳಮಟ್ಟದ ಜನರಿಂದಲೇ ಆರಂಭಗೊಳ್ಳಬೇಕು. ಕೊಡಗಿನ ಜನತೆಯಲ್ಲಿ ಅದರಲ್ಲೂ ಕೊಡವ ಮತ್ತು ಗೌಡ ಜನಾಂಗದ ನಡುವೆ ಬಿರುಕು ಬಿಟ್ಟಿರುವುದು ಈಗ ಗುಟ್ಟಾಗೇನೂ ಉಳಿದಿಲ್ಲ. ಈ ಬಿರುಕನ್ನು ಹೊಸೆದು ಸಂಬಂಧವನ್ನು ಗಟ್ಟಿಗೊಳಿಸುವ ದಿಕ್ಕಿನಲ್ಲಿ ಎರಡೂ ಜನಾಂಗಗಳ ಜನನಾಯಕರು ತಕ್ಷಣ ಮುಂದಾಗಬೇಕಿದೆ. ಸಂಪಾಜೆಯ ಈ ಕಾರ್ಯಕ್ರಮವೇ ಸಮಸ್ಯೆ ಅಳಿಸಿ ಸಾಮರಸ್ಯದ ಬುನಾದಿಗೆ ನಾಂದಿಯಾಗಬೇಕಾಗಿದೆ.

ಕೊಡಗಿನಲ್ಲಿ ಯಾವಾಗ 'ಪ್ರತ್ಯೇಕ ರಾಜ್ಯದ' ಹೋರಾಟ ಆರಂಭವಾಯಿತೋ, ಅಂದಿನಿಂದಲೆ ಎರಡೂ ಪ್ರಬಲ ಜನಾಂಗಗಳ ದೃಷ್ಟಿ ಭಿನ್ನ ದಿಕ್ಕಿಗೆ ಹರಿಯಲಾರಂಭಿಸಿತು. ಕೊಡವ ಜನಾಂಗ ಗೌಡ ಜನಾಂಗವನ್ನು ಈ ಹಿಂದೆ ಸಾಕಷ್ಟು ತುಳಿತಕ್ಕೊಳಪಡಿಸಿದೆ. ಮುಂದೆ ಕೊಡಗು ಪ್ರತ್ಯೇಕ ರಾಜ್ಯವಾದರೆ ಮತ್ತದೇ ಸ್ಥಿತಿ ಗೌಡ ಜನಾಂಗಕ್ಕೊದಗುತ್ತದೆಂಬುದು ಗೌಡ ಜನಾಂಗದ ಕೊರಗಾದರೆ, ಗೌಡ ಜನಾಂಗದವರು ಕೊಡಗಿನ ಯಾವುದೇ ಸಮಸ್ಯೆಗಳಿಗೆ ಸ್ಪಂದಿಸುವವರಲ್ಲ, ಹೋರಾಟಗಳಿಗೆ ಇಳಿಯದೆ ಪ್ರತಿಫಲ ಬಯಸುವವರು ಎಂಬುದು ಕೊಡವರ ದೂರು. ಆದರೆ ವಾಸ್ತವಿಕವಾಗಿ ನೋಡಿದರೆ ಈ ಎರಡೂ ದೃಷ್ಟಿಕೋನಗಳೂ ತಪ್ಪು. ಈ ದೃಷ್ಟಿಕೋನಗಳನ್ನೇ ದೊಡ್ಡದು ಮಾಡಿ ಬೇರೆ ಬೇರೆ ದಾರಿಗಳಲ್ಲಿ ಸಾಗಿ ಹೋದದ್ದು ಬಹು ದೊಡ್ಡ ದುರಂತ. ಆದರೆ ತಡವಾಗಿಯಾದರೂ ನಮ್ಮ ಮುಂದಾಳುಗಳು ಒಂದೇ ದಾರಿಯಲಿ ಸಾಗುವ ಮನಸ್ಸು ಮಾಡಿದಂತೆ ತೋರುತ್ತಿದೆ. 'ಪ್ರತ್ಯೇಕ ರಾಜ್ಯದ' ಹೋರಾಟದ ವಿರುದ್ಧ ದ್ವೇಷಕ್ಕೆ ಮಂಗಳ ಹಾಡಿ ಸಾಮರಸ್ಯದ ಸುಂದರ ಗಾನವ ಮೊಳಗಿಸಿತು. ಕೊಡವ ಸಾಹಿತ್ಯ ಅಕಾಡೆಮಿಯ ಅಧ್ಯಕ್ಷರು ಆ ಗಾನದ ನಡುವೆಯೇ, ಕೊಡವ ಸಾಹಿತ್ಯ ಅಕಾಡೆಮಿ ಎಲ್ಲರ ಹೃದಯ ಮುಟ್ಟುವ ಪ್ರಯತ್ನ ಮಾಡುತ್ತದೆಂದು ಘೋಷಿಸಿದರು.

ಖ್ಯಾತ ರಾಜ್ಯಶಾಸ್ತ್ರಜ್ಞ ರೂಸೋ ಅಭಿಪ್ರಾಯಪಟ್ಟಿರುವ ಹಾಗೆ "ಮನುಷ್ಯ ಸ್ವತಂತ್ರನಾಗಿ ಹುಟ್ಟುತ್ತಾನೆ, ಆದರೆ ನಂತರ ಎಲ್ಲೆಲ್ಲೂ ಬಂಧಿಸಲ್ಪಟ್ಟಿದ್ದಾನೆ". ಸಂಸ್ಕೃತಿ, ಭಾಷೆ, ಧರ್ಮ, ಮೇಲು, ಕೀಳು ಎನ್ನುವ ಭೇದ ಭಾವಗಳ ಸಂಕೋಲೆಗಳಿಂದ ನಾವು ನಮ್ಮನ್ನೇ ಕಟ್ಟಿಹಾಕಿಕೊಂಡಿದ್ದೇವೆ. ಇವುಗಳೆಲ್ಲವೂ ನಮ್ಮ ನಡೆ ನುಡಿಯನ್ನು ನಿಯಂತ್ರಿಸಲು ಬೇಕು ನಿಜ. ಆದರೆ ಇವೇ ಸರ್ವಸ್ವವಲ್ಲ. ಇವುಗಳೆಂದೂ ನಮ್ಮ ಸಮಸ್ಯೆಗಳನ್ನು ದೂರ ಮಾಡಲಾರವು. ಇಂದು ಕೊಡಗು ಸಮಸ್ಯೆಗಳ ಸುಳಿಯಲ್ಲಿ ಸಿಕ್ಕಿ ನರಳುತ್ತಿದೆ. ಇಲ್ಲಿನ ಹಲವು ಗ್ರಾಮಗಳಿಗೆ ಇನ್ನೂ ಬಸ್ಸಿನ ಸೌಕರ್ಯವಿಲ್ಲ, ವಿದ್ಯುತ್ ಸೌಕರ್ಯವಿಲ್ಲ. ಕೊಡಗಿನವರು ಹಲವು ಮಂದಿ ಬಡವರಿದ್ದರೂ ಸರಕಾರದ ದೃಷ್ಟಿಯಲ್ಲಿ ಎಲ್ಲರೂ ಶ್ರೀಮಂತರೇ !, ತನ್ನ ಸ್ವಂತ ಜಾಗದಿಂದ ಮರು ಕಡಿಯುವಂತಿಲ್ಲ, ಇಲ್ಲಿಗೆ ಬರುವ ಅಧಿಕಾರಿಗಳನ್ನಂತೂ ಕೇಳುವವರೇ ಇಲ್ಲ. ನೈಸರ್ಗಿಕವಾಗಿ, ಸಾಂಸ್ಕೃತಿಕವಾಗಿ, ನೈತಿಕವಾಗಿ ಕೊಡಗು ಸಾಕಷ್ಟು ಶ್ರೀಮಂತ ಜಿಲ್ಲೆಯಾಗಿದ್ದರೂ, ಅಭಿವೃದ್ಧಿಯ ವಿಷಯದಲ್ಲಿ ಕೊಡಗೇಕೆ ಕೊನೆಯ ಸ್ಥಾನದಲ್ಲಿ ನಿಲ್ಲಬೇಕಾಗಿದೆ ?

ಕೊಡಗಿನವರಲ್ಲಿ ಹಿಂದೆ ಅಧಿಕಾರ ಲಾಲಸೆಯಿರಲಿಲ್ಲ, ಜೊತೆಗೆ ಜಾತ್ಯಾತೀತ ಮನೋಭಾವನೆಯಿತ್ತು. ಆದುದರಿಂದ ಕೊಡಗು ಭವ್ಯತೆಯನ್ನು ಸೃಷ್ಟಿಸಿತ್ತು. ಆದರೆ ಇಂದು ಇದರ ವಿರುದ್ಧ ದಿಕ್ಕಿನಲ್ಲಿ ಕೊಡಗು ಚಲಿಸುತ್ತಿದೆ ಎಂದು ಡಾ|| ಕೋಡಿ ರ. ಲೋಕೇಶ್‌ರವರು ಆತಂಕ ವ್ಯಕ್ತಪಡಿಸಿದ್ದರಲ್ಲಿ ಸತ್ಯಾಂಶವಿದೆ. ಕೊಡಗಿನ ಸಾಮಾನ್ಯ ವ್ಯಕ್ತಿಗೆ ಇಂದು ದ್ವೇಷ ಬೇಕಿಲ್ಲ, ವೈರತ್ವ ಬೇಕಿಲ್ಲ, ಸ್ನೇಹ ಸಾಂತ್ವಾನ ಬೇಕಾಗಿದೆ. ತಾನು ಬೆಳೆದ ಬೆಳೆಗಳಿಗೆ ಸರಿಯಾದ ಬೆಲೆಯಿಲ್ಲದೆ ಕಂಗೆಟ್ಟಿರುವ ಕೊಡಗಿನ ಅನ್ನದಾತನಿಗೆ ಸಾಮರಸ್ಯದ ಹೊಸಬೆಳಕು ಬೇಕಾಗಿದೆ. ಕೊಡವ ಸಾಹಿತ್ಯ ಅಕಾಡೆಮಿಯ ನೂತನ ಅಧ್ಯಕ್ಷ ಬಾಚರಣಿಯಂಡ ಅಪ್ಪಣ್ಣನವರಿಗೆ ಆ ಬೆಳಕು ನೀಡುವ ಉಜ್ವಲ ಶಕ್ತಿಯಿದೆ. ಪಾದರಸದಂತೆ ಜನರ ಮನಮುಟ್ಟಿ ಸಂಘಟಿಸಬಲ್ಲ ಎನ್. ಎಸ್. ದೇವಿಪ್ರಸಾದ್‌ರಂತಹವರ ಬೆಂಬಲ ಇವರಿಗಿದೆ. ಅಂದಿನ ಕಾರ್ಯಕ್ರಮದಲ್ಲಿ ಎಲ್ಲರೂ ಅಭಿಪ್ರಾಯಪಟ್ಟಿರುವ ಹಾಗೆ ಕೊಡವ ಸಾಹಿತ್ಯ ಅಕಾಡೆಮಿ ಕೊಡಗಿನ ಸರ್ವಜನಾಂಗಗಳ ಬಾಂಧವರನ್ನು ತನ್ನ ತೆಕ್ಕೆಯೊಳಗೆ ಸೇರಿಸಿಕೊಂಡು ಒಡೆದು ಹೋದ ಒಗ್ಗಟ್ಟನ್ನು ಮತ್ತೆ ಕಟ್ಟುವಂತಾಗಬೇಕು.

'ದ್ವೇಷದಿಂದ ದೇಷ ನಾಶವಾಗುವುದಿಲ್ಲ. ಪ್ರೇಮದಿಂದ ದ್ವೇಷ ನಾಶವಾಗುತ್ತದೆ' ಎನ್ನುವ ಬುದ್ಧನ ಮಾತಿನಂತೆ ಕೊಡಗಿನಪ್ರತಿಯೊಬ್ಬರೂ ದ್ವೇಷಾಸೂಯೆ ಮರೆತು ಅಪ್ಪಣ್ಣನವರೊಡನೆ ಸಹಕರಿಸಿದಾಗ, ಅವರೂ ಎಲ್ಲರನ್ನೂ ಸೇರಿಸಿಕೊಂಡು ಮುನ್ನಡೆದಾಗ ನಿಜಕ್ಕೂ ಪಂಜೆಮಂಗೇಶರಾಯರ ಹೆಮ್ಮೆಯ ಕೊಡಗು ಎದ್ದು ನಿಲ್ಲಬಹುದೇನೊ.

ಪಟ್ಟಡ ಶಿವಕುಮಾರ್, ಉಪನ್ಯಾಸಕ

ಹಾಸನದಲ್ಲಿ ಕೈಲ್‌ಪೋದ್ ಹಬ್ಬ

ಇದೇ ಸೆಪ್ಟೆಂಬರ್ 9ನೇ ಭಾನುವಾರ ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಗೌಡ ಬಾಂಧವರುಗಳು ಒಂದಾಗಿ ಬಹಳ ಸಂತೋಷದಿಂದ, ಉತ್ಸಾಹದಿಂದ ನಾಡಹಬ್ಬವಾದ ಕೈಲ್‌ಪೋದ್ ಹಬ್ಬವನ್ನು ಸಾಂಪ್ರದಾಯಿಕವಾಗಿ ಆಚರಿಸಿದರು.

ಈ ಹಬ್ಬದ ಕಾರ್ಯಕ್ರಮಗಳು ಬೆಳಿಗ್ಗೆ 10 ಗಂಟೆಯಿಂದಲೇ ಪ್ರಾರಂಭವಾಯ್ತು. ಸಮಾರಂಭದ ಅಧ್ಯಕ್ಷತೆಯನ್ನು ಆಹ್ವಾನಿತ ಗೋಣಿಕೊಪ್ಪದ ಹೆಸರಾಂತ ಕಾಫಿ ಬೆಳೆಗಾರರೂ, ದಾನಿಗಳೂ ಹಾಗೂ ಹಲವಾರು ಸಂಘ ಸಂಸ್ಥೆಗಳ ಅಧ್ಯಕ್ಷರೂ ಆದ ಶ್ರೀ ಪಡಿಕಲ್ಲು ಮಾದಪ್ಪನವರು ವಹಿಸಿದ್ದರು. ಅಲ್ಲದೆ ವೇದಿಕೆಯಲ್ಲಿ ಹಾಸನದ ಗೌಡ ಸಂಘದ ಅಧ್ಯಕ್ಷರಾದ ಕೋರನ ಆನಂದರವರು, ಫಿಲ್ಮ್ ಪ್ರೊಡ್ಯೂಸರ್ ಶ್ರೀ ಭವಾನಿಶಂಕರ್‌ರವರು ಹಾಗೂ ವ್ಯವಸಾಯ ಇಲಾಖೆಯ (ನಿವೃತ್ತ) ಸುಬ್ಬಪ್ಪಗೌಡರು ಉಪಸ್ಥಿತರಿದ್ದರು.


ಈ ಹಬ್ಬದ ಕಾರ್ಯಕ್ರಮಗಳನ್ನೆಲ್ಲಾ ವಿಶೇಷ ಆಸಕ್ತಿಯಿಂದ ಸಂಯೋಜಿಸಿ ನಿರೂಪಿಸುವ ವ್ಯವಸ್ಥೆಯನ್ನು ಕಾರ್ಯಕಾರಿ ಮಂಡಳಿಯ ಸದಸ್ಯರುಗಳಾದ ಶ್ರೀ ಕೈಬಿಲಿರ ಪೊನ್ನಪ್ಪನವರು, ಕಲ್ಲುಮುಟ್ಲು ಲೋಕನಾಥ್‌ರವರು, ಕನ್ನಡ್ಕ ಎಸ್. ಗಣೇಶ್‌ರವರು, ಬೈಲೋಳಿರ ಹರೀಶ್‌ರವರೂ, ಶ್ರೀಮಾನ್ ರಾಮೇಗೌಡರು ವಹಿಸಿಕೊಂಡಿದ್ದರು.

ಮೊದಲಾಗಿ ಶ್ರೀಮತಿ ಪ್ರೇಮಾ ಚೆಂಗಪ್ಪನವರು ಪ್ರಾರ್ಥನೆ ಮಾಡಿದರು. ಹಾಗೂ ಕಾರ್ಯಕ್ರಮದ ಸ್ವಾಗತವನ್ನು ಶ್ರೀ ಕೊಂಬಾರನ ಬಸಪ್ಪನವರು ಮಾಡಿದರು.

ದಿವಂಗತ ಜೈನಿರ ಪಾರ್ವತಿ ಚೆಂಗಪ್ಪ ಅವರ ಮೊಮ್ಮಗ ಗೌತಮ್ ಮಗುವಿನ ನಾಮಕರಣದ ಪ್ರಯುಕ್ತ ಅಲ್ಲಿ ನೆರೆದಿದ್ದ ಎಲ್ಲಾ ಜನರಿಗೂ ತಂಪು ಪಾನೀಯ (ಕೋಕಾಕೋಲ ಮತ್ತು ಪಾಂಟಾ)ವನ್ನು ವಿತರಿಸಿ ಸಭೆಯಲ್ಲಿ ಉತ್ತೇಜನವನ್ನುಂಟು ಮಾಡಿದರು.

ಇದಲ್ಲದೆ ಈ ಸಭೆಯಲ್ಲಿ ಪರ್ಲೆಕೋಟಿ ಶ್ರೀಮತಿ ಸುಬ್ಬಮ್ಮನವರು ಹಾಸನದ ಗೌಡ ವಿದ್ಯಾ ಸಂಘಕ್ಕೆ ಉದಾರವಾಗಿ ರೂ. 10,000ವನ್ನು ದಾನವಾಗಿ ಕೊಡುವ ಭರವಸೆಯನ್ನು ನೀಡಿದರು. ಅಲ್ಲದೆ ಅವರು ಇಲ್ಲಿಯ ಹಿರಿಯ ಕಿರಿಯ ಜನರಿಗೆ ನಮ್ಮ ಗೌಡ ಭಾಷೆ(ಹಳೆಗನ್ನಡ)ದಲ್ಲಿಯೇ ಹಿತವಚನ ನೀಡುತ್ತಾ ಈ ಸಂಘದ ಕಟ್ಟಡವನ್ನು ಕಟ್ಟುವ ನಿಟ್ಟಿನಲ್ಲಿ ಸರ್ವರೂ ತಾರತಮ್ಯ ಮರೆತು ಒಗ್ಗೂಡಬೇಕೆಂದು ಮತ್ತು ಹಾಸನದಲ್ಲಿ ಇರತಕ್ಕಂತಹ ವಿರಳ ಮಂದಿ ನಮ್ಮ ಈ ಕೊಡಗು ಮತ್ತು ದಕ್ಷಿಣ ಕನ್ನಡ ಜಿಲ್ಲೆ ಗೌಡ ಜನರು ಸಂಘಟಿತರಾಗಿ ಮೇಲೆ ಬರಲು ಶ್ರಮಪಡಬೇಕೆಂದು ಕಿವಿಮಾತು ಹೇಳಿದರು.

ಅಧ್ಯಕ್ಷರಾದ ಪಡಿಕಲ್ಲು ಮಾದಪ್ಪನವರು ಮಾತನಾಡುತ್ತಾ ಈ ನಾಡಹಬ್ಬ ಕೈಲು ಮೂಹೂರ್ತದ ಬಗ್ಗೆ ಸವಿವರವಾದ



ಮಾಹಿತಿಯನ್ನು ನೀಡುತ್ತಾ ಈ ಪೂಜೆಯಲ್ಲಿ ಕೆಲವು ಮುಖ್ಯ ಪದ್ಧತಿಗಳಾದ ಕತ್ತಿ, ಕೋವಿ, ಕೃಷಿ ಉಪಕರಣಗಳನ್ನಿಟ್ಟು ಸಾಂಕೇತಿಕವಾಗಿ ಪೂಜಿಸಬೇಕೆಂದು ಅಲ್ಲದೆ ಈ ಹಾಸನದಲ್ಲಿ ಬಹಳ ವಿರಳ ಗೌಡ ಬಾಂಧವರಿದ್ದರೂ ಇಷ್ಟೊಂದು ಒಗ್ಗಟ್ಟಾಗಿ ಸಂಘಟನೆ ಮಾಡಿ ಇಂತಹ ಸಂತೋಷ ಕೂಟವನ್ನು ನಡೆಸುತ್ತಿರುವುದಕ್ಕೆ ಶ್ಲಾಘಿಸಿ ಹರ್ಷ ವ್ಯಕ್ತಪಡಿಸಿದರು.

ಸಂಘದ ಅಧ್ಯಕ್ಷರಾದ ಕೋರನ ಶ್ರೀ ಆನಂದನವರು ಹಾಸನದಲ್ಲಿರತಕ್ಕ ಗೌಡ ಜನರನ್ನು ಸಂಘಟಿಸುವ ಈ ಸದವಕಾಶಕ್ಕಾಗಿಯೇ ಈ ಕೈಲ್ ಪೋದ್‌ನಂತಹ ನಾಡ ಹಬ್ಬವನ್ನು ಆಚರಿಸುತಿರುವುದು ಮತ್ತು ಈ ಮೂಲಕ ನಮ್ಮ ಮೂಲ ಸಂಸ್ಕೃತಿ, ಭಾಷೆಗಳನ್ನು ಉಳಿಸಿಕೊಂಡು ಬರಲು ನಮ್ಮ ಜನರನ್ನು ಪ್ರೇರೇಪಿಸಲು ಇಂತಹ ಸಂತೋಷ ಕೂಟಗಳು ಮುಖ್ಯವಾಗಿದೆ ಎಂದು ಅಭಿಪ್ರಾಯಪಟ್ಟರು.

ಶ್ರೀಮತಿ ಸೀತಮ್ಮ ಮಾದಪ್ಪನವರು ಮಾತನಾಡುತಾ ಹೀಗೆ ನಮ್ಮ ಕೊಡಗು ಹಾಗೂ ದಕ್ಷಿಣ ಕನ್ನಡ ಜಿಲ್ಲೆಯ ಗೌಡರುಗಳು ನಮ್ಮ ನಾಡಿನಿಂದ ಹೊರಬಂದು ನೆಲೆಸಿ ತಮ್ಮ ಸ್ಥಾನಮಾನಗಳಲ್ಲಿ ಭದ್ರವಾಗಿರುವುದನ್ನು ಶ್ಲಾಘಿಸಿದರಲ್ಲದೆ ಇಲ್ಲೂ ಕೂಡಾ ಮಹಿಳಾ ಒಕ್ಕೂಟವನ್ನು ಸ್ಥಾಪನೆ ಮಾಡಿ ಆ ಮೂಲಕ ಮಹಿಳೆಯರು ನೈತಿಕವಾಗಿಯೂ ಆರ್ಥಿಕವಾಗಿಯೂ ಮೇಲೇರಿ ಬರಬೇಕೆಂದು ಮಹಿಳೆಯರಿಗೆ ಕರೆಕೊಟ್ಟರು.

ಕಲ್ಲು ಮುಟ್ಲು ಲೋಕನಾಥ್‌ರವರು ಎಲ್ಲಾ ಗೌರವಾನ್ವಿತರಿಗೂ ಸಭೆಯ ಪರವಾಗಿ ವಂದಿಸಿದರು. ಹಾಗೂ ಈ ಸಂತೋಷಕೂಟಕ್ಕೆ ಬಿಚ್ಚು ಮನಸ್ಸಿನಿಂದ ಸಹಕರಿಸಿದ ಕಾರ್ಯಕರ್ತರಿಗೂ, ಪತ್ರಿಕಾ ಪ್ರತಿನಿಧಿಯವರಿಗೂ ವಂದಿಸಿದರು.

ಈ ಕೈಲ್ ಮುಹೂರ್ತ ಹಬ್ಬದ ಅಂಗವಾಗಿ ನೆರೆದಿದ್ದ ಎಲ್ಲಾ ವರ್ಗದ ಯುವ ಜನರಿಗೂ, ಹಿರಿಯ ವರ್ಗದವರಿಗೂ, ಕಿರಿಯ ವರ್ಗದವರಿಗೂ ವೈವಿಧ್ಯಮಯವಾದ ಆಟೋಟಗಳ ಸ್ಪರ್ಧೆಗಳನ್ನು ಏರ್ಪಡಿಸಿ ಎಲ್ಲರೂ ನಕ್ಕು ನಲಿದಾಡುವಂತೆ ಮಾಡಿತು.

ಅಲ್ಲದೆ ಅಲ್ಲಿ ನೆರೆದಿದ್ದ ಎಲ್ಲಾ ಅತಿಥಿಗಳಿಗೂ ತೃಪ್ತಿಯಾಗುವಷ್ಟು Shoft Drinks ಹಾಗೂ Hot Drinksಗಳನ್ನು ವ್ಯವಸ್ತೆ ಮಾಡಿದ್ದರು. ಅಲ್ಲದೆ ಈ ಮೇಲ್ಕಂಡ ಆಟೋಟಗಳು

ಮುಂದಿನ ಪುಟಕ್ಕೆ

6ನೇ ಪುಟದಿಂದ

ಮಾತನಾಡಿ ಭಾಷೆಯ ಬಗ್ಗೆ, ಇದು ನನ್ನ ಭಾಷೆ ಎನ್ನುವ ಸ್ವಾರ್ಥ ಬಿಡಬೇಕು. ಅತಿಥಿಗಳನ್ನು ಅತಿಥೇಯರೆಂದೇ ಭಾವಿಸಬೇಕು, ಎಲ್ಲಾ ಭಾಷೆ ಸಂಸ್ಕೃತಿಗಳಿಗೂ ಸಮಾನ ಅವಕಾಶ ಕಲ್ಪಿಸಬೇಕೆಂದು ಮನವಿ ಮಾಡಿದರು. ಶ್ರೀ ಟಿ. ಕೆ. ಜಿ. ಭಟ್‌ರವರು ಈ ವಿಚಾರ ಸಂಕಿರಣದ ವಿಷಯಗಳು ನಾಡಿನ ಮೂಲೆ ಮೂಲೆಗೂ ಪಸರಿಸಿ ಜನರಲ್ಲಿ ಸಾಮರಸ್ಯ ಮೂಡಲಿ ಎಂದು ಹಾರೈಸಿದರು.

ಕಾರ್ಯಕ್ರಮವು 'ಆರದಿರಲಿ ದೀವಿಗೆ, ಬೆಳಕು ತರಲಿ ಬಾಳಿಗೆ' ಎಂಬ ಸಂಪಾಜೆ ಕಾಲೇಜಿನ ವಿದ್ಯಾರ್ಥಿನಿಯರ ಪ್ರಾರ್ಥನೆಯೊಂದಿಗೆ ಆರಂಭಗೊಂಡಿತು. ಅಮರ ಕ್ರಾಂತಿ ಉತ್ಸವ ಸಮಿತಿಯ ಕಾರ್ಯದರ್ಶಿ ಜನಾರ್ಧನ ಕಣಕೂರು ಸ್ವಾಗತಿಸಿದರೆ, ಅಕಾಡೆಮಿ ಸದಸ್ಯ ಮುಕ್ಕಾಟಿರ ವಸಂತ, ಪ್ರಾಂಶುಪಾಲ ಶ್ರೀ ಟಿ. ಎನ್. ಭಟ್, ಉಪನ್ಯಾಸಕ ಎಂ. ಎಸ್. ಭಟ್ ಕಾರ್ಯಕ್ರಮ ನಿರೂಪಿಸಿದರು. ಅಕಾಡೆಮಿ ಸದಸ್ಯ ಮತ್ತು ಮತ್ತಿತರರು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ವರದಿ : ಪಟ್ಟಡ ಶಿವಕುಮಾರ್, ಮದೆ

8ನೇ ಪುಟದಿಂದ

26) Vth National games held at Manipur 1999
Ist Place
27) 7th South Asian games held at Madras
Ist Place
28) Ist Asian Kho-Kho Championship held at Calcutta
Ist Place
29) IInd Asian Kho-Kho championship held at **Dhaka Bangladesh Ist Place "Indian Captain" Best player Award**
30) State Ekalavya Award 1999 Given on 3rd August 2001.

– ತಡಿಯಪ್ಪನ ಕುಮಾರಜಯ, ಮೈಸೂರು

ಅತ್ಯಂತ ಹಳೆಯ ರಾಷ್ಟ್ರಗೀತೆ :

ದಾಖಲೆಗಳೆಂದ ಮೇಲೆ ಅವು ರಾಷ್ಟ್ರಗೀತೆಗಳನ್ನು ಬಿಟ್ಟು ಬಿಡುವುದಿಲ್ಲ. ಪ್ರಪಂಚದಲ್ಲಿಯೇ ಅತ್ಯಂತ ಹಳೆಯ ರಾಷ್ಟ್ರಗೀತೆಯೆಂದರೆ ಜಪಾನ್ ದೇಶದ 'ಕಿಮಿಗಾಯೊ' ಈ ಗೀತೆ 9ನೇ ಶತಮಾನದಲ್ಲಿ ರಚಿತವಾಯಿತು. ಆದರೆ ಇದಕ್ಕೆ ಸಂಗೀತ ಅಳವಡಿಸಿದ್ದು 1881ರಲ್ಲಿ. ರಾಷ್ಟ್ರಗೀತೆಗೆ ಮೊತ್ತ ಮೊದಲ ಬಾರಿಗೆ ಸಂಗೀತ ನೀಡಿದ ಹೆಮ್ಮೆ ನೆದರ್‌ಲ್ಯಾಂಡ್ಸ್‌ನ ಜನರದ್ದು. ಅವರ ರಾಷ್ಟ್ರಗೀತೆ ವಿಲ್‌ಹೆಲ್ಮ್ಸ್‌ಗೆ 1570ರಲ್ಲಿ ಸಂಗೀತ ಅಳವಡಿಸಲಾಯ್ತು.

-ಕೆ. ಡಿ. ಸುಮಿ, ಅಪ್ಪಂಗಳ

ಹಿಂದಿನ ಪುಟದಿಂದ

ಮುಗಿಯುತಿದ್ದಂತೆಯೆ ಸಂತೋಷ ಕೂಟದ ಸಭೆಯನ್ನು ಏರ್ಪಡಿಸಿದರು. ಮತ್ತು ಆ ಸಭೆಯಲ್ಲಿ ಭಾಷಣದ ನಂತರ ಆಟೋಟ ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಬಹುಮಾನಗಳನ್ನು ವೇದಿಕೆಯಲ್ಲಿ ನೆರೆದಿದ್ದ ಎಲ್ಲಾ ಗಣ್ಯ ವ್ಯಕ್ತಿಗಳ ಹಸ್ತದಿಂದಲೂ ವಿತರಿಸಿದರು.

ಸಂತೋಷಕೂಟದ ಭೋಜನದ ನಂತರ ಅಲ್ಲಿ ನೆರೆದಿದ್ದ ಎಲ್ಲಾ ಉತ್ಸಾಹಿ ಜನರು ನಮ್ಮ ನಾಡ ಪದ್ಧತಿಯ ವಾಲಗಕ್ಕೆ ಲಯಬದ್ಧವಾಗಿ ಕುಣಿಯಲು ಪ್ರಾರಂಭಿಸಿದರು. ಹಾಗಾಗಿ ವ್ಯವಸ್ಥಾಪಕರು ಈ ಕುಣಿತ ಕುಣಿಯುವವರನ್ನು ನಾಲ್ಕು ಪಂಗಡಗಳಾಗಿ ಮಾಡಿ ಗಂಡಸರು (ಹಿರಿಯವರು, ಕಿರಿಯವರು) ಹೆಂಗಸರು. ಹಿರಿಯವರು, ಕಿರಿಯವರು. ಇವರಲ್ಲಿ Best Dancerಗಳಿಗೆ ಒಂದನೇ ಹಾಗೂ ಎರಡನೇ ಬಹುಮಾನವನ್ನು ಘೋಷಿಸಿ ಎಲ್ಲವರೂ ಸಂತೋಷದಿಂದ ಮನದಣಿಯುವಂತೆ ಕುಣಿದಾಡಲು ಅನುವು ಮಾಡಿಕೊಟ್ಟರು. ಹೀಗೆ ಸಂಜೆಯವರೆಗೂ ಕುಣಿಸಿ, ನಗಿಸಿ, ಹಾಸನದ ಕೈಲು ಮೂಹೂರ್ತ ಹಬ್ಬವನ್ನು ಚಿರಸ್ಮರಣೆಯಲ್ಲಿ ಉಳಿಯುವಂತೆ ಆಚರಿಸಿದರೆಂದರೆ ಅತಿಶಯೋಕ್ತಿಯಲ್ಲ.

ವರದಿ : ಶಂಕರನ ಬಸಪ್ಪ, ಸಂಗಾತಿ ಪ್ರತಿನಿಧಿ

15ನೇ ಪುಟದಿಂದ

ಕಂಡ್ "ನಮ್ಮ ರಾಜು ಅಣ್ಣಂಗೆ ಜಯ ಆಗಲಿ, ನಮ್ಮ ರಾಜು ಮಂಜ ಚಿರಾಯು ಆಗಲೀ. ನಮ್ಮ ಮಿ. ರಾಜು ನಮ್ಮ ಜನಕ್ಕೆ ಮಾದರಿ ಮನ್ಸನ್ಸಾಗಲೀ" ತ ಹೇಳಿಕಂಡ್ ಈ ಮಿ. ಧರ್ಮಪಾಲ್ ವೇಷದ ರಾಜಣ್ಣನ ಹೊತ್ತ್‌ಕಂಡ್ ಕೊಣ್ಡಾಡಿದೊ. ಇದರ ನೋಡ್ದ ಈ ಮೈಸೂರನ ನೆಂಟ್ರ್‌ಗಳಿಗೆ ಆಶ್ಚರ್ಯ ಆಗಿಹೋತ್. ನಮ್ಮ ಕಡೆ ಆಗಿದ್ರೆ ಮಾನ ಹೋದ್ರೂ ಪರ್ವಾಗಿಲ್ಲೆತಾ ನಾಚಿಕೆ ಬುಟ್ಟು ಆಒಂದ್ ಲಕ್ಷ ಹಣನ ಬುಡಿಕಿತ್ತಲೆ. ಅಥವಾ ವರದಕ್ಷಿಣೆ ಕೊಡ್ತ್‌ಲ್ಲೆತಾ ಹೇಳಿ ಮೂರು ತಿಂಗಳ ಒಳಗೆ ಸೊಸೆನ ಸೀಮೆಎಣ್ಣೆ ಸುರ್ದ್ ಬೆಂಕಿ ಹಚ್ಚಿಬುಟ್ಟವೆ. ನಮ್ಮಲ್ಲಿ ಬರೀ ಸ್ವಾರ್ಥ. ಬಡವರ ಸುಲಿಗೆ ಮೋಸದಿಂದ ಸಂಪಾದನೆ ಇಂತದೇ ನಮ್ಮ ಗುರಿ. ನಾವೆಲ್ಲಾ ಹಂದಿ ತರ ಕುಡ್ದ್ ತಿಂದ್ ತೇಗಿ ಮಜಾ ಮಡ್ವದೊಂದೇ ನಮ್ಮ ಗುರಿ. ಆದ್ರೇ ಈ ಕೊಡಗ್‌ಲಿ ಈ ಜನಕೆ ಮನುಷ್ಯರ ಮೇಲೆ ಅದೆಷ್ಟು ಅಭಿಮಾನ, ಅದೆಷ್ಟ್ ಆತ್ಮಿಯತೆಂದ ಪ್ರೀತಿಂದ ಬಡವು ಶ್ರೀಮಂತರ್‌ಗ ತ್ತೇಳುವ ಭೇದಭಾವನೆ ಇಲ್ಲದೆ ಹಿರಿಯವು ಕಿರಿಯವುತ್ತೇಳುವ ಜಂಭನ ತೋರ್‍ಸಿಕಣದೆ, ಎಷ್ಟೊಂದು ಖುಷೀಲಿ, ಸೋಷಿಯಲ್ ಆಗಿ ನಡಕಂಡವೆ. ಅಯ್ಯೋ ನಾವೆಲ್ಲಾ ಕಟುಕರು. ಇವರಸಂಸ್ಕೃತಿ ಮುಂದೆ ನಾವೆಲ್ಲಾ ಬಹಳ ಕೆಳಮಟ್ಟಲಿ ಒಳೊ. ಆದ್ರಂದಲೇ ನಾವೆಲ್ಲಾ ಇವರ ಮಂಜನ ಬೆನ್ನ್ ಹಿಂದೆ ಬಂದ್ ನಮ್ಮ ಸೇಡ್‌ನ ತೀರ್‍ಸಿಕಂಬಕೆ ಬಂದೋಳೊ. ನಾವೆಲ್ಲಾ ಮನುಷ್ಯತ್ವ ಅರಿತ್‌ಕಣದ ಮೂಢಜನತಾ ಗ್ಯಾನ ಮಾಡಿಕಂಡ್ ತಮ್ಮ ದುಷ್ಟಬುದ್ಧಿಗೆ ನಾಚಿಕೆ ಪಟ್ಟಕಂಡೊ.

(ಮುಂದಿನ ತಿಂಗ ಕೊನೆ ಹಂತ)

SAD DIMISE



ಅಚ್ಚುಡ ಬೀನಾ ಹರೀಶ್, ಎಂ.ಎ.
ಅಂಚೆ ಇಲಾಖೆ, ರಾಜಾಜಿನಗರ, ಬೆಗಳೂರು.
ಜನನ : 25-12-1973 ಮರಣ 23-7-2001

ನೀವು ಕಳೆದ ಜುಲೈ 23ರಂದು ಬೆಂಗಳೂರಿನ ಬಸವನಗುಡಿಯಲ್ಲಿ ರಸ್ತೆ ಅಪಘಾತದಲ್ಲಿ ದೈವಾಧೀನರಾದಾಗ, ನಮ್ಮ ದುಃಖದಲ್ಲಿ ಭಾಗಿಯಾಗಿ, ಬೆಂಗಳೂರಿನಲ್ಲಿ ಮತ್ತು ಪಾಲೂರಿನಲ್ಲಿ ಸಂತೈಸಿ, ಸಹಕರಿಸಿದ ಎಲ್ಲಾ ಬಂಧು ಮಿತ್ರರಿಗೂ ಹಾಗೂ ಅಂಚೆ ಇಲಾಖೆ, ಸಿಬ್ಬಂದಿಗಳಿಗೂ ನಮ್ಮ ಹೃದಯಪೂರ್ವಕ ಕೃತಜ್ಞತೆಗಳು.

ನಿಮ್ಮ ಕಾರ್ಯದಕ್ಷತೆ, ಗುರುಭಕ್ತಿ, ಸಮಯ ಪ್ರಜ್ಞೆ ಮತ್ತು ಕರುಣಾ ಹೃದಯ ನಮ್ಮ ಸಮಾಜದ ಯುವ ಪೀಳಿಗೆಯವರಿಗೆ ಮಾರ್ಗದರ್ಶಕವಾಗಿರಲೆಂದು ಆಶಿಸುತ್ತೇವೆ. ಹಾಗೂ ನಿಮ್ಮ ಆತ್ಮಕ್ಕೆ ಆ ಭಗವಂತನು ಅನುದಿನವು ಚಿರಶಾಂತಿಯನ್ನು ಕರುಣಿಸಿ ಆ ಧ್ರುವನಂತೆ ನಿಮಗೂ ಪ್ರತ್ಯೇಕ ಸ್ಥಾನ ಕಲ್ಪಿಸಲಿ ಎಂದು ಪ್ರಾರ್ಥಿಸುವ

ದುಃಖ ತಪ್ತ ಪತಿ : ಅಚ್ಚುಡ ಪೂವಯ್ಯ ಹರೀಶ್ ಕುಮಾರ್, ಬಿ.ಇ., ಎಂ.ಐ.ಇ.,
ಮಗಳು : ನಿಧಿ ಹರೀಶ್, ಕುಟುಂಬಸ್ಥರು ಹಾಗೂ ಅಪಾರ ಬಂಧು ಬಳಗದವರು.
ವಿಳಾಸ : ಎ. ಪಿ. ಹರೀಶ್‌ಕುಮಾರ್, ಪ್ರೊ. ಟೋ ಇಂಜಿನಿಯರಿಂಗ್ ಕೋ.
ನಂ. 72/1, ಮುನಿಯಪ್ಪ ಇಂಡಸ್ಟ್ರಿಯಲ್ ಕಾಂಪ್ಲೆಕ್ಸ್, ಟಿ.ವಿ.ಎಸ್. ಷೋರೂಂ ಹಿಂದೆ, ಜರಗನಹಳ್ಳಿ, ಕನಕಪುರ ಮೇನ್ ರೋಡ್, ಬೆಂಗಳೂರು - 560 078 ☎ : 0821 - 6558351 ಮೊಬೈಲ್ : 98441 - 33827

4ನೇ ವರ್ಷದ ಸ್ಮರಣೆ




ಕೊಡಗನ ಚಂದ್ರಮ್ಮ

ನೀನು ನೆನ್ನನ್ನಗಲಿ ನಾಲ್ಕು ವರ್ಷಗಳೆ ಕಳೆದರು ಸದ್ಧಾ ನಿನ್ನ ಒಡನಾಟದ ನೆನಪಿನಲ್ಲಿರುವ,

ಜನನ : 13-4-1943
ಮರಣ : 25-9-1997

ನಿನ್ನ ಪತಿ : ಎಂ. ರಾಮೇಗೌಡ,
ಮುಖ್ಯೋಪಾಧ್ಯಾಯರು, ವಿಶ್ವೇಶ್ವರಯ್ಯ ಪ್ರೌಢಶಾಲೆ,
ಕ್ಯಾತನಹಳ್ಳಿ, ಪಾಂಡವಪುರ ತಾ|| ಮಂಡ್ಯ ಜಿಲ್ಲೆ.
ವಿಳಾಸ : ನಂ. 251, ಹೆಬ್ಬಾಳ್ 1ನೇ ಫೇಸ್,
ಲೋಕನಾಯಕ ನಗರ, ಮೈಸೂರು - 570 016

ಚಿರಸ್ಮರಣೆ




ಚೇಯಪ್ಪನ ಪ್ರವೀಣ್ ಸೋಮಯ್ಯ
ಮರಣ : 29-9-1993

ನಮ್ಮ ಮುದ್ದಿನ ಪ್ರವೀಣ್,

ಅರುಳುವ ಮೊದಲೇ ಬಾಡಿಹೋದ ಹೂವಿನಂತೆ ಜೀವನದ ಸವಿಯನ್ನು ಅನುಭವಿಸುವ ಮೊದಲೇ ಆ ಭಗವಂತನಲ್ಲಿ ಐಕ್ಯವಾಗಿ ಎಂಟು ವರುಷಗಳು ಕಳೆಯಿತು. ನಿನ್ನ ಆತ್ಮಕ್ಕೆ ಆ ಭಗವಂತನು ಅನುದಿನವು ಚಿರಶಾಂತಿಯನ್ನು ಕರುಣಿಸಲೆಂದು ದಿನ ಬೇಡುತ್ತಾ ನಿನ್ನ ನೆನಪಿನಲ್ಲೇ ಇರುವ ನಿನ್ನ ಪ್ರೀತಿಯ,

ಅಮ್ಮ : **ಪುಷ್ಪಾವತಿ ಸೋಮಯ್ಯ**, ಅಣ್ಣ : **ಸತೀಶ್**
ಅಕ್ಕಂದಿರಾದ : **ಉಷ**, **ಯಶೋದರ** ಮತ್ತು **ಆಶಾ**, ಬಲಮುರಿ.
ವಿಳಾಸ : ಸಿ. ಎಸ್. ಅನುರಾಧ, ಹೋಟೆಲ್ ರಾಜ್‌ದರ್ಶನ್, ನಂ. 116/2,
ಎಂ. ಜಿ. ರೋಡ್, ಮಡಿಕೇರಿ - 571 201 ☎ : 29142

2ನೇ ವರ್ಷದ ಪುಣ್ಯ ಸ್ಮರಣೆ



ಬಿದ್ರುಪಣೆ ಎಂ. ಯಂಕಪ್ಪ, ಕಟ್ಟೆಮಾಡು
ಜನನ : 1927 ಮರಣ : 10-9-1999

ನೀವು ನಮ್ಮನ್ನು ಅಗಲಿ 10-9-2001 ಕ್ಕೆ 2 ವರ್ಷ ಸಂದರೂ ನಿಮ್ಮ ಸವಿ ನೆನಪು ಹಾಗೂ ನಿಮ್ಮ ಆಶೀರ್ವಾದಗಳು ನಮ್ಮಲ್ಲಿ ಸದಾ ಹಚ್ಚಹಸುರಾಗಿದೆ. ನಿಮ್ಮ ತ್ಯಾಗ, ಪ್ರೀತಿ, ವಾತ್ಸಲ್ಯಗಳಿಂದ ಕೂಡಿದ ಆದರ್ಶ ಜೀವನ ನಮಗೆ ಮಾರ್ಗದರ್ಶನವಾಗಿದೆ. ನಿಮ್ಮ ದಿವ್ಯಾತ್ಮಕ್ಕೆ ಆ ಭಗವಂತನು ಚಿರಶಾಂತಿ ಕರುಣಿಸಲೆಂದು ಮನಪೂರ್ವಕ ಪ್ರಾರ್ಥಿಸುವ,

ಪತ್ನಿ : ಜಾನಕಿ, ಮಕ್ಕಳು, ಅಳಿಯಂದಿರು, ಸೊಸೆಯಂದಿರು, ಮೊಮ್ಮಕ್ಕಳು, ಮರಿ ಮಕ್ಕಳು ಹಾಗೂ ಅಪಾರ ಬಂಧು ಬಳಗದವರು.

ಪ್ರಕಟಣೆ : ಬಿದ್ರುಪಣೆ ಕಮಲ ಜನಾರ್ಧನ, ಗೀತಾಕುಮಾರಿ
ಮೋಹನ್ ಕುಮಾರ್, ಮೈಸೂರು. ☎ : 415048

Reg. No. KA/SK/MYS-88 Registered : 10-01-96 TCI Kar. 09592

ರೋಟರಿ ಕ್ಲಬ್ ಮಡಿಕೇರಿ ಸನ್ಮಾನ ವಿಜೇತರು ಶ್ರೀಮತಿ ಕೆ. ಎಸ್. ಜಾನಕಿ

ಶ್ರೀಮತಿ ಕೆ. ಎಸ್. ಜಾನಕಿ ಶುಶ್ರೂಷಧೀಕ್ಷಕರು ದರ್ಜೆ - 2; ಜಿಲ್ಲಾ ಆಸ್ಪತ್ರೆ ಮಡಿಕೇರಿ.



ಇವರು ಶುಶ್ರೂಷಕಿ ಹುದ್ದೆಗೆ ದಿನಾಂಕ 29-08-68ರಲ್ಲಿ ಸೇರಿ ನಿಸ್ವಾರ್ಥವಾಗಿ ಕರ್ತವ್ಯವನ್ನು ನಿರ್ವಹಿಸಿದ್ದಕ್ಕೆ, ರೋಗಿಗಳ ಕುರಿತು ಅನುಕಂಪ ತಾಳಿ ಅವರ ಆರೋಗ್ಯದ ಆರೈಕೆಯನ್ನು ಮಾತೃ ಸ್ವರೂಪಿಯಾಗಿ ನಡೆಸಿಕೊಟ್ಟು ಅವರ ಅಭಿಮಾನ ಗಳಿಸಿ ಇಲಾಖೆಯ ಹಾಗೂ ಸಾರ್ವಜನಿಕರ ಮೆಚ್ಚುಗೆಗೆ ಪಾತ್ರರಾಗಿ, ಅರ್ಥಪೂರ್ಣ ಯಶಸ್ಸಿನೊಂದಿಗೆ 33 ವರ್ಷಗಳ ದೀರ್ಘ ಸೇವೆಯನ್ನು ಪರಿಗಣಿಸಿ ಇವರನ್ನು ದಿನಾಂಕ 10-08-2001ರ ಶುಕ್ರವಾರ ರೋಟರಿ ಜಿಲ್ಲಾ ರಾಜ್ಯಪಾಲ ಶ್ರೀ ಆರ್. ಕೃಷ್ಣರವರ ಸಮ್ಮುಖದಲ್ಲಿ ಹೋಟೆಲ್ ಕೂರ್ಗ್ ಇಂಟರ್‌ನ್ಯಾಷನಲ್‌ನಲ್ಲಿ ಇತ್ತೀಚೆಗೆ ಸನ್ಮಾನಿಸಲಾಯಿತು. ಇವರ ವೃತ್ತಿ ಜೀವನವು ಸುಖದ ಬೆಳದಿಂಗಳಾಗಲಿ ಎಂದು ಹಾರೈಸುವ

ಸರ್ಕಾರಿ ಆಸ್ಪತ್ರೆ ಸಿಬ್ಬಂದಿವರ್ಗ ಮತ್ತು ಶ್ರೀ ಅಮೆಮನೆ ನವೀನ್ S/o ಅಮೆ ದೇವಪ್ಪ,
ಪ್ರವಾಸಿ ಮಂದಿರದ ಹತ್ತಿರ, ಮೂರ್ನಾಡು ರಸ್ತೆ, ಮಡಿಕೇರಿ ☎ : 28613

ದಾಂಪತ್ಯ ಜೀವನಕ್ಕೆ ಶುಭ ಹಾರೈಕೆ

ಪಟ್ಟಡ ದೇವಯ್ಯ ಮತ್ತು ಪದ್ಮಾವತಿ ನೀವು ದಿನಾಂಕ 18-09-2001ಕ್ಕೆ ಏಳು ಸಂವತ್ಸರವನ್ನು ಕಂಡ ನಿಮ್ಮ ದಾಂಪತ್ಯ ಜೀವನಕ್ಕೆ ಶುಭಹಾರೈಕೆಗಳು

ಯಿಂದ : ಬೊಳ್ಳುರು ಕೆಂಚಪ್ಪ ಭಾಗೀರಥಿ, ಕೊಕ್ಕಲೆ ಮುತ್ತಪ್ಪ ರುಕ್ಮಿಣಿ, ಬೊಳ್ಳುರು ರಮೇಶ್ ಹರೀಶ್,
ಪ್ರೇಮಾ, ಕೃಷ್ಣ, ಕೊಕ್ಕಲೆ ಸೌಮ್ಯ, ಮೌಲಿ, ರಂಜನಿ, ವಿದ್ಯಾಶ್ರೀ

ಚೆಲುವನಾಡು ಕೊಡಗಿನ ತಲಕಾವೇರಿಯಲ್ಲಿ ತೀರ್ಥೋದ್ಭವ

2001, ಅಕ್ಟೋಬರ್ ತಿಂಗಳ 17ರ ಬುಧವಾರ ತುಲಾ ಸಂಕ್ರಮಣದಂದು ಶ್ರೀ ಕಾವೇರಿ ಮಾತೆಯೂ ಸಂಜೆ 6-58ಕ್ಕೆ ತುಲಾ ಲಗ್ನದಲ್ಲಿ ತೀರ್ಥರೂಪಿಣಿಯಾಗಿ ದರ್ಶನ ನೀಡಲಿದ್ದಾಳೆ.

ದ್ವಿತೀಯ ಬಾರಿಗೆ ಮೈಸೂರಿನ ಕೊಡಗು ಗೌಡ ವಿದ್ಯಾರ್ಥಿ ನಿಲಯದಲ್ಲಿ ಕಾವೇರಿ ತೀರ್ಥ ಮತ್ತು ಪ್ರಸಾದ ವಿತರಣೆ :

18-10-2001ರ ಗುರುವಾರ ದಿವಸ ಬೆಳಿಗ್ಗೆ 9-00 ಗಂಟೆಯಿಂದ ಸಂಜೆ 5-30ಗಂಟೆಯ ತನಕ ಶ್ರೀ ಕಾವೇರಿ ತೀರ್ಥ ಮತ್ತು ಪ್ರಸಾದವನ್ನು ಕೊಡಗು ಗೌಡ ವಿದ್ಯಾರ್ಥಿ ನಿಲಯದಲ್ಲಿ ವಿತರಿಸಲಾಗುವುದು. ಕೊಡಗಿನ ಸರ್ವ ಬಾಂಧವರು ಮತ್ತು ಸಾರ್ವಜನಿಕರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ದೈವ ಕೃಪೆಗೆ ಪಾತ್ರರಾಗಬೇಕಾಗಿ ವಿನಂತಿ. ಕಾವೇರಿ ಪೂಜೆ ಬೆಳಿಗ್ಗೆ 9-00ಕ್ಕೆ ಪ್ರಾರಂಭವಾಗುವುದು. ಮುಂದೆ ಪ್ರತಿ ವರ್ಷವೂ ವಿತರಿಸಲಾಗುವುದು

ಪ್ರಕಟಣೆ : ಅಧ್ಯಕ್ಷರು ಮತ್ತು ಕಾರ್ಯಕಾರಿ ಮಂಡಳಿ,
ಕೊಡಗು ಗೌಡ ಮಾಜಿ ಸೈನಿಕರ ಕ್ಷೇಮಾಭಿವೃದ್ಧಿ ಸಂಘ, ಮೈಸೂರು

ಸರ್ವರಿಗೂ ಸುಸ್ವಾಗತ



ಚಿರಸ್ಮರಣೆ

ದಿII ಸುಬೇದಾರ್ ಅಪ್ಪೈಯ್ಯಗೌಡರು, ಜನನ : (ಅಂದಾಜು) 1793. ಮರಣ : 31-10-1837

ಭವ್ಯ ಭಾರತದ ಇತಿಹಾಸದಲ್ಲಿ ಸ್ಮರಣೆಯಾಗ ಬೇಕಿದ್ದವರು. ಆದರೆ ಇಂದು......???

164 ವರ್ಷಗಳ ಹಿಂದೆ ಅಂದರೆ 31-10-1837 ರಂದು ಮಡಿಕೇರಿ ಕೋಟೆ ಆವರಣದಲ್ಲಿ ಸ್ಥಳೀಯರ ಮತ್ತು ಬ್ರಿಟಿಷರ ಕುತಂತ್ರದಿಂದ ಗಲ್ಲಿಗೇರಿದ ಸ್ವಾತಂತ್ರ್ಯ ಸಂಗ್ರಾಮದ ಹರಿಕಾರ, ಕ್ರಾಂತಿ ವೀರ, ಗೌಡರ ಗೌಡ, ಕೊಡಗಿನ ಸುಪುತ್ರ ದಿII ಸುಬೇದಾರ್ ಗುಡ್ಡೆಮನೆ ಅಪ್ಪೈಯ್ಯಗೌಡರು.

"ಇವರಿಗೆ ಹತ್ತು ಕುಟುಂಬ ಹದಿನೆಂಟು ಗೋತ್ರದ ಸಮಸ್ತ ಅರೆಭಾಷಿಕರ ಶ್ರದ್ಧಾಂಜಲಿಗಳು"

ಊಹಾ ಚಿತ್ರ : ಪಟ್ಟಡ ಪ್ರಭಾಕರ್, ಪ್ರಕಟಣೆ : ಕೊಡಗು ಸಂಗಾತಿ, ಮೈಸೂರು.

Kodagu Sangathi Kannada Fortnightly Edited, Published, Printed & Owned by Pattada P. Sheelamani, No. 35, Savitha Nilaya, I Cross, 4th Block, **Jayalaxmipuram, Mysore - 12.** And **SANGATHI** Office ☎ : **0821/516771.** And Printed at Sri Guru Raghavendra Printers, 489, Devamba Agrahara, K. R. Mohalla, Mysore - 24. ☎ : 0821/431792.